بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 05

ಸಂಚಿಕೆ: 04

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

25 ಜನವರಿ 2024, 25 ಸುಲಹ್ 1403 ಹಿಜರಿ ಶಮ್‌ಸಿ,
13 ರಜಬ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوا اسْتَجِيْبُوْا لِلّٰهِ وَلِلرَّسُوْلِ اِذَا دَعَاكُمْ لِمَا يُحْيِيْكُمْ (سورۃ الانفال:25)

(ಅಲ್ ಅನ್‌ಫಾಲ್: 25)

ಅಂದರೆ: ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಮತ್ತು ಸಂದೇಶವಾಹಕನಿಗೆ ಅವರು ನಿಮ್ಮನ್ನು ಬದುಕಿಸಲಿಕ್ಕಾಗಿ ಕರೆಯುವಾಗ ಓಗೊಡಿರಿ.

# ಅಹ್ಮದಿಯಾ ಜಮಾಅತಿನ ಕೇಂದ್ರ ಖಾದಿಯಾನ್ ದಾರುಲ್ ಅಮಾನ್‌ನಲ್ಲಿ 128ನೇ ಜಲ್ಸ ಸಾಲಾನ (ವಾರ್ಷಿಕ ಸಮ್ಮೇಳನ) ಅನುಗ್ರಹಪೂರ್ಣವಾದ ಯಶಸ್ವಿ ಆಯೋಜನೆ.

ಈ ಕಾಲಘಟ್ಟವು ವಾಗ್ದತ್ತ ಮಸೀಹನ ಆಗಮನದ ಕಾಲವಾಗಿದೆ. ಹಝ್‌ರತ್ ಅಖದಸ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ(ಅ) ಅವರೇ ಆ ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹದಿ ಆಗಿದ್ದಾರೆ. ಅವರ ಬರುವಿಕೆಯ ಭವಿಷ್ಯವಾಣಿಗಳು ಪವಿತ್ರ ಖುರ್‌ಆನ್‌ನ ಮತ್ತು ಹಝ್‌ರತ್ ಅಖದಸ್ ಮುಹಮ್ಮದ್ ಮುಸ್ತಫಾ(ಸ) ರವರು ನುಡಿದಿದ್ದರು.

ಎಲ್ಲಾ ದೇಶಗಳಲ್ಲಿ ಸಮ್ಮೇಳನಗಳ ನಿಯೋಜನೆ ಹಝ್‌ರತ್ ಮಸೀಹ್ ಮೌಊದ್(ಅ) ಅವರ ಹೆಸರು ಗೌರವ ಪಡೆದಿದ್ದು, ಅವರ(ಅ) ಪರವಾಗಿ ಮೂಡುವ ಘೋಷಣೆಗಳು ಇವೆಲ್ಲಾ ಅಲ್ಲಾಹನ ವಾಗ್ದಾನಗಳ ಪ್ರಕಾರವೇ ಆಗಿವೆ. ಅವರೆ ಆ ವಾಗ್ದತ್ತ ಮಸೀಹ್ ಆಗಿದ್ದಾರೆ, ಅದು ಅಲ್ಲಾಹನ ವಾಗ್ದಾನ ಪ್ರಕಾರ ಮತ್ತು ಹಝ್‌ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿಗಳ ಪ್ರಕಾರ ಅವರ(ಸ) ರವರ ಸೇವಕರಾಗಿ ಬಂದಿರುತ್ತಾರೆ.

ಖಾದಿಯಾನ್ ಗ್ರಾಮವು ನೂರು ನೂರ ಇಪ್ಪತ್ತೈದು ವರ್ಷಗಳ ಮುಂಚೆಯಿಂದ ಒಂದು ಸಾಧಾರಣ ಗ್ರಾಮವೇ ಆಗಿತ್ತು. ಅದೀಗ ಒಂದು ಸುಂದರ ನಗರದಂತೆ ಸುಸಜ್ಜಿತವಾಗಿದೆ. ಪ್ರಪಂಚದ ಮೂಲೆ ಮೂಲೆಯವರೆಗೆ ಅದು ಖ್ಯಾತಿ ಪಡೆದಿದೆ. ಈ ಖ್ಯಾತಿ ಹಝ್‌ರತ್ ಮಸೀಹ್ ಮೌಊದ್(ಅ) ರವರ ಹೆಸರಿನಿಂದಾಗಿದೆ, ಅವರು(ಅ) ಪಡೆದ ಅಲ್ಲಾಹನ ವಾಗ್ದಾನಗಳ ಕಾರಣದಿಂದಾಗಿ, ಇಂದು ಈ ಗ್ರಾಮದಲ್ಲಿ ಪ್ರಪಂಚದ ಹಲವು ನಿವಾಸಿಗಳು ಈ ಜಲ್ಸ ಸಾಲಾನ (ವಾರ್ಷಿಕ ಸಮ್ಮೇಳನ) ದಲ್ಲಿ ಭಾಗವಹಿಸಲು ಬಂದಿರುತ್ತಾರೆ.

ಮುಸಲ್ಮಾನರಿಗೆ ಇದು ಸಂತೋಷಪಡುವ ವಿಷಯವಾಗಿದೆ. ಆಗಮಿಸಬೇಕಾದ ಅ ಇಮಾಮ್ ಮಹದಿ, ವಾಗ್ದತ್ತ ಮಸೀಹ್ ಅವರಾಗಿದ್ದಾರೆ, ಅವರ ಆಗಮನದಿಂದ ಇಸ್ಲಾಮಿನ ಪುನರುತ್ಥಾನದ ಹೊಸ ಯುಗ ಪ್ರಾರಂಭವಾಗಿದೆ. ತಮ್ಮ ದೌರ್ಬಲ್ಯತೆಗಳನ್ನು ಹೋಗಲಾಡಿಸಿಕೊಳ್ಳುವ ಕಾಲ ಬಂದಿದೆ ಮತ್ತು ಇಸ್ಲಾಮಿನ ಪ್ರಚಾರ ಹಾಗೂ ಪ್ರಕಾಶದ ಕಾಲ ಬಂದಿದೆ, ಆದರೆ ನಾಮಧಾರಿ ಉಲಮಾಅಗಳ ಸ್ವಾರ್ಥ ಹಿತಾಸಕ್ತಿಯಿಂದ ಮುಸ್ಲಿಮ್ ಜನಾಂಗವನ್ನು ತಪ್ಪು ದಾರಿಗೆ ಎಳೆಯಲು ಪ್ರಯತ್ನಿಸುತ್ತಿದ್ದಾರೆ. ಆದರೆ ಇದು ಕೂಡ ಅಲ್ಲಾಹನ ವಾಗ್ದಾನವಿದೆ. ಒಂದು ಸಮಯ ಬರುವುದು ಅಂತಿಮವಾಗಿ ಅವರು ಮನ್ನಿಸುವರು.

**MTA International ಮೂಲಕ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ(ಅಬಿಅ) ರ ಇಸ್ಲಾಮಾಬಾದ್, ಯು.ಕೆ ಯಿಂದ ಜಲ್ಸದಲ್ಲಿ ಉಪಸ್ಥಿತರಿದ್ದವರೊಂದಿಗೆ ಸಂಬೋಧಿಸಿ ಮಾತನಾಡಿರುವ ಸಮಾರೋಪ ಸಮಾರಂಭ.**

* ಮೂರು ದಿನಗಳ ಕಾಲ ಜಲ್ಸಾ ಕಾರ್ಯಕ್ರಮಗಳ ಲೈವ್ ಸ್ಟ್ರೀಮಿಂಗ್ ಮತ್ತು ಅದರ ಮೂಲಕ ದೇಶದ ಹೊರಗೆ ಒಳಗೆ ವ್ಯಾಪಕ ಬಳಕೆ. * ಲೈವ್ ಸ್ಟ್ರೀಮಿಂಗ್ ಮೂಲಕ ಒಂದು ಲಕ್ಷದ ಹದಿನಾರು ಸಾವಿರದ ನಾನೂರು ಜನರು ಜಲ್ಸಾ ಪ್ರಕ್ರಿಯೆಗಳನ್ನು ವೀಕ್ಷಿಸಿದರು ಮತ್ತು ಆಲಿಸಿದರು. * 14930 ಅಹ್ಮದಿಯ ಬಂಧುಗಳ ಜಲ್ಸದಲ್ಲಿ ಭಾಗವಹಿಸುವಿಕೆ * 42 ದೇಶಗಳ ಪ್ರತಿನಿಧಿತ್ವ, * ಕೆಲವು ಆಫ್ರಿಕನ್ ದೇಶಗಳ ಜಲ್ಸದಲ್ಲಿ ಅವರ ಭಾಗವಹಿಸುವಿಕೆ ಮತ್ತು ಸಮಾರೋಪ ಭಾಷಣದಲ್ಲಿ ಇಸ್ಲಾಮಾಬಾದ್ ಯು.ಕೆ ಜಮಾಅತ್‌ನ ಸ್ನೇಹಿತರ ಸಭೆ, * ನಮಾಝೆ ತಹಜ್ಜುದ್. * ದರ್ಸುಲ್ ಖುರ್‌ಆನ್ ಮತ್ತು ಅಲ್ಲಾಹನ ಸ್ಮರಣೆಯ ವಾತಾವರಣ, * ಉಲಮಾಗಳ ಭಾಷಣಗಳು, * ಪೂರ್ಣ 9 ಭಾಷೆಗಳಲ್ಲಿ ಕಾರ್ಯಕ್ರಮಗಳ ಅನುವಾದ, * ಜಮಾಅತ್ ಬಾಂಧವರ ಜ್ಞಾನವನ್ನು ಹೆಚ್ಚಿಸಲು ತರಬೇತಿ ಸಮಸ್ಯೆಗಳನ್ನು ಒಳಗೊಂಡ ಸಾಕ್ಷ್ಯ ಚಿತ್ರಗಳು ಮತ್ತು ವಿವಿಧ ಮಾಹಿತಿ ಪ್ರದರ್ಶನಗಳ ಸಂಘಟನೆ, * ನಿಕಾಹ್‌ಗಳ ಘೋಷಣೆಗಳು, * ಪ್ರಿಂಟ್ ಮಾಧ್ಯಮ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮಗಳಿಂದ ಜಲ್ಸದ ಪ್ರಚಾರ, * ಶಾಂತಿಯುತ ಮತ್ತು ಅಹ್ಲಾದಕರ ವಾತಾವರಣದಲ್ಲಿ ಜಲ್ಸದ ಎಲ್ಲಾ ಪ್ರಕ್ರಿಯೆಗಳು ಮುಕ್ತಾಯಗೊಂಡವು. **(ಮನ್ಸೂರ್ ಅಹ್ಮದ್ ಮಸ್ರೂರ್, ವರದಿಗಾರರು)**.

ಅಲ್‌ಹಮ್ದುಲಿಲ್ಲಾಹ್! ಜಲ್ಸ ಸಾಲಾನ ಖಾದಿಯಾನ್, ಬುಸ್ತಾನ್ ಅಹ್ಮದ್‌ನ ವಿಶಾಲವಾದ ಜಾಗದಲ್ಲಿ ದಿನಾಂಕ 29, 30, 31 ಡಿಸೆಂಬರ್ 2023 ಶುಕ್ರವಾರ, ಶನಿವಾರ, ರವಿವಾರ ಆಯೋಜನೆಗೊಂಡು ಶಾಂತಿ ಸುವ್ಯವಸ್ಥಿತವಾಗಿ ನಡೆದು ಮುಕ್ತಾಯಗೊಂಡಿತು. ದೇಶದ ಮೂಲೆ ಮೂಲೆಯಿಂದ ಅಹ್ಮದಿಯತ್ತಿನ ಪ್ರೇಮಿಗಳು ತುಂಬುತ್ಸಾಹದಿಂದ ಜಲ್ಸದಲ್ಲಿ ಭಾಗವಹಿಸಲು ಬರತೊಡಗಿದರು. ಜಲ್ಸದ ದಿನಗಳು ಸಮೀಪ ಬರುತ್ತಿದ್ದಂತೆ ಖಾದಿಯಾನ್ ದಾರುಲ್ ಅಮನ್‌ನ ಸೌಂದರ್ಯ ಹೆಚ್ಚುತ್ತಾ ಹೋಗುತ್ತಿತ್ತು. ಹೀಗೆ ಅಂತಿಮವಗಿ ಖಾದಿಯಾನ್ ಅತಿಥಿಗಳಿಂದ ತುಂಬಿ ಹೋಯಿತು. ಎಲ್ಲಿ ನೋಡಿದರೂ, ಎಲ್ಲಿ ಹೋದರೂ ಹಝ್‌ರತ್ ಮಸೀಹ್ ಮೌಊದ್(ಅ) ಅವರ ಅತಿಥಿಗಳೇ ಕಾಣುತ್ತಿದ್ದವು. ವಿದೇಶಗಳಿಂದಲೂ ದೊಡ್ಡ ಸಂಖ್ಯೆಯಲ್ಲಿ ಅಹ್ಮದಿಯಾ ಪ್ರೇಮಿಗಳು ಭಾಗವಹಿಸಿದ್ದರು. ಖಾದಿಯಾನ್ ದಾರುಲ್ ಅಮಾನ್ ಎಂಬ ಪ್ರಿಯ ಗ್ರಾಮವು ಮತ್ತೊಮ್ಮೆ ಸಂತೋಷ ಹಾಗೂ ಸಂಭ್ರಮದಿಂದ ಕೂಡಿತ್ತು. ಅತಿಥಿಗಳ ಆಗಮನಕ್ಕಿಂತ ಮುಂಚಿತವಾಗಿಯೇ ವಿದ್ಯುತ್ ವಿಭಾಗದಿಂದ ಮೊಹಲ್ಲದ ಎಲ್ಲಾ ಬೀದಿಗಳಲ್ಲಿ ಮತ್ತು ರಸ್ತೆಗಳಲ್ಲಿ ಖಿಣಭಜ ಖುಝಣ ಗಳಿಂದ ಬೆಳಗಿಸಲಾಗಿತ್ತು. ಬಿಹಿಷ್ತಿ ಮಖ್ಬರ, ದಾರುಲ್ ಮಸೀಹ್, ಮಸ್ಜಿದ್ ಮುಬಾರಕ್, ಮಸ್ಜಿದ್ ಅಖ್ಸಾ, ಮತ್ತು ಮಿನಾರತುಲ್ ಮಸೀಹ್ ಅನ್ನು ಸಣ್ಣ ಸಣ್ಣ ಮತ್ತು ಬಣ್ಬಣ್ಣ ಬಣ್ಣದ ವಿದ್ಯುತ್ ಬಲ್ಬ್‌ಗಳಿಂದ ಮದುಮಗಳಂತೆ ಶೃಂಗರಿಸಲಾಗಿತ್ತು. ಹೀಗೆ ಮಸೀಹ್ ಮೌಊದ್, ಮಹದಿ ಮೌಊದ್(ಅ)ರ ಈ ಆಧ್ಯಾತ್ಮಿಕ ಗ್ರಮ ತನ್ನ ಅಂತರಂಗದ ಪ್ರಕಾಶವಲ್ಲದೆ ಬಹಿರಂಗವಾಗಿಯೂ ಪ್ರಕಾಶಮಯವಾಗಿತ್ತು.

**(ಮುಂದುವರಿಯುವುದು)**

## ಖುತ್‌ಬ ಜುಮುಅ

ಹಝ್ರ‌ರತ್ ಪೈಗಂಬರ್(ಸ) ನಮ್ರತೆ ಮತ್ತು ವಿನಯದೊಂದಿಗೆ ಅಲ್ಲಾಹನ ಸನ್ನಿಧಿಯಲ್ಲಿ ದುಆಗಳನ್ನು ಮಾಡುತ್ತಿದ್ದರು.

ಹಝ್ರ‌ರತ್ ಪೈಗಂಬರ್(ಸ)ರ ಈ ಯುದ್ಧ ತಂತ್ರ ಎಷ್ಟು ಉತ್ತಮ ಮತ್ತು ಶ್ರೇಷ್ಠವಾಗಿತ್ತು ಎಂದರೆ, ಇದರಿಂದ ಹಝ್ರ‌ರತ್ ಪೈಗಂಬರ್(ಸ)ರಿಗೆ ಸೇನೆಯನ್ನು ಮುನ್ನಡೆಸಲು ಇದ್ದ ಅಸಾಧಾರಣವಾದ ಸಾಮರ್ಥ್ಯದ ಬಗ್ಗೆ ತಿಳಿದುಬರುತ್ತದೆ ಹಾಗೂ ಒಬ್ಬ ಸೇನಾಧಿಪತಿ ಎಷ್ಟೇ ಬುದ್ಧಿವಂತನಾಗಿದ್ದರೂ ಕೂಡ ಹಝ್ರ‌ರತ್ ಪೈಗಂಬರ್(ಸ)ರಿಗಿಂತ ಹೆಚ್ಚು ಸೂಕ್ಷ್ಮ, ಉತ್ತಮ ಮತ್ತು ಯುಕ್ತಿಯಿಂದ ಕೂಡಿದ ಯುದ್ಧತಂತ್ರವನ್ನು ರಚಿಸಲು ಸಾಧ್ಯವಲ್ಲ ಎಂದು ಸಾಬೀತಾಗುತ್ತದೆ.

ಹಝ್ರ‌ರತ್ ಪೈಗಂಬರ್(ಸ) ಹೇಳಿದರು: ಪ್ರತಿಯೊಬ್ಬ ಪ್ರವಾದಿಗೂ ಒಬ್ಬ ಅನುಯಾಯಿ ಇರುತ್ತಾನೆ, ನನ್ನ ಅನುಯಾಯಿ ಝುಬೈರ್ ಆಗಿದ್ದಾನೆ.

**ಉಹದ್ ಯುದ್ಧದಲ್ಲಿ ಸಂಭವಿಸಿದ ಘಟನೆಗಳ ವಿವರಾತ್ಮಕ ಪ್ರಸ್ತಾವನೆ ಹಾಗೂ ಫೆಲಸ್ತೀನಿನಲ್ಲಿ ಹಿಂಸೆಗೆ ಒಳಗಾಗಿರುವರಿಗೆ ದುಆ ಮಾಡಲು ಮನವಿ**

ಮುಶ್ರಿಕೀನರ ಧ್ವಜವಾಹಕನ ಹತ್ಯೆಯು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ "ನಾನು ಆಡಿನ ಹಿಂಭಾಗದಲ್ಲಿ ಸವರಿ ಮಾಡಿದ್ದೇನೆ" ಎಂಬ ಕನಸ್ಸಿನ ದೃಢೀಕರಣವಾಗಿದೆ.

ಪೆಲಸ್ತೀನಿಯರಿಗಾಗಿಯೂ ದುಆಗಳನ್ನು ಮಾಡುತ್ತಿರಿ. ದಿನೇ ದಿನೇ ದೌರ್ಜನ್ಯಗಳು ಮಿತಿಮೀರುತ್ತಾ ಹೋಗುತ್ತಿವೆ ಮತ್ತು ವರ್ಧಿಸುತ್ತಿವೆ. ಅಲ್ಲಾಹನು ಇನ್ನು ದೌರ್ಜನ್ಯಗಾರರನ್ನು ಹಿಡಿಗೂಡಲಿ. ಪೀಡಿತ ಪೆಲಸ್ತೀನಿಯರು ನಿಟ್ಟುಸಿರು ಬಿಡುವಂತಾಗಲಿ. ಮುಸ್ಲಿಮ್ ರಾಷ್ಟ್ರಗಳಿಗೂ ಬುದ್ಧಿ ಮತ್ತು ವಿವೇಕವನ್ನು ನೀಡಲಿ. ಅವರ ದನಿ ಒಂದಾಗಲಿ ಮತ್ತು ಅವರು ಮುಸ್ಲಿಂ ಸಹೋದರರ ಹಕ್ಕುಗಳನ್ನು ಈಡೇರಿಸಲು ಪ್ರಯತ್ನಿಸುವವರಾಗಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **15–12–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರ‌ರತ್ ಪೈಗಂಬರ್(ಸ)ರ ಜೀವನಚರಿತ್ರೆಗೆ ಸಂಬಂಧಪಟ್ಟು ಬದ್ರ್ ಯುದ್ಧದ ಪ್ರಸ್ತಾಪ ನಡೆಯುತ್ತಿತ್ತು. ಅದರ ಇನ್ನಷ್ಟು ವಿವರಣೆ ಹೀಗಿದೆ: ಹಝ್ರ‌ರತ್ ಪೈಗಂಬರ್(ಸ) ಉಹದ್ ಮೈದಾನದಲ್ಲಿ ತಂಗಿದರು. ಮುಸ್ಲಿಂ ಸೇನೆಯ ಹಿಂಭಾಗದ ಒಂದೆಡೆ ಉಹದ್ ಪರ್ವತವಿತ್ತು. ಈ ಕಾರಣದಿಂದ ಹಿಂದಿನಿಂದ ಆಗುವ ದಾಳಿಯಿಂದ ಮುಸ್ಲಿಂ ಸೇನೆ ಸುರಕ್ಷಿತವಾಗಿತ್ತು. ಆದರೆ ಒಂದೆಡೆ ಪರ್ವತ ಮಾರ್ಗವಿತ್ತು. (ಮೌಂಟೇನ್ ಪಾಸ್). ಆ ಮಾರ್ಗವಾಗಿ ಶತ್ರುಗಳು ಆಕ್ರಮಣ ನಡೆಸಬಹುದಾಗಿತ್ತು. ಆದ್ದರಿಂದ ಹಝ್ರ‌ರತ್ ಪೈಗಂಬರ್(ಸ) ಈ ಸೂಕ್ಷ್ಮ ಸ್ಥಿತಿ ಮತ್ತು ಅಪಾಯವನ್ನು ಅರಿತುಕೊಂಡು ಬಿಲ್ಲುಗಾರರಾದ ಐವತ್ತು ಸಹಾಬಿಯರ ಒಂದು ತುಕಡಿಯನ್ನು ಹಝ್ರ‌ರತ್ ಅಬ್ದುಲ್ಲಾಹ್ ಬಿನ್ ಜುಬೈರ್(ರ)ರ ನೇತೃತ್ವದಲ್ಲಿ ಆ ಕಣಿವೆಯಲ್ಲಿ ನೇಮಿಸಿದರು.

(ಸೀರತ್ ಖಾತಮನ್ನಬೀಈನ್(ಸ), ಹಝ್ರ‌ರತ್ ಸಾಹಿಬ್ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–487)

ಈ ಬಿಲ್ಲುಗಾರರಿಗೆ ಹಝ್ರ‌ರತ್ ಪೈಗಂಬರ್(ಸ) ಹೀಗೆ ನಿರ್ದೇಶನ ನೀಡಿದ್ದರು ಇದರ ಬಗ್ಗೆ ಬುಖಾರಿಯಲ್ಲಿ ಹೀಗೆ ಹೇಳಲಾಗಿದೆ: **ಇನ್ ರೈತುಮೂನಾ ತಖ್ತಫುನಾತ್ತೈರು ಫಲಾ ತಬ್ರಹೂ ಮಕಾನಕುಮ್ ಹಾಝಾ ಹತ್ತಾ ಅರ್‌ಸಿಲ ಇಲೈಕುಮ್ ವ ಇನ್ ರಅಯ್‌ತುಮೂನಾ ಹಝುಮ್‌ನಾಲ್ಕೌಮ ವ ಔ ತಾನಾಹುಮ್ ಫಲಾ ತಬ್ರಹೂ ಹತ್ತಾ ಅರ್‌ಸಿಲ ಇಲೈಕುಮ್**– ಅಂದರೆ: ನಮ್ಮನ್ನು ಹದ್ದುಗಳು ಹೆಕ್ಕಿಕೊಂಡು ಹೋಗುವುದಾಗಿ ನೀವು ಕಂಡರೂ ಅಥವಾ ನಾವು ಶತ್ರು ಸೇನೆಯನ್ನು ಸೋಲಿಸಿದ್ದಾಗಿ ಮತ್ತು ನಾಶಮಾಡಿದ್ದಾಗಿ ನೋಡಿದ್ದರೂ ಕೂಡ ನನ್ನ ಸಂದೇಶ ನಿಮಗೆ ಲಭಿಸುವ ತನಕ ಖಂಡಿತವಾಗಿಯೂ ನೀವು ನಿಮ್ಮ ಜಾಗವನ್ನು ತೊರೆಯಬಾರದು.

(ಸಹೀಹ್ ಬುಖಾರಿ ಕಿತಾಬುಲ್ ಜಿಹಾದ್ ವಸ್ಸೈರ್, ವರದಿ ಸಂಖ್ಯೆ–3039)

ಬುಖಾರಿಯ ಮತ್ತೊಂದು ವರದಿ ಇದೆ: ಹಝ್ರ‌ರತ್ ಪೈಗಂಬರ್(ಸ) ಹೇಳಿದರು: ನಾವು ಅವರನ್ನು ಸೋಲಿಸುವುದನ್ನು ನೀವು ನೋಡಿದಾಗ ಮತ್ತು ನಾವು ಅವರ ಸೈನ್ಯವನ್ನು ಪ್ರವೇಶಿಸಿದಾಗ, ನಿಮ್ಮ ಸ್ಥಳದಿಂದ ನೀವು ಕದಲಬೇಡಿ ಮತ್ತು ನಾವು ಕೊಲ್ಲಲ್ಪಡುತ್ತಿರುವುದಾಗಿ ನೋಡಿದರೆ, ನೀವು ನಮಗೆ ಸಹಾಯ ನೀಡಲು ಮತ್ತು ನಮ್ಮನ್ನು ರಕ್ಷಿಸಲು ಮುಂದೆ ಬರಬೇಡಿ. (ಸಹೀಹ್ ಬುಖಾರಿ, ಕಿತಾಬ್ ಅಲ್–ಮಗಾಜಿ, ಅಧ್ಯಾಯ ಘಜ್ವಾ, ಉಹದ್ ಹದೀಸ್–4043) ನೀವು ಯಾವುದೇ ಸಂದರ್ಭದಲ್ಲೂ ನೀವು ನಿಮ್ಮ ಜಾಗವನ್ನು ಬಿಟ್ಟು ಸರಿಯಬಾರದು.

ಹಝ್ರ‌ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ಒಬ್ಬ ಚರಿತ್ರೆಗಾರ ಬರೆಯುತ್ತಾರೆ: ಶತ್ರುಗಳು ನಮ್ಮ ಹಿಂದಿನಿಂದ ದಾಳಿ ಮಾಡದೇ ಇರಲಿಕ್ಕಾಗಿ ನೀವು ಅವರ ಕುದುರೆಸವಾರರ ಸಂಘವನ್ನು ನಮ್ಮಿಂದ ದೂರ ಇರಿಸಿರಿ. ನಾವು ಜಯಗಳಿಸಿದರೆ, ಅವರು ನಮ್ಮ ಹಿಂದೆಯಿಂದ ಅಕ್ರಮಣ ಮಾಡದಿರಲಿ ಎಂದು ನೀವು ನಿಮ್ಮ ಸ್ಥಳದಲ್ಲಿಯೇ ಸ್ಥಿರವಾಗಿ ನಿಲ್ಲಿರಿ, ನೀವು ನಿಮ್ಮ ಸ್ಥಾನದಲ್ಲಿ ಸ್ಥಿರವಾಗಿ ನಿಂತಿರಬೇಕು ಅಲ್ಲಿಂದ ಸರಿಯಬೇಡಿ. ಮತ್ತು ನಾವು ಅವರನ್ನು ಸೋಲಿಸುವುದನ್ನು ನೀವು ನೋಡಿದಾಗ ಮತ್ತು ನಾವು ಅವರ ಸೈನ್ಯವನ್ನು ಪ್ರವೇಶಿಸಿದಾಗ, ನಿಮ್ಮ ಸ್ಥಳದಿಂದ ನೀವು ಕದಲಬೇಡಿ ಮತ್ತು ನಾವು ಕೊಲ್ಲಲ್ಪಡುತ್ತಿರುವುದಾಗಿ ನೋಡಿದರೆ, ನೀವು ನಮಗೆ ಸಹಾಯ ನೀಡಲು ಮತ್ತು ನಮ್ಮನ್ನು ರಕ್ಷಿಸಲು ಮುಂದೆ ಬರಬೇಡಿ ಮತ್ತು ನೀವು ಅವರನ್ನು ಬಾಣಗಳಿಂದ ಹೊಡೆಯಿರಿ ಏಕೆಂದರೆ ಕುದುರೆಗಳು ಬಾಣಗಳ ಕಾರಣದಿಂದಾಗಿ ಮುಂದೆ ಸಾಗುವುದಿಲ್ಲ. ನೀವು ನಿಮ್ಮ ಜಾಗದಲ್ಲಿ ಇರುವ ವರೆಗೂ ನಾವು ಶತ್ರುಗಳ ಮೇಲೆ ಜಯಶಾಲಿಯಾಗಿರುವೆವು. ಅನಂತರ ಹೀಗೆ ಹೇಳಿದರು: ಹೇ ಅಲ್ಲಾಹ್, ನಾನು ನಿನ್ನನ್ನು ಇವರ ಮೇಲೆ ಸಾಕ್ಷಿಯನ್ನಾಗಿ ಮಾಡುತ್ತೇನೆ. (ಸಬ್ಲುಲ್ ಹುದಾ ವರ್‌ರಶ್ಶಾದ್, ಸಂಪುಟ–4, ಪುಟ–190, ದಾರುಲ್ ಕುತುಬ್ ಅಲ್‌ಇಲ್ಮೀಯ ಬೈರುತ್)

ಒಬ್ಬ ಲೇಖಕರು ಬರೆದಿದ್ದಾರೆ: ಹಝ್ರ‌ರತ್ ಪೈಗಂಬರ್(ಸ) ರವರು ಈ ಸಂದರ್ಭದಲ್ಲಿ ಹೀಗೆ ಹೇಳಿದರು: ನೀವು ನಮ್ಮನ್ನು ನಾವು ಯುದ್ಧ ಸಂಪತ್ತನ್ನು ಸಂಗ್ರಹಿವುದಾಗಿ ನೋಡಿದರೂ ನೀವು ನಮ್ಮೊಂದಿಗೆ ಸೇರಬೇಡಿ. ಎಲ್ಲಾ ಸಂದರ್ಭಗಳಲ್ಲಿಯೂ ನಮ್ಮನ್ನು ರಕ್ಷಿಸಿರಿ. (ಸೀರತ್ ಇನ್ಸೈಕ್ಲೊಪೀಡಿಯಾ, ಸಂಪುಟ–6, ಪುಟ–231 ದಾರುಸ್ಸಲಾಮ್)

ಜೀವನಚರಿತ್ರೆಗಾರರೊಬ್ಬರು ಐವತ್ತು ಬಿಲ್ಲುಗಾರರನ್ನು ಉಲ್ಲೇಖಿಸುತ್ತಾ ಬರೆಯುತ್ತಾರೆ: ಯುದ್ಧ ಕ್ಷೇತ್ರವನ್ನು ನೋಡಲು ಮತ್ತು ಕಿನಾತ್ ಕಣಿವೆಯ ಅಂಚಿನಲ್ಲಿರುವ ಜಬ್ಲುಲ್ ರಿಮಾತ್ ಬಗ್ಗೆ ತಿಳಿದುಕೊಳ್ಳಲು ಅವಕಾಶವನ್ನು ಪಡೆದ ವ್ಯಕ್ತಿಯನ್ನು ಹಝ್ರ‌ರತ್ ಪೈಗಂಬರ್(ಸ) ಅವರ ಮಹಾನ್ ಸೈನಿಕ ಅನುಭವದ ಬಗ್ಗೆ ತಿಳಿಯುತ್ತದೆ, ಇದರಿಂದ ಹಝ್ರ‌ರತ್ ಪೈಗಂಬರ್(ಸ) ಅವರು ಯುದ್ಧಗಳ ಯೋಜನೆಯನ್ನು ರೂಪಿಸುವುದರಲ್ಲಿ ಮತ್ತು ಸೈನಿಕ ಪಡೆಗಳ ಸಂಘಟನೆಯ ವ್ಯಾಪಕ ಕೌಶಲ್ಯ ಮತ್ತು ತಯಾರಿಯಲ್ಲಿ ಯುದ್ಧವನ್ನು ಗೆಲ್ಲಲು ಪ್ರಮುಖ ಅವಕಾಶಗಳ ಆಯ್ಕೆಯು ಅವಶ್ಯಕ ಎಂದು ಗುರುತಿಸಿಕೊಂಡರು. (ನಫೀಸ್ ಅಕಾಡೆಮಿ ಕರಾಚಿಯಿಂದ ಪ್ರಕಟವಾದ ಮುಹಮ್ಮದ್ ಅಹ್ಮದ್ ಬಾಶ್ಮಾಯಿಲ್ ಪು. 101–102 ರಿಂದ ಗಜ್ವಾಹ್ ಉಹದ್)

ಒಬ್ಬ ಲೇಖಕ ಹೀಗೆ ಬರೆದಿರುವರು: ಹಝ್ರ‌ರತ್ ಪೈಗಂಬರ್(ಸ)ರ ಈ ಯುದ್ಧ ತಂತ್ರ ಎಷ್ಟು ಉತ್ತಮ ಮತ್ತು ಶ್ರೇಷ್ಠವಾಗಿತ್ತು ಎಂದರೆ, ಇದರಿಂದ ಹಝ್ರ‌ರತ್ ಪೈಗಂಬರ್(ಸ)ರಿಗೆ ಸೇನೆಯನ್ನು ಮುನ್ನಡೆಸಲು ಇದ್ದ ಅಸಾಧಾರಣವಾದ ಸಾಮರ್ಥ್ಯದ ಬಗ್ಗೆ ತಿಳಿದುಬರುತ್ತದೆ ಹಾಗೂ ಒಬ್ಬ ಸೇನಾಧಿಪತಿ ಎಷ್ಟೇ ಬುದ್ಧಿವಂತನಾಗಿದ್ದರೂ ಕೂಡ ಹಝ್ರ‌ರತ್ ಪೈಗಂಬರ್(ಸ)ರಿಗಿಂತ ಹೆಚ್ಚು ಸೂಕ್ಷ್ಮ, ಉತ್ತಮ ಮತ್ತು ಯುಕ್ತಿಯಿಂದ ಕೂಡಿದ ಯುದ್ಧತಂತ್ರವನ್ನು ರಚಿಸಲು ಸಾಧ್ಯವಲ್ಲ ಎಂದು ಸಾಬೀತಾಗುತ್ತದೆ. ಏಕೆಂದರೆ ಹಝ್ರ‌ರತ್ ಪೈಗಂಬರ್(ಸ)ರವರು ಶತ್ರುಗಳ ನಂತರ ಉಹುದ್ ಕ್ಷೇತ್ರದಲ್ಲಿ ಇಳಿದಿದ್ದರು ಆದರೆ ಅವರು(ಸ) ತಮ್ಮ ಸೈನ್ಯಕ್ಕಾಗಿ ಮುನ್ನಡೆಸಲು ಯುದ್ಧದ ದೃಷ್ಟಿಯಿಂದ ಅವರು ಯುದ್ಧಭೂಮಿಗಳಲ್ಲಿ ಅತ್ಯುತ್ತಮವಾದ ಸ್ಥಳವನ್ನು ಆರಿಸಿಕೊಂಡರು.

ಹಝ್ರ‌ರತ್ ಪೈಗಂಬರ್(ಸ) ಅವರು ಪರ್ವತದ ಎತ್ತರವನ್ನು ತೆಗೆದುಕೊಂಡು ತಮ್ಮ ಹಿಂಭಾಗ (ಬೆನ್ನು) ಮತ್ತು ಬಲಗೈಯನ್ನು ರಕ್ಷಿಸಿಕೊಂಡರು ಮತ್ತು ಎಡಭಾಗದಿಂದ ಒಂದು ಕಣಿವೆಯನ್ನು ಅಂದರೆ, ಶತ್ರುಗಳು ಅದರಿಂದ ಧಾವಿಸಿ ಇಸ್ಲಾಮಿನ ಸೈನ್ಯಕ್ಕೆ ಹಿಂಭಾಗದಿಂದ ತಲುಪುವ ಮಾರ್ಗವಾಗಿತ್ತು ಅದನ್ನು ಅವರು ಬಿಲ್ಲುಗಾರರಿಂದ ಮುಚ್ಚಲ್ಪಟ್ಟಿದ್ದರು ಮತ್ತು ತಂಗುವುದಕ್ಕಾಗಿ ಮೈದಾನಕ್ಕಿಂತ ಸ್ವಲ್ಪ ಎತ್ತರದ ಸ್ಥಳವನ್ನು ಆರಿಸಿಕೊಂಡಿದ್ದರು, ಆದ್ದರಿಂದ ಒಂದುವೇಳೆ ಅಲ್ಲಾಹನು ಬಯಸಿದ್ದಲ್ಲಿ ಒಂದುವೇಳೆ ಸೋಲಿನ ಸಂದರ್ಭದಲ್ಲಿ ಓಡಿಹೋಗುವ ಮತ್ತು ಹಿಂಬಾಲಿಸುವವರಿಂದ ಸೆರೆಹಿಡಿಯಲ್ಪಡುವ ಬದಲು ಇಸ್ಲಾಮಿಕ್ ಸೈನ್ಯವು ಸುಲಭವಾಗಿ ಸುರಕ್ಷಿತವಾಗಿ ತಮ್ಮ

ತಂಗುಸ್ಥಳಕ್ಕೆ ತಲುಪಬಹುದು ಮತ್ತು ಒಂದುವೇಳೆ ಶತ್ರು ತುಂಡರಿಸುತ್ತ ಇಸ್ಲಾಮಿಕ್ ಸೈನ್ಯದ ಕೇಂದ್ರವನ್ನು ವಶಪಡಿಸಿಕೊಳ್ಳಬೇಕಾದರೆ ಅವರು ಮುಂದೆ ಹೆಜ್ಜೆ ಹಾಕಿದರೆ, ಅವರಿಗೆ ಬಹಳ ಗಂಭೀರವಾದ ನಷ್ಟವನ್ನು ಎದುರಿಸಬೇಕಾಗುತ್ತದೆ. ಇದಕ್ಕೆ ವಿರುದ್ಧವಾಗಿ, ಹಝ್ರತ್ ಪೈಗಂಬರ್(ಸ)ರವರು ಶತ್ರುವನ್ನು ತೆರೆದ ವಿಶಾಲ ಮೈದಾನದಲ್ಲಿ ಇಳಿಜಾರಿನಲ್ಲಿ ಉಳಿಯಲು ಒತ್ತಾಯಿಸಿದರು. ಇಸ್ಲಾಮಿನ ಸೈನ್ಯವು ಮದೀನಾದಿಂದ ಹೊರಬಂದು ತಮ್ಮ ಮುಂದೆ ನಿಲ್ಲುತ್ತದೆ ಎಂದು ಖುರೈಷಿಗಳು ಭಾವಿಸಿದ್ದರೂ, ಆದರೆ ಹಝ್ರತ್ ಪೈಗಂಬರ್(ಸ)ರವರು ಇಸ್ಲಾಂನ ಸೈನ್ಯವನ್ನು ಅರ್ಧವೃತ್ತದಲ್ಲಿ ತಿರುಗಿಸಿ ಶತ್ರುಗಳನ್ನು ತೊರೆದರು. ಅವರ ಹಿಂದೆ ಸುರಕ್ಷಿತ ಸ್ಥಳವನ್ನು ತೆಗೆದುಕೊಳ್ಳಲು ಪಶ್ಚಿಮದಲ್ಲಿ ಅವರು ಆಯ್ಕೆ ಮಾಡಿದರು. ಇಸ್ಲಾಮಿನ ಸೈನ್ಯವು ಇದ್ದ ಸ್ಥಳದಲ್ಲಿ ಈಗ ಅವರು ಒಂದು ಅತ್ಯುತ್ತಮ ಸ್ಥಳದಲ್ಲಿದ್ದರು. ಉಹುದ್ ಮತ್ತು ಐನೈನ್ ಪರ್ವತಗಳ ಕಾರಣದಿಂದಾಗಿ ಹಿಂಭಾಗ ಮತ್ತು ಬಲಭಾಗವನ್ನು ರಕ್ಷಿಸಲಾಗಿತ್ತು. ಎಡಭಾಗದಲ್ಲಿ, ಬಿಲ್ಲುಗಾರರು ಜಬ್ಲುರ್ರಿಮಾದ್‌ನಲ್ಲಿ ಕಣಿವೆಯನ್ನು ನಿಯಂತ್ರಿಸುತ್ತಿದ್ದರು ಮತ್ತು ಜಬ್ಲುರ್ರಿಮಾದ್‌ನ ಮುಂದೆ ಇದ್ದ ದಕ್ಷಿಣಪೂರ್ವದ ಭಾಗದಲ್ಲಿ ಕಿನಾತ್ ಕಣಿವೆಯ ಲಂಬವಾದ ಅಂಚನ್ನು ಹೊಂದಿತ್ತು, ಇದರಿಂದ ಶತ್ರುಗಳು ಆಕ್ರಮಣ ಮಾಡುವುದು ಅಸಾಧ್ಯವಾಗಿತ್ತು.

(ಗಝ್ವಾತ್ ವ ಸರಾಯಾತ್, ಅಲ್ಲಾಮಾ ಮುಹಮ್ಮದ್ ಅಝ್ಹರ್ ಫರೀದ್, ಪುಟ–166–167, ಫರೀದಿಯಾ ಪ್ರಿಂಟಿಂಗ್ ಪ್ರೆಸ್, ಸಾಹಿವಾಲ್)

ಇದರ ಬಗ್ಗೆ ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಸೀರತ್ ಖಾತಮನ್ನಬೀಈನ್(ಸ) ನಲ್ಲಿ ಈ ಬಗ್ಗೆ ಬರೆದಿದ್ದಾರೆ, ಅವರು ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಅವರು ದೇವರ ಸಹಾಯವನ್ನು ನಂಬಿ ಮುಂದೆ ಸಾಗಿದರು ಮತ್ತು ಉಹದ್ ಪರ್ವತದ ಅಂಚಿನಲ್ಲಿ ತಂಗಿದರು, ಅದು ಹೇಗಿತ್ತು ಎಂದರೆ ಉಹುದ್ ಪರ್ವತವು ಮುಸ್ಲಿಮರ ಹಿಂಬದಿಯ ಕಡೆಗೆ ಬಂದು ಮದೀನಾವು ಮುಂದೆ ಇತ್ತು. ಮತ್ತು ಹೀಗೆ ಹಝ್ರತ್ ಪೈಗಂಬರ್(ಸ) ಅವರು ಸೈನ್ಯದ ಹಿಂಭಾಗವನ್ನು ಭದ್ರಪಡಿಸಿಕೊಂಡರು. ಹಿಂದಿನ ಪರ್ವತದಲ್ಲಿ ಒಂದು ರಹದಾರಿ (ಕಣಿವೆ) ಇತ್ತು, ಅದರಿಂದ ಆಕ್ರಮಣ ಮಾಡಬಹುದಾಗಿತ್ತು. ಹಝ್ರತ್ ಪೈಗಂಬರ್(ಸ)ರವರು ಅಲ್ಲಿ ಅಬ್ದುಲ್ಲಾ ಬಿನ್ ಜುಬೈರ್(ರ) ಅವರ ನೇತೃತ್ವದಲ್ಲಿ ಐವತ್ತು ಬಿಲ್ಲುಗಾರರನ್ನು ನೇಮಿಸುವ ಮೂಲಕ ಅದರ ರಕ್ಷಣೆಗೆ ವ್ಯವಸ್ಥೆ ಮಾಡಿದರು ಮತ್ತು ಏನೇ ಸಂಭವಿಸಿದರೂ ಅವರು ಯಾರನ್ನೂ ಆ ಸ್ಥಳದಲ್ಲಿ ಬಿಡಬಾರದು ಮತ್ತು ಶತ್ರುಗಳನ್ನು ಬಾಣಗಳಿಂದ ಹೊಡೆಯಬೇಕು ಎಂದು ಉಪದೇಶಿಸಿದರು. ಹಝ್ರತ್ ಪೈಗಂಬರ್(ಸ) ಈ ಕಣಿವೆಯ ಸುರಕ್ಷತೆಯ ಬಗ್ಗೆ ತುಂಬಾ ಕಾಳಜಿ ವಹಿಸಿದ್ದರು, ಹಝ್ರತ್ ಪೈಗಂಬರ್(ಸ) ಅಬ್ದುಲ್ಲಾ ಬಿನ್ ಜುಬೈರ್(ರ) ಅವರಿಗೆ ಈ ಕಣಿವೆಯನ್ನು ಯಾವುದೇ ಸಂದರ್ಭದಲ್ಲೂ ಖಾಲಿ ಬಿಡಬಾರದು ಎಂದು ಪದೇ ಪದೇ ಹೇಳಿದ್ದರು. ನಾವು ವಿಜಯಶಾಲಿಯಾಗಿ ಶತ್ರುಗಳು ಹಿಮ್ಮೆಟ್ಟಿ ಓಡಿಹೋಗಿರುವುದನ್ನು ನೀವು ನೋಡಿದರೂ, ಈ ಸ್ಥಳವನ್ನು ಬಿಡಬೇಡಿ ಮತ್ತು ಮುಸ್ಲಿಮರು ಸೋಲಿಸಲ್ಪಟ್ಟರು ಮತ್ತು ಶತ್ರುಗಳು ನಮ್ಮನ್ನು ಸೋಲಿಸಿದುದನ್ನು ನೀವು ನೋಡಿದರೂ ಸಹ, ಈ ಸ್ಥಳವನ್ನು ಬಿಟ್ಟು ಹೋಗಬೇಡಿ ಎಂದು ಆದೇಶಿಸಿದ್ದರು. ಒಂದು ವರದಿಯಲ್ಲಿ ಈ ಮಾತುಗಳು ಬರುತ್ತವೆ, "ಪಕ್ಷಿಗಳು ನಮ್ಮ ಮಾಂಸವನ್ನು ಗೀಚುವುದನ್ನು ನೀವು ನೋಡಿದರೆ, ನೀವು ಇಲ್ಲಿಂದ ತೆರಳಲು ಆದೇಶ ಪಡೆಯುವವರೆಗೆ ನೀವು ಇಲ್ಲಿಂದ ಕದಲಬಾರದು." (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ 487–488)

ಹಝ್ರತ್ ಮುಸ್ಲೆಹ್ ಮೌಊದ್(ರ) ಈ ಬಗ್ಗೆ ವಿವರಿಸುತ್ತಾರೆ: "ಅಂತಿಮವಾಗಿ, ಹಝ್ರತ್ ಪೈಗಂಬರ್(ಸ) ಅವರು ಉಹದ್ ತಲುಪಿದರು. ಅಲ್ಲಿಗೆ ತಲುಪಿದಾಗ, ಅವರು ಪರ್ವತದ ಕಣಿವೆಯನ್ನು ಕಾವಲು ನೀಡಲು ಐವತ್ತು ಸೈನಿಕರನ್ನು ನೇಮಿಸಿದರು ಮತ್ತು ಸೈನಿಕರ ಅಧಿಕಾರಿಗೆ ಒತ್ತಿಹೇಳಿದರು, ಆ ಕಣಿವೆ ಎಷ್ಟು ಮುಖ್ಯವಾಗಿದೆ, ನಾವು ಕೊಲ್ಲಲ್ಪಟ್ಟರೂ ಅಥವಾ ಗೆದ್ದರೂ ನೀವು ಈ ಸ್ಥಳದಿಂದ ಕದಲಬಾರದು. ಅದರ ನಂತರ, ಅವರು ಉಳಿದ ಆರುವರೆ ನೂರು ಜನರನ್ನು ಕರೆದುಕೊಂಡು ಶತ್ರುಗಳ ಸಂಖ್ಯೆಯಲ್ಲಿ ಐದನೇ ಒಂದು ಭಾಗದಷ್ಟು ಶತ್ರುಗಳೊಂದಿಗೆ ಹೋರಾಡಲು ಹೊರಟರು." (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–249)

ಬಿಲ್ಲುಗಾರರ ತಂಡವನ್ನು ಉಹುದ್ ಪರ್ವತದ ಮೇಲೆ ನೇಮಿಸಿದ ನಂತರ ಹಝ್ರತ್ ಪೈಗಂಬರ್(ಸ) ಸಮಾಧಾನಗೊಂಡರು ಮತ್ತು ಪಂಕ್ತಿಗಳನ್ನು ಅಣಿಗೊಳಿಸಲು ತೊಡಗಿದರು. ಸೈನಿಕರ ಸಂಖ್ಯೆ ಮತ್ತು ಯುದ್ಧ ಸಾಮಾನುಗಳ ದೃಷ್ಟಿಯಲ್ಲಿ ಮುಸ್ಲಿಮರ ಸ್ಥಿತಿ ಬಾಹ್ಯವಾಗಿ ದುರ್ಬಲವಾಗಿತ್ತು. ಸಂಖ್ಯೆಯಲ್ಲಿ ದುರ್ಬಲರು, ಉಪಕರಣಗಳಲ್ಲಿ ದುರ್ಬಲರು ಮತ್ತು ಶಸ್ತ್ರಾಸ್ತ್ರಗಳಲ್ಲಿ ಶ್ರೇಷ್ಠತೆಯಲ್ಲು ಎರಡೂ ಗುಂಪುಗಳು ಬಹಳ ಭಿನ್ನವಾಗಿದ್ದವು. ಸಂಖ್ಯಾತ್ಮಕವಾಗಿ, ಒಬ್ಬ ಮುಸ್ಲಿಮನು ಕನಿಷ್ಟ ನಾಲ್ಕು ಮುಶ್ರಿಕೀನರಿಂದ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಹೀಗೆ ಮುಶ್ರಿಕೀನರ ಸೈನ್ಯವು ಅಶ್ವಸೈನ್ಯದ ರಕ್ಷಾಕವಚದಿಂದ ಪ್ರತ್ಯೇಕಿಸಲ್ಪಟ್ಟಿತು. ಅದರ ಮೇಲೆ, ಇಸ್ಲಾಮಿನ ಸೈನ್ಯದ ಹೆಚ್ಚಿನ ಸೈನಿಕರು ಶಸ್ತ್ರಸಜ್ಜಿತರಾಗಿರಲಿಲ್ಲ ಮತ್ತು ಅವರಲ್ಲಿ ನೂರು ಮಾತ್ರ ಶಸ್ತ್ರಸಜ್ಜಿತರಾಗಿದ್ದರು, ಆದರೆ ಮೆಕ್ಕನ್ ಸೈನ್ಯವು ಅಂದರೆ ಮುಶ್ರಿಕರ ಸೈನ್ಯವು ಏಳುನೂರು ಶಸ್ತ್ರಸಜ್ಜಿತರನ್ನು ಹೊಂದಿತ್ತು ಮತ್ತು ಈ ಸಂಖ್ಯೆಯು ಇಡೀ ಮದನಿ ಸೈನ್ಯಕ್ಕೆ ಸಮನಾಗಿತ್ತು. (ಗಝುವಾತ್ ಉಹುದ್, ಮುಹಮ್ಮದ್ ಅಹ್ಮದ್ ಬಾಶ್ಮಾಯಿಲ್, ಪುಟ–103, ನಫೀಸ್ ಅಕಾಡೆಮಿ, ಕರಾಚಿ)

ಮುಶ್ರಿಕರ ಸೇನೆಯ ಹತ್ತು ಪಂಕ್ತಿಗಳಿದ್ದುವು. ಇಸ್ಲಾಮಿನ ಸೇನೆಯ ಕೇವಲ ಎರಡು ಸಾಲುಗಳಿದ್ದುವು ಮತ್ತು ಐವತ್ತು ಬಿಲ್ಲುಗಾರರು ಕಣಿವೆಯಲ್ಲಿದ್ದರು, ಆದರೆ ಯುದ್ಧಭೂಮಿಯ ಪ್ರಮುಖ ಮತ್ತು ಬಲವಾದ ಸ್ಥಳ ಮುಸ್ಲಿಮರ ಬಳಿ ಇತ್ತು.

(ಗಝುವಾತ್ ವ ಸರಾಯಾತ್, ಅಲ್ಲಾಮಾ ಮುಹಮ್ಮದ್ ಅಝ್ಹರ್ ಫರೀದ್, ಪುಟ–174, ಫರೀದಾ ಪ್ರಿಂಟಿಂಗ್ ಪ್ರೆಸ್, ಸಾಹಿವಾಲ್ ಪ್ರಕಟಿಸಿದೆ)

ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಜುಬೈರ್ ಬಿನ್ ಅವಾಮ್(ರ) ಅವರನ್ನು ಸೈನ್ಯದ ಬಲಭಾಗದ ಕಡೆಗೆ ಮತ್ತು ಮುನ್ಝಿರ್ ಬಿನ್ ಉಮರ್ ಘನ್ವಿ(ರ) ಅವರನ್ನು ಸೈನ್ಯದ ಎಡಭಾಗದಲ್ಲಿ ನೇಮಿಸಿ ಹೇಳಿದರು: ಯಾರು ಮುಶ್ರಿಕೀನರ ಧ್ವಜವನ್ನು ಎತ್ತಿದ್ದಾರೆ? ತಲ್ಹಾ ಬಿನ್ ಅಬಿ ತಲ್ಹಾ ಎಂದು ಉತ್ತರಿಸಲಾಯಿತು. ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು: ನಾವು ವಾಗ್ದಾನವನ್ನು ಪೂರೈಸುವುದರಲ್ಲಿ ಅವರಿಗಿಂತ ಹೆಚ್ಚು ಅರ್ಹರಾಗಿದ್ದೇವೆ ಆದ್ದರಿಂದ ಧ್ವಜವನ್ನು ಹಝ್ರತ್ ಅಲೀ(ರ) ಅವರಿಂದ ಪಡೆದು ಮುಸ್‌ಅಬ್ ಬಿನ್ ಉಮೈರ್(ರ) ಅವರಿಗೆ ವಹಿಸಲಾಯಿತು.

ಅವರ ಸಂಬಂಧವು ಅದೇ ಖುರೈಶರ ಧ್ವಜವನ್ನು ಹೊತ್ತಿದ ವ್ಯಕ್ತಿಯ ಗೋತ್ರವಾದ ಬನೂ ಅಬ್ದುದ್ದಾರ್‌ದೊಂದಿಗೆ ಇತ್ತು. ಅಂದರೆ ಖುರೈಶರ ಧ್ವಜವನ್ನು ಹೊತ್ತಿದ್ದ ವ್ಯಕ್ತಿಯ ಗೋತ್ರದ ವ್ಯಕ್ತಿಯನ್ನೇ ಹಝ್ರತ್ ಪೈಗಂಬರ್(ಸ)ರವರು ಮುಸ್ಲಿಮರ ಧ್ವಜವಾಹಕನನ್ನಾಗಿ ನೇಮಿಸಿದರು. ಒಬ್ಬ ಬರಹಗಾರರು ಬರೆದಿದ್ದಾರೆ: ಇಸ್ಲಾಮ್ ಧರ್ಮದಿಂದ ಮೊದಲು ಧ್ವಜ ಹೊತ್ತುವ ಹೊಣೆಗಾರಿಕೆಯು ಅದೇ ಕುಟುಂಬಕ್ಕೆ ಸೇರಿತ್ತು ಅಂದರೆ ಬನೂ ಅಬ್ದಿದ್ದಾರ್‌ಗೆ ಮತ್ತು ಪ್ರಮಾಣ ಪೂರೈಸುವುದು ಅಂದರೆ ಖುಸ್ಸಿ ಪ್ರಮಾಣವಾಗಿತ್ತು ಅಂದರೆ ಜನಾಂಗೀಯ ಪ್ರಮಾಣ ವಚನವನ್ನು ಪೂರೈಸುವುದು. ಅದರ ಬಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದರು: ನಾವು ಪ್ರಮಾಣವಚನವನ್ನು ಪೂರೈಸುತ್ತೇವೆ ಮತ್ತು ಅಂದು ಮುಸ್ಲಿಮರ ಘೋಷಣೆಯು ಅಮಿತ್ ಅಮಿತ್ ಎಂದಾಗಿತ್ತು.

(ಸಬ್ಲುಲ್ ಹುದಾ ವ ರ್ರಶಾದ್, ಸಂಪುಟ–4, ಪುಟ–190–191, ದಾರುಲ್ ಕುತುಬ್ ಇಲ್ಮಿಯ ಬೈರುತ್) (ಶರಹ್ ಝುರ್ಖಾನಿ, ಸಂಪುಟ–2, ಪುಟ–398, ದಾರುಲ್ ಕುತುಬ್ ಇಲ್ಮಿಯ ಬೈರುತ್)

ಹಝ್ರತ್ ಪೈಗಂಬರ್(ಸ) ನಮ್ರತೆ ಮತ್ತು ವಿನಯದೊಂದಿಗೆ ಅಲ್ಲಾಹನ ಸನ್ನಿಧಿಯಲ್ಲಿ ದುಆಗಳನ್ನು ಮಾಡುತ್ತಿದ್ದರು.

ಇಸ್ಲಾಮಿನ ಸೈನ್ಯದ ಪಂಕ್ತಿಯಲ್ಲಿ ಅನ್ಸಾರ್‌ಗಳು ಬಲ ಮತ್ತು ಎಡಭಾಗದಲ್ಲಿದ್ದರು, ಅಂದರೆ, ಸೈನ್ಯದ ಮೈಮ್ನಾ ಮತ್ತು ಮೆಸ್ರಾದಲ್ಲಿ ಮದೀನಾದ ಅನ್ಸಾರ್‌ಗಳು ಇದ್ದರು ಮತ್ತು ಸೈನ್ಯದ ಹೃದಯ ಭಾಗದಲ್ಲಿ, ಅಲ್ಲಿ ಶತ್ರುಗಳು ಸಂಪೂರ್ಣ ಒತ್ತಡವಿರುತ್ತದೆ ಅಲ್ಲಿ ರಸೂಲುಲ್ಲಾಹ್(ಸ) ಅವರು ಮುಹಾಜಿರೀನರೊಂದಿಗೆ ಉಪಸ್ಥಿತರಿದ್ದರು. ಅದೇ ಸಂದರ್ಭದಲ್ಲಿ ಮುಹಾಜಿರೀನರೊಂದಿಗೆ ಹಝ್ರತ್ ಪೈಗಂಬರ್(ಸ) ಅವರು ಮಧ್ಯಭಾಗದಲ್ಲಿ ಇದ್ದರು. ಹಝ್ರತ್ ಪೈಗಂಬರ್(ಸ) ಅವರು ನಿಂತಿರುವ ಕೇಂದ್ರವು ಮಧ್ಯದಲ್ಲಿ ಎರಡನೇ ಸಾಲಿನ ಹಿಂದೆಯೇ ಇತ್ತು. ನಮ್ಮಿಂದ ಆದೇಶಗಳನ್ನು ಸ್ವೀಕರಿಸುವ ಮೊದಲು ಅವರು(ಸ) ಸಹಚರರನ್ನು ಮುನ್ನಡೆಸದಂತೆ ಆದೇಶಿಸಿದ್ದರು.

(ಗಝುವಾತ್ ವ ಸರಾಯಾತ್, ಅಲ್ಲಾಮಾ ಮುಹಮ್ಮದ್ ಅಝ್ಹರ್ ಫರೀದ್, ಪುಟ–174, ಫರಿದಿಯಾ ಪ್ರಿಂಟಿಂಗ್ ಪ್ರೆಸ್, ಸಾಹಿವಾಲ್ ಪ್ರಕಟಿಸಿದೆ)

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ. ಹಝ್ರತ್ ಪೈಗಂಬರ್(ಸ) ಉಹುದ್ ದಿನದಂದು ಹೀಗೆ ದುಆ ಮಾಡುತ್ತಿದ್ದರು: **ಅಲ್ಲಾಹುಮ್ಮ, ಇನ್ನಕ ಇನ್ ತಶಾಅ್ ಲಾ ತುಅ್‌ಬದ್ ಫಿಲ್ ಅರ್ಝಿ** ಅಂದರೆ: ಹೇ ಅಲ್ಲಾಹ್, ನೀನು ಸಹಾಯ ಮಾಡದಿದ್ದರೆ ಭೂಮಿಯಲ್ಲಿ ನಿನ್ನ ಆರಾಧನೆಯನ್ನು ಮಾಡುವವರಾಗಿ ಯಾರೂ ಉಳಿಯದು. (ಸಹೀಹ್ ಮುಸ್ಲಿಮ್, ಕಿತಾಬುಲ್ ಜಿಹಾದ್ ವಸ್ಸೈರ್, ಹದೀಸ್–1743)

ಅಂದರೆ, ನೀನು ಸಹಾಯ ಮಾಡದಿದ್ದರೆ, ಇದು ಸಂಭವಿಸುತ್ತದೆ. ಬದ್ರ್ ಯುದ್ಧದಂದು ಇದೇ ದುಆವನ್ನು ಮಾಡಲಾಗಿತ್ತು ಎಂದು ಕೆಲವು ವರದಿಗಳಲ್ಲಿ ಇದೆ. ಹಝ್ರತ್ ಪೈಗಂಬರ್(ಸ) ಈ ದುಆವನ್ನು ಎರಡೂ ಸಂದರ್ಭಗಳಲ್ಲಿ ಮಾಡಿದ ಸಾಧ್ಯತೆಯಿದೆ ಎಂದು ಮುಸ್ಲಿಮ್‌ನ ವ್ಯಾಖ್ಯಾನದಲ್ಲಿ ಬರೆಯಲಾಗಿದೆ. **ವಲ್ಲಾಹು ಅಅ್‌ಲಮು.**

ಹಝ್ರತ್ ಸಅದ್ ಬಿನ್ ವಖಾಸ್(ರ) ವರದಿ ಮಾಡುತ್ತಾರೆ: ಅಬ್ದುಲ್ಲಾಹ್ ಬಿನ್ ಜಹಶ್(ರ) ಹೀಗೆ ಹೇಳಿದರು: ಬನ್ನಿರಿ, ನಾವಿಬ್ಬರೂ ಸೇರಿ ದುಆ ಮಾಡೋಣ. ಹಝ್ರತ್ ಸಅದ್(ರ) ಹೀಗೆ ದುಆ ಮಾಡಿದರು: ಹೇ ನನ್ನ ಪ್ರಭೂ, ನಾಳೆ ಶತ್ರುಗಳೊಡನೆ ನಮ್ಮ ಮುಖಾಮುಖಿಯಾಗುವಾಗ ನನ್ನ ಹೋರಾಟ ಅತಿ ಶಕ್ತಿಶಾಲಿಯಾದ ಯೋಧನೊಡನೆ ಆಗಿ ನಾನು ಆತನನ್ನು ವಧಿಸುವಂತೆ ಆಗಲಿ.

ಅಬ್ದುಲ್ಲಾಹ್ ಬಿನ್ ಜಹಶ್(ರ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನನ್ನ ಮೂಗು ಮತ್ತು ಕಿವಿಯನ್ನು ಕತ್ತರಿಸುವ ಒಬ್ಬ ಅತಿ ಶಕ್ತಿಶಾಲಿ ವ್ಯಕ್ತಿಯೊಂದಿಗೆ ನನ್ನ ಮುಖಾಮುಖಿಯಾಗಲಿ ಹಾಗೂ ನಿನ್ನ ಮತ್ತು ನಿನ್ನ ರಸೂಲಿನ ಸಂಪ್ರೀತಿಗಾಗಿ ನನ್ನ ಸ್ಥಿತಿ ಹೀಗೆ ಆಯಿತು ಎಂದು ನಿನ್ನನ್ನು ಭೇಟಿಯಾಗುವಾಗ ನಾನು ಹೇಳುವಂತಾಗಲಿ. ಹಝ್ರತ್ ಸಾದ್ ಬಿನ್ ಅಬೀ ವಖಾಸ್(ರ) ಹೇಳಿದರು: ಓ ನನ್ನ ಮಗನೇ! ಅಬ್ದುಲ್ಲಾ ಬಿನ್ ಜಹಶ್ ಅವರ ಪ್ರಾರ್ಥನೆಯು ನನ್ನ ಪ್ರಾರ್ಥನೆಗಿಂತ ಉತ್ತಮವಾಗಿತ್ತು, ನಾನು ಆ ದಿನ ಸಂಜೆ ಅಬ್ದುಲ್ಲಾ ಅವರ ಕಿವಿ ಮತ್ತು ಮೂಗು ದಾರದಿಂದ ನೇತಾಡುತ್ತಿರುವುದನ್ನು ನೋಡಿದೆ. (ಮುಸ್ತದ್ರಿಕ್ ಅಲಸ್ಸಹೀಹೈನ್ ಕಿತಾಬುಲ್ ಜಿಹಾದ್, ಹದೀಸ್–2409, ಸಂಪುಟ–3, ಪುಟ–907, ಮಕ್ತಬ ನಝಾರ್ ಮುಸ್ತಫಾ ರಿಯಾಝ್ 2000) ಅಂದರೆ ಶತ್ರುಗಳು ಅವರನ್ನು ಮುಸಲ್ಲ ಮಾಡಿದ್ದರು.

ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಹರಾಮ್(ರ) ಹೇಳುತ್ತಾರೆ: ನಾನು ಮುಬಶಿರ್ ಬಿನ್ ಅಬ್ದುಲ್ ಮುಂಝಿರ್ ಅವರನ್ನು ಉಹುದ್ ದಿನದ ಹಿಂದಿನ ದಿನ ಕನಸಿನಲ್ಲಿ ಕಂಡೆ. ಅವರಿಬ್ಬರು ಮಾಡಿದ್ದ ದುಆವನ್ನು ಸ್ವೀಕರಿಸಲಾಗಿತ್ತು. ಅವರಿಬ್ಬರಲ್ಲಿ ಒಬ್ಬರು ಶತ್ರುಗಳ ಮೇಲೆ ಜಯ ಸಾಧಿಸಿದರು, ಇನ್ನೊಬ್ಬರು ಸಹ ಉತ್ತಮವಾಗಿ ಹೋರಾಡಿದರು ಮತ್ತು ಕೊನೆಯಲ್ಲಿ ಹುತಾತ್ಮರಾದರು. ಆದಾಗ್ಯೂ, ಇದು ಇಬ್ಬರ ಪ್ರಾರ್ಥನೆಗಳ ಕಥೆಯಾಗಿದೆ.

ನಂತರ ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಹರಾಮ್(ರ) ಹೇಳುತ್ತಾರೆ: ನಾನು ಉಹದ್ ದಿನದ ಹಿಂದಿನ ದಿನ ಮುಬಶಿರ್ ಬಿನ್ ಅಬ್ದುಲ್ ಮುಂಝಿರ್(ರ) ಅವರನ್ನು ಕನಸಿನಲ್ಲಿ ಕಂಡಿದ್ದೇನೆ. ಅವರು ಬದ್ರ್ ಯುದ್ಧದಲ್ಲಿ ಹುತಾತ್ಮರಾದರು. ಇನ್ನು ಕೆಲವೇ ದಿನಗಳಲ್ಲಿ ನೀವು ನಮ್ಮ ಬಳಿ ಬರಲಿದ್ದೀರಿ ಎಂದು ಹೇಳಿದರು. ಅದಕ್ಕೆ ನಾನು ಅವರಿಗೆ ಕೇಳಿದೆ ಎಲ್ಲಿಗೆ? ಅದಕ್ಕೆ ಅವರು ಹೇಳಿದರು ಜನ್ನತ್ (ಸ್ವರ್ಗ)ಕ್ಕೆ. ಅದರಲ್ಲಿ ನೀವು ಎಲ್ಲಿ ಬೇಕಾದರೂ ಪ್ರಯಾಣಿಸಬಹುದು. ಅಂದರೆ ಸ್ವರ್ಗದಲ್ಲಿ. ನಾನು ಅವರಿಗೆ ಕೇಳಿದೆ, ನೀವು ಬದ್ರ್ ದಿನದಂದು ಹುತಾತ್ಮರಾಗಲಿಲ್ಲವೇ? ಅದಕ್ಕೆ ಅವರು ಹೇಳಿದರು ಹೌದು. ನನಗೆ ಮತ್ತೆ ಜೀವಂತಗೊಳಿಸಲಾಗಿದೆ. ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಹರಾಮ್ ರವರು ಈ ಕನಸನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರಿಗೆ ಪ್ರಸ್ತಾಪಿಸಿದಾಗ ಅವರು(ಸ) ಹೇಳಿದರು: ಓ ಅಬು ಜಾಬಿರ್! ಇದು ಶಹಾದತ್‌ನ ಶುಭ ಸುದ್ದಿಯಾಗಿದೆ. (ಮುಸ್ತದ್ರಿಕ್ ಅಲಸ್ಸಹೀಹೈನ್, ಕಿತಾಬ್ ಮಾರಿಫತಿಸ್ಸಹಾಬ, ಹದೀಸ್–4979, ಸಂಪುಟ–3, ಪುಟ–413, ದಾರುಲ್ ಫಿಕರ್ ಬೈರುತ್ 2002) (ಸಬ್ಲುಲ್ ಹುದಾ, ಸಂಪುಟ–4, ಪುಟ–75, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ಹೀಗಾಗಿ, ಹಝ್ರತ್ ಜಾಬಿರ್(ರ) ಅವರು ತಮ್ಮ ತಂದೆ ಉಹುದ್ ದಿನದಂದು ಶಹೀದ್ ಆದರು ಎಂದು ನಿರೂಪಿಸಲಾಗಿದೆ. (ಮಾರಿಫತಿಸ್ಸಹಾಬ ಲಿಅಬಿ ನಈಮ್, ಸಂಪುಟ–3, ಪುಟ–194, ವರದಿ ಸಂಖ್ಯೆ 4356, ದಾರುಲ್ ಕುತುಬ್ ಇಲ್‌ಮಿಯ ಬೈರುತ್)

ಅದರ ಹೆಚ್ಚಿನ ವಿವರದಲ್ಲಿ ಹೀಗೆ ಬರೆಯಲಾಗಿದೆ: ಮುಶ್ರಿಕರು ಸಬಾಖಾ ಸ್ಥಳದಲ್ಲಿ ಪಂಕ್ತಿಗಳನ್ನು ರಚಿಸಿದರು ಮತ್ತು ಯುದ್ಧಕ್ಕೆ ಉತ್ತಮವಾಗಿ ಸಿದ್ಧಪಡಿಸಿದರು. ಅವರು ಮೂರು ಸಾವಿರ ಸಂಖ್ಯೆಯಲ್ಲಿದ್ದರು ಮತ್ತು ಇನ್ನೂರು ಕುದುರೆಗಳನ್ನು ಮುನ್ನಡೆಸಿದರು. ನಂತರ ಅವರು ಕುದುರೆಗಳ ಮೇಲೆ ಖಾಲಿದ್ ಬಿನ್ ವಲೀದ್(ರ) ಅವರನ್ನು ಮತ್ತು ಮೈಸರಾದ ಮೇಲೆ ಇಕ್ರಮಾ ಬಿನ್ ಅಬು ಜಹ್ಲ್ ಅವರನ್ನು ನೇಮಿಸಿದರು ಮತ್ತು ಕಾಲಾಳುಗಳ ಮೇಲೆ ಸಫ್ವಾನ್ ಬಿನ್ ಉಮಯ್ಯ ಅವರನ್ನು ನೇಮಿಸಿದರು ಮತ್ತು ಕೆಲವರು ಬಿಲ್ಲುಗಾರರ ಮೇಲೆ ಅಮ್ರ್ ಬಿನ್ ಅಸ್ ಮತ್ತು ಅಬ್ದುಲ್ಲಾ ಬಿನ್ ಅಬಿ ರಬಿಯಾ ಅವರನ್ನು ನೇಮಿಸಿದ್ದರು ಎಂದು ಹೇಳುತ್ತಾರೆ. ಈ ಎಲ್ಲಾ ಜನರು ನಂತರ ಇಸ್ಲಾಂಗೆ ಮತಾಂತರಗೊಂಡರು. ಅವರು ಧ್ವಜವನ್ನು ಅಬ್ದ್ ಅಲ್–ದಾರ್‌ನಿಂದ ಬಂದ ತಲ್ಹಾ ಬಿನ್ ಅಬಿ ತಲ್ಹಾ ಅವರಿಗೆ ನೀಡಿದರು. ನಾವು ಅತೀ ಹೆಚ್ಚು ಅರ್ಹರಾಗಿದ್ದೇವೆ ಎಂದು ಹಝ್ರತ್ ಪೈಗಂಬರ್(ಸ) ರವರು ಹೇಳಿದ ಧ್ವಜ ಇದಾಗಿದೆ. ಅವರು ಧ್ವಜವನ್ನು ಬನು ಅಬ್ದ್ ಅಲ್–ದರ್‌ನಿಂದ ಬಂದ ತಲ್ಹಾ ಬಿನ್ ಅಬಿ ತಲ್ಹಾ ಅವರಿಗೆ ನೀಡಿದರು ಮತ್ತು ಅಬು ಸುಫ್ಯಾನ್ ಬನು ಅಬ್ದ್ ಅಲ್–ದರ್ ಅವರ ಧ್ವಜಧಾರಿಗಳನ್ನು ಉತ್ಸಾಹಿಸುತ್ತಾ ಹೀಗೆ ಹೇಳುತ್ತಿದ್ದರು: ಎಲೈ ಅಬ್ದ್ ಅದ್ದಾರ್!! ಬದರ್ ದಿನವೂ ನೀವೇ ನಮ್ಮ ಧ್ವಜವನ್ನು ಹೊತ್ತಿದ್ದೀರಿ, ನಮ್ಮ ಅವಸ್ಥೆ ನೀವು ನೋಡಿದ್ದೀರಿ.

ಜನರ ಯುದ್ಧಗಳನ್ನು ಅವರ ಧ್ವಜಧಾರಿಗಳು ನಿರ್ಧರಿಸುತ್ತಾರೆ. ಧ್ವಜಧಾರಿ ಬಲಶಾಲಿಯಾಗಿದ್ದರೆ, ಜನರಿಗೆ ನೆಮ್ಮದಿ ಇರುತ್ತದೆ. ಅವರು ಓಡಿಹೋದಾಗ, ಜನರು ಸಹ ಓಡಿಹೋಗುತ್ತಾರೆ.

ಧ್ವಜಧಾರಿ ಓಡಿಹೋದರೆ ಜನರೂ ಸಹ ಭಯಭೀತರಾಗಿ ಓಡಿಹೋಗುತ್ತಾರೆ. ಆದ್ದರಿಂದ ನೀವು ನಮ್ಮ ಧ್ವಜವನ್ನು ತೆಗೆದುಕೊಳ್ಳಿ ಅಥವಾ ನಮ್ಮ ದಾರಿಯಿಂದ ಹೊರಬನ್ನಿ. ನಾವು ನಿಮ್ಮಕಡೆಯಿಂದ ಸಾಕಾಗಿದ್ದೇವೆ. ಅವರನ್ನು ಮರ್ಯಾದೆ ಪರಜ್ಞೆಯನ್ನು ಮೂಡಿಸುವಂತೆ ಪ್ರಯತ್ನಿಸಿದಾಗ, ಅವರು ಹೇಲಿದರು ನಾವು ನಮ್ಮ ಧ್ವಜವನ್ನು ನಿಮಗೆ ಒಪ್ಪಿಸಬೇಕೇ? ನಾವು ಯುದ್ಧ ಪ್ರಾರಂಭಿಸಿದಾಗ ನಾವು ಏನು ಮಾಡುತ್ತೇವೆ ಎಂಬುದು ಸದ್ಯದಲ್ಲೇ ನಿಮಗೆ ತಿಳಿಯಲಿದೆ.
(ಸಬ್ಲುಲ್ ಹುದಾ ವರ್ರಶ್ಯಾದ್, ಸಂಪುಟ–4, ಪುಟ–191, ದಾರುಲ್ ಕುತುಬ್ ಇಲ್ಮೀಯಾ, ಬೈರುತ್)

ಕೊನೆಯಲ್ಲಿ, ಖುರೈಶ್‌ನ ಮಹಿಳೆಯರ ಡೇರೆಗಳು ಇದ್ದವು, ಅವರು ನಿರಂತರವಾಗಿ ಡೋಲುಗಳನ್ನು ಬಾರಿಸುತ್ತಿದ್ದರು ಮತ್ತು ಬದ್ರ್ನ ಹುತಾತ್ಮರನ್ನು ಉಲ್ಲೇಖಿಸುತ್ತಿದ್ದರು, ಯೋಧರ ಉತ್ಸಾಹವನ್ನು ಬೆಚ್ಚಗಾಗಿಸುತ್ತಿದ್ದರು ಮತ್ತು ಹಿಂದಿನ ನಷ್ಟವನ್ನು ಸರಿದೂಗಿಸಲು ಅವರನ್ನು ಪ್ರೋತ್ಸಾಹಿಸುತ್ತಿದ್ದರು. (ದಾಂಯಿರಾ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ–6, ಪುಟ–470)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಬರೆಯುತ್ತಾರೆ. ತನ್ನ ಸೇನೆಯ ಹಿಂಭಾಗವನ್ನು ಪೂರ್ಣವಾಗಿ ಸುರಕ್ಷಿತಗೊಳಿಸಿದ ನಂತರ ಹಝ್ರತ್ ಪೈಗಂಬರ್(ಸ) ಇಸ್ಲಾಮಿನ ಸೇನೆಯನ್ನು ಅಣಿಗೊಳಿಸಿದರು ಮತ್ತು ವಿವಿಧ ಸೇನಾ ತುಕಡಿಗಳಿಗೆ ಬೇರೆ ಬೇರೆ ಅಮೀರರನ್ನು ನಿಶ್ಚಯಿಸಿದರು. ಖುರೈಶಿಯರ ಧ್ವಜವು ತಲ್‌ಹನ ಕೈಯಲ್ಲಿದೆ ಎಂದು ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಲಾಯಿತು. ಖುರೈಶಿನ ಅತ್ಯುನ್ನತ ವಾರಸುದಾರರಾದ ಖುಸ್ಸಾ ಬಿನ್ ಕಿಲಾಬ್ ಸ್ಥಾಪಿಸಿದ ವ್ಯವಸ್ಥೆಯ ಅಧೀನದಲ್ಲಿ ಯುದ್ಧದಲ್ಲಿ ಖುರೈಶಿನ ಧ್ವಜವನ್ನು ಎತ್ತಲು ಅಧಿಕಾರವನ್ನು ಹೊಂದಿದ್ದ ಕುಟುಂಬದೊಂದಿಗೆ ತಲ್‌ಹ ಸಂಬಂಧ ಹೊಂದಿದ್ದನು. ಇದು ಗೊತ್ತಾದಾಗ ಹಝ್ರತ್ ಪೈಗಂಬರ್(ಸ) ಹೇಳಿದರು:

"ಸಾಮುದಾಯಿಕ ನಿಷ್ಠೆ ತೋರಿಸಲು ನಾವು ಹೆಚ್ಚು ಹಕ್ಕುದಾರರು. ಹೀಗೆ ಹಝ್ರತ್ ಅಲಿ(ರ)ರಿಂದ ಹಝ್ರತ್ ಪೈಗಂಬರ್(ಸ) ಮುಹಾಜಿರರ ಧ್ವಜವನ್ನು ಪಡೆದು ಮುಸ್‌ಅಬ್ ಬಿನ್ ಉಮ್ಮೈರ್(ರ)ರಿಗೆ ಒಪ್ಪಿಸಿದರು. ಅವರು ತಲ್‌ಹ ಸಂಬಂಧ ಹೊಂದಿದ್ದ ಅದೇ ಕುಟುಂಬದ ಒಬ್ಬ ಸದಸ್ಯರಾಗಿದ್ದರು.

ಇನ್ನೊಂದೆಡೆ ಖುರೈಷಿಗಳ ಸೈನ್ಯವೂ ಸಾಲುಗಟ್ಟಿ ನಿಂತಿತ್ತು. ಅಬುಸುಫ್ಯಾನ್ ಶತ್ರುಗಳ ಸೇನಾಧಿಪತಿಯಾಗಿದ್ದನು ಮತ್ತು ಖಾಲಿದ್ ಬಿನ್ ವಲೀದ್ ಬಲಭಾಗದ ಸೈನ್ಯದ ಸೇನಾಧಿಪತಿಯಾಗಿದ್ದರು ಮತ್ತು ಇಕ್ರಮಾ ಬಿನ್ ಅಬು ಜಹ್ಲ್ ಎಡಭಾಗದ ಸೈನ್ಯದ ಸೇನಾಧಿಪತಿಯಾಗಿದ್ದರು. ಬಿಲ್ಲುಗಾರರು ಅಬ್ದುಲ್ಲಾ ಬಿನ್ ರಬೀಯಾ ಅವರ ನೇತೃತ್ವದಲ್ಲಿದ್ದರು. ಮತ್ತು ಮಹಿಳೆಯರು ಸೇನೆಯ ಹಿಂದೆ ಡೋಲು ಬಾರಿಸುತ್ತಾ, ಕವಿತೆಗಳನ್ನು ಹಾಡುತ್ತಾ ಪುರುಷರಲ್ಲಿ ಆವೇಶ ಹುಟ್ಟಿಸುತ್ತಿದ್ದರು. (ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಎಂ.ಎ, ಪುಟ–488)

ಆದಾಗ್ಯೂ, ಎರಡು ಸೈನ್ಯಗಳು ಸಾಲುಗಟ್ಟಿ ನಿಂತಾಗ, ಅಬು ಸುಫ್ಯಾನ್ ಅನ್ಸಾರಿ ಮುಸ್ಲಿಮರನ್ನು ಕರೆದು ಹೇಳಿದನು, ಓ ಔಸ್ ಮತ್ತು ಖಝ್ರಜ್ ಗೋತ್ರದವರೇ! ನೀವೆಲ್ಲರು ನಮ್ಮಿಂದ ಮತ್ತು ನಮ್ಮ ಕುಟುಂಬದಿಂದ ದೂರವಿರಿ. ನಿಮ್ಮ ಬಗ್ಗೆ ನಮಗೆ ಯಾವುದೇ ಸರೋಕಾರವಿಲ್ಲ. ಅದಕ್ಕೆ ಅನ್ಸಾರ್‌ಗಳು ಅಬುಸುಫ್ಯಾನ್‌ನನ್ನು ಶಪಿಸಿದರು ಮತ್ತು ಅವನನ್ನು ತೀವ್ರವಾಗಿ ನಿಂದಿಸಿದರು. (ಸಿರತುಲ್–ಹಲ್ಬಿಂಯಾ, ಸಂಪುಟ–2, ಪುಟ–303, ದಾರುಲ್ ಕುತುಬ್ ಇಲ್‌ಮೀಯಾ ಬೈರುತ್)

ಯುದ್ಧವು ಈಗ ಪ್ರಾರಂಭವಾಗುತ್ತದೆ, ಅಬು ಆಮಿರ್ ಫಾಸಿಕ್(ಸುಳ್ಳುಗಾರ) ಯುದ್ಧವನ್ನು ಮೊದಲು ಪ್ರಾರಂಭಿಸಿದನು. ಅವನನ್ನು ಜಾಹಿಲಿಯಾದಲ್ಲಿ ಸನ್ಯಾಸಿ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಅವನಿಗೆ ಫಾಸಿಕ್(ಸುಳ್ಳುಗಾರ) ಎಂದು ಹೆಸರಿಸಿದರು. ಈ ವ್ಯಕ್ತಿ ಮದೀನಾದಿಂದ ಓಡಿಹೋಗಿ ಖುರೈಶರಿಗೆ ಹೀಗೆ ನಾನು ನನ್ನ ಜನರನ್ನು ಭೇಟಿಯಾಗಲು ಹೋದಾಗ ಇಡೀ ರಾಷ್ಟ್ರವು ನನ್ನೊಂದಿಗೆ ಇರುತ್ತದೆ ಎಂದು ಹೇಳುತ್ತಿದ್ದನು. ಅವನು ಈ ತಪ್ಪು ಕಲ್ಪನೆಯನ್ನು ಹೊಂದಿದ್ದನು ಅಂದರೆ ನಾನು ನಿಮ್ಮೊಂದಿಗೆ ಅಲ್ಲಿಗೆ ಹೋದಾಗ, ನಾನು ನನ್ನ ಹೆಸರನ್ನು ತೆಗೆದುಕೊಂಡಾಗ ಅನ್ಸಾರ್‌ಗಳು ಮುಸ್ಲಿಮರನ್ನು ಬಿಟ್ಟು ನನ್ನೊಂದಿಗೆ ಬರುತ್ತಾರೆ. ಆದಾಗ್ಯೂ, ಅವನು ತನ್ನ ಜನರ ಐವತ್ತು ಜನರೊಂದಿಗೆ ಕಾಣಿಸಿಕೊಂಡನು ಮತ್ತು ಅವನೊಂದಿಗೆ ಹದಿನೈದು ಜನರು ಮಕ್ಕಾದಿಂದ ಹೋದರು ಮತ್ತು ಉಳಿದವರು ವಿವಿಧ ಗೋತ್ರಗಳಿಂದ ಮತ್ತು ಮಕ್ಕಾದ ಜನರ ಗುಲಾಮರಿಂದ ಸಂಗ್ರಹಿಸಲ್ಪಟ್ಟರು ಎಂದು ಹೇಳಲಾಗುತ್ತದೆ. ಅವನು ಓ ಔಸ್ ಗೋತ್ರದ ಜನರೇ! ನಾನು ಅಬು ಆಮಿರ್, ಆದ್ದರಿಂದ ಅನ್ಸಾರರು ಹೇಳಿದರು, ಓ ಫಾಸಿಕ್! ಅಲ್ಲಾಹನು ನಿನ್ನ ಕಣ್ಣುಗಳನ್ನು ತಂಪಾಗಿಸದಿರಲಿ. ಅನ್ಸಾರರಿಂದ ಈ ಉತ್ತರವನ್ನು ಕೇಳಿದಾಗ ಅವನು ಹೇಳಿದನು, ನನ್ನ ನಂತರ ನನ್ನ ಜನರು ಕೆಟ್ಟದ್ದನ್ನು ಅನುಭವಿಸಿದ್ದಾರೆ. ನಂತರ ಅವನು ತುಂಬಾ ಹೋರಾಡಿದ ನಂತರ ಅವರ ಮೇಲೆ ಕಲ್ಲು ತೂರಾಟ ಆರಂಭಿಸಿದನು.
(ಸೀರತುನ್ನಬಿ ಲಿಇಬ್ನೆ ಹಿಶ್ಯಾಮ್, ಪುಟ–525, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಸಬ್ಲುಲ್ ಹುದಾ ವರ್ರಶ್ಯಾದ್, ಸಂಪುಟ–4, ಪುಟ–191, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಅಬು ಆಮಿರ್‌ನ ಪುತ್ರ ಹಝ್ರತ್ ಹಂಝುಲಾ(ರ) ಅವರು ಮುಸ್ಲಿಮರ ಪರವಾಗಿ ಈ ಯುದ್ಧದಲ್ಲಿ ಪಾಲ್ಗೊಂಡಿದ್ದರು. ಅವರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರು ಮತ್ತು ತಮ್ಮ ತಂದೆಯನ್ನು ವಧಿಸಲು ಹಝ್ರತ್ ಪೈಗಂಬರ್(ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರನ್ನು ಅನುಮತಿ ಕೇಳಿದರು, ಆದರೆ ಹಝ್ರತ್ ಪೈಗಂಬರ್(ಸ) ಅದನ್ನು ಮಾಡದಂತೆ ತಡೆದರು. (ಸೀರತ್ ಅಲ್–ಹಲ್ಬಿಯಾಹ್ ಸಂಪುಟ 2, ಪುಟ 327, ದಾರುಲ್ ಕುತುಬ್ ಇಲ್ಮೀಯಾ, ಬೈರುತ್)

ಇದು ಯುದ್ಧದ ಸಂದರ್ಭಗಳಾಗಿದ್ದರೂ, ಹಝ್ರತ್ ಪೈಗಂಬರ್(ಸ) ಅವರು ತಮ್ಮ ಇಂದ್ರಿಯಾಸಕ್ತಿಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಬೇಡ, ನೀವು ಹೀಗೆ ಮಾಡಬೇಡಿ ಎಂದು ಹೇಳಿದರು. ಬೇರೆಯವರು ಅವನನ್ನು ವಧಿಸುತ್ತಾರೆ. ಆದ್ದರಿಂದ ಅಬು ಆಮಿರ್ ನಂತರ, ಒಂಟೆಯ ಮೇಲೆ ಸವಾರಿ ಮಾಡುತ್ತಿದ್ದ ಮುಶ್ರಿಕನ ವ್ಯಕ್ತಿಯೊಬ್ಬನು ಯುದ್ಧ ಮೈದಾನಕ್ಕೆ ಹೊರಬಂದು ಯುದ್ಧವಾಡಲು ಕೇಳಿದನು. ಜನರು ಅವನ ಈ ಕೃತ್ಯಕ್ಕೆ ಗಮನ ನೀಡಲಿಲ್ಲ ಅವನು ಮೂರು ಬಾರಿ ಯುದ್ಧಗರ್ಜನೆ ನೀಡಿದಾಗ ಹಝ್ರತ್ ಝುಬೈರ್(ರ) ಹೊರಬಂದು ಅವನ ಕಡೆಗೆ ಹೋದರು ಮತ್ತು ತಕಷಣವೇ ಹಾರಿ ಒಂಟೆಯ ಮಟ್ಟಕ್ಕೆ ತಲುಪಿ ಅವನ ಕುತ್ತಿಗೆಯನ್ನು ಹಿಡಿದರು, ನಂತರ ಇಬ್ಬರೂ ಒಂಟೆಯ ಮೇಲೆಯೇ ಯುದ್ಧವಾಡುತ್ತಿದ್ದರು ಅದನ್ನು ಕಂಡು ಹಝ್ರತ್ ಪೈಗಂಬರ್(ಸ) ರವರು ಹೇಳಿದರು ಅವರಲ್ಲಿ ಯಾರು ಮೊದಲು ನೆಲವನ್ನು ಮುಟ್ಟುತ್ತಾರೋ ಅವರು ಕೊಲ್ಲಲ್ಪಡುತ್ತಾರೆ. ಅಷ್ಟರಲ್ಲಿ ಆ ಮುಶ್ರಿಕ್ ಒಂಟೆಯಿಂದ ಕೆಳಗೆ ಬಿದ್ದ ಮತ್ತು ಹಝ್ರತ್ ಝುಬೈರ್(ರ) ಅವನ ಮೇಲೆ ಬಿದ್ದ ತಕ್ಷಣವೇ ಮುಶ್ರಿಕನನ್ನು ವಧಿಸಿದರು. ಹಝ್ರತ್ ಪೈಗಂಬರ್(ಸ)ರವರು ಹಝ್ರತ್ ಝುಬೈರ್(ರ) ಅವರನ್ನು ಹೀಗೆ ಹೊಗಳಿದರು:

ಪ್ರತಿಯೊಬ್ಬ ಪ್ರವಾದಿಗೂ ಒಬ್ಬ ಅನುಯಾಯಿ ಇರುತ್ತಾನೆ, ನನ್ನ ಅನುಯಾಯಿ ಝುಬೈರ್ ಆಗಿದ್ದಾನೆ. ಮತ್ತು ಹೇಳಿದರು: ಝುಬೈರ್ ಈ ಮುಶ್ರಿಕ್‌ನೊಂದಿಗೆ ಹೋರಾಡಲು ಹೊರಬರದಿದ್ದರೆ, ನಾನೇ ಹೊರಗೆ ಬರುತ್ತಿದ್ದೆ. (ಸಿರತುಲ್–ಹಲ್ಬಿಯಾಹ್ ಸಂಪುಟ 2, ಪುಟ 303, ದರುಲ್ ಕುತುಬ್ ಇಲ್ಮೀಯ ಬೈರುತ್)

ಜನರು ಒಟ್ಟುಗೂಡಿದರು ಮತ್ತು ಪರಸ್ಪರ ಹತ್ತಿರವಾದಾಗ, ಹಿಂದ್ ಬಿಂತ್ ಉತ್ಬಾ ಮಹಿಳೆಯರೊಂದಿಗೆ ನಿಂತಳು ಮತ್ತು ಆ ಮಹಿಳೆಯರು ಡೋಲನ್ನು ಬಾರಿಸಲು ಪ್ರಾರಂಭಿಸಿದರು, ನಂತರ ಹಿಂದ್ ಕವಿತೆಗಳಲ್ಲಿ ಹೇಳಿದಳು. ವೀಕ್ಷಿಸಿ! ಬನೂ ಅಬ್ದುಲ್ ದಾರ್ ನೋಡಿ! ನಿಮ್ಮ ಪೀಳಿಗೆಯನ್ನು ರಕ್ಷಿಸುವವರೇ, ಮುಂದೆ ಹೋಗಿ ಒಳ್ಳೆಯ ಕತ್ತಿಯ ಸಾರವನ್ನು ತೋರಿಸಿರಿ ನಾವು ಗೌರವಾನ್ವಿತ ಜನರ ಹೆಣ್ಣುಮಕ್ಕಳಾಗಿದ್ದೇವೆ. ಹಾಡುತ್ತಾ ಹಾಡುತ್ತಾ ಈ ಕವಿತೆಗಳನ್ನು ಹೇಳುತ್ತಿದ್ದಳು. ನಾವು ಮೃದುವಾದ ಹಾಸಿಗೆಗಳ ಮೇಲೆ ನಡೆಯುತ್ತೇವೆ, ನಮ್ಮ ಕುತ್ತಿಗೆಗಳಲ್ಲಿ ಮುತ್ತು ರತ್ನಗಳಿವೆ, ನಮ್ಮ ಬೈತಲೆಯಲ್ಲಿ ಕಸ್ತೂರಿ ತುಂಬಿದೆ. ನೀವು ಮುನ್ನಡೆದರೆ, ನಾವು ನಿಮ್ಮನ್ನು ಅಪ್ಪಿಕೊಳ್ಳುತ್ತೇವೆ ಮತ್ತು

ನೀವು ಬೆನ್ನು ತಿರುಗಿಸಿದರೆ ನಾವು ನಿಮ್ಮಿಂದ ದುಃಖಿತರಾಗುತ್ತೇವೆ ಮತ್ತು ಈ ತಿರುಗುವಿಕೆಗೆ ನಾವು ವಿಷಾದಿಸುವುದಿಲ್ಲ. ಅವರ ಭಾವನೆಗಳನ್ನು ಉದ್ರೇಕಿಸಲು ಪ್ರಯತ್ನಿಸಿದರು. ಹಝ್ರತ್ ಪೈಗಂಬರ್(ಸ) ರವರು ಈ ಕವಿತೆಗಳನ್ನು ಕೇಳಿದಾಗ, ಅವರು ಹೇಳಿದರು: **ಅಲ್ಲಾಹುಮ್ಮ ಬಿಕ ಅಜೂಲು ವ ಬಿಕ ಅಸೂಲು ವ ಫೀಕ ಉಖಾತಿಲು ಹಸ್ಬಿಯಲ್ಲಾಹು ವ ನಿಅ್‌ಮಲ್ ವಕೀಲ್** ಅಂದರೆ ಓ ಅಲ್ಲಾಹನೇ! ನಾನು ನಿನ್ನೊಂದಿಗೆ ಸುತ್ತುತ್ತೇನೆ ಮತ್ತು ನಿನ್ನೊಂದಿಗೆ ಆಕ್ರಮಣ ಮಾಡುತ್ತೇನೆ ಮತ್ತು ನಿನ್ನ ಸಂತೋಷಕ್ಕಾಗಿ ಹೋರಾಡುತ್ತೇನೆ. ನನಗೆ ಸರ್ವಶಕ್ತನಾದ ಅಲ್ಲಾಹನೇ ಸಾಕಾಗಿದ್ದಾನೆ ಮತ್ತು ಅವನು ಎಷ್ಟು ಒಳ್ಳೆಯವನಾಗಿದ್ದಾನೆ. (ಸಬ್ಲುಲ್ ಹುದಾ ವರ್‌ರ್‍ಶಾದ್, ಸಂಪುಟ-4, ಪುಟಗಳು 191-192, ದಾರುಲ್ ಕುತುಬ್ ಇಲ್ಮೀಯಾ ಬೈರುತ್)

ಅವರು ಲೌಕಿಕ ಮೂಲವನ್ನು ಹೊಂದಿದ್ದರು. ಇಲ್ಲಿ ಹಝ್ರತ್ ಪೈಗಂಬರ್(ಸ)ರು ಹೇಳಿದರು: ನಮ್ಮ ಮೂಲವು ಅಲ್ಲಾಹನ ಅಸ್ತಿತ್ವವಾಗಿದೆ.

ಆದಾಗ್ಯೂ, ಈಗ ಎರಡು ಸೈನ್ಯಗಳ ನಡುವೆ ನಿಯಮಿತ ಯುದ್ಧ ಪ್ರಾರಂಭವಾಯಿತು. ಆ ದಿನ ಜನರು ಬಹಳವಾಗಿ ಹೋರಾಡಿದರು ಮತ್ತು ಯುದ್ಧವು ಉಲ್ಬಣಗೊಂಡಿತು. ಅಬು ದುಜಾನಾ ಅನ್ಸಾರಿ, ತಲ್ಹಾ ಬಿನ್ ಉಬೈದುಲ್ಲಾ, ಹಮ್ಜಾ ಬಿನ್ ಅಬ್ದುಲ್ ಮುತ್ತಲಿಬ್, ಅಲಿ ಬಿನ್ ಅಬು ತಾಲಿಬ್, ಅನಸ್ ಬಿನ್ ನಜ್ರ್ ಮತ್ತು ಸಾದ್ ಬಿನ್ ರಬಿ ಮೊದಲಾದವರು ಯುದ್ಧದಲ್ಲಿ ಹೆಚ್ಚಿನ ಧೈರ್ಯವನ್ನು ತೋರಿಸಿದರು. ಅಲ್ಲಾಹನು ತನ್ನ ಸಹಾಯವನ್ನು ಮುಸ್ಲಿಮರಿಗೆ ಕಳುಹಿಸಿದನು ಮತ್ತು ಅವನ ವಾಗ್ದಾನವನ್ನು ಪೂರೈಸಿದನು ಮತ್ತು ಮುಸ್ಲಿಮರು ಮುಶ್ರಿಕರನ್ನು ಸೈನ್ಯದಿಂದ ಹೊರಹಾಕುವವರೆಗೆ ಅಥವಾ ಅವರ ಸೈನ್ಯವನ್ನು ಓಡಿಸುವವರೆಗೂ ಕತ್ತಿಯಿಂದ ಕೊಂದರು. ಮುಶ್ರಿಕ್‌ರ ಕುದುರೆ ಸವಾರರು ಮುಸ್ಲಿಮರ ಮೇಲೆ ಮೂರು ಬಾರಿ ದಾಳಿ ಮಾಡಿದರು ಆದರೆ ಪ್ರತಿ ಬಾರಿ ಅವರು ಬಾಣಗಳಿಂದ ಹಿಮ್ಮೆಟ್ಟಿಸಿದರು. ಆ ದಿನ ಹಝ್ರತ್ ಉಮರ್(ರ) ತಮ್ಮ ಸಹೋದರ ಝೈದ್‌ರನ್ನು ಹೇಳಿದರು: ಓ ನನ್ನ ಸಹೋದರ! ನೀವು ನನ್ನ ರಕ್ಷಾಕವಚವನ್ನು ಧರಿಸಿಕೊಳ್ಳಿ, ಅದಕ್ಕೆ ಝೈದ್ ಹೇಳಿದರು, ನಾನು ಕೂಡ ನಿಮ್ಮಂತೆಯೇ ಹುತಾತ್ಮರಾಗಲು ಅಪೇಕ್ಷಿಸುತ್ತೇನೆ. ಹೀಗೆ ಈ ಇಬ್ಬರು ಸಹೋದರರು ರಕ್ಷಾಕವಚವನ್ನು ಧರಿಸಲಿಲ್ಲ. ಅವರು ಹುತಾತ್ಮತೆಯ ಉತ್ಸಾಹದಲ್ಲಿ ರಕ್ಷಾಕವಚವಿಲ್ಲದೆ ಹೋರಾಡಿದರು. ಆ ದಿನ ಹೋರಾಟವು ತೀವ್ರಗೊಂಡಾಗ, ಹಝ್ರತ್ ಪೈಗಂಬರ್(ಸ) ಅವರು ಅನ್ಸಾರ್‌ಗಳ ಧ್ವಜದ ಕೆಳಗೆ ಕುಳಿತು ಅಲಿ (ರ) ಅವರಿಗೆ ಧ್ವಜವನ್ನು ತೆಗೆದುಕೊಂಡು ಮುನ್ನಡೆಯಲು ಸಂದೇಶವನ್ನು ಕಳುಹಿಸಿದರು. ಇದಾದ ಮೇಲೆ ಹಝ್ರತ್ ಅಲಿ(ರ) ಮುಂದೆ ಹೋಗಿ, ನಾನು ಅಬು ಅಲ್-ಕುಸಾಮ್ ಎಂದು ಹೇಳಿದರು. ಇದಾದ ಮೇಲೆ ಒಬ್ಬ ಮುಶ್ರಿಕ್‌ನು ಹೊರಬಂದನು. ಅದು ತಲ್ಹಾ ಬಿನ್ ಅಬು ತಲ್ಹಾ ಆಗಿದ್ದನು. ಅವನ ಕೈಯಲ್ಲಿ ಮುಶ್ರಿಕೀನರ ಧ್ವಜವಿತ್ತು. ಏಕೆಂದರೆ ಯುದ್ಧಗಳಲ್ಲಿ ಧ್ವಜವನ್ನು ಹೊತ್ತ ಗೌರವವು ಬನೂ ಅಬ್ದ್ ಅಲ್-ದಾರ್ ಅವರ ಕುಟುಂಬಕ್ಕೆ ಮೀಸಲಾಗಿತ್ತು. ಏಕೆಂದರೆ ಖುರೈಷಿ ಧ್ವಜವನ್ನು ಅಬ್ದುಲ್ ದಾರ್ ಮಾಡಿದ್ದರು. ತಲ್ಹಾ ಬಿನ್ ಅಬು ತಲ್ಹಾ ಹೀಗೆ ಮುಬಾರಿಝತ್ (ಯುದ್ಧ ಮಾಡಲು ಕೇಳುವುದು) ಕೇಳಿದರು. ನನ್ನ ವಿರುದ್ಧ ಯಾರು ಬರುತ್ತಾರೆ? ಅವನು ಅವರ ಮುಸಲ್ಮಾನರಿಗೆ ಹಲವು ಬಾರಿ ಹೀಗೆ ಸವಾಲು ಹಾಕಿದನು, ಆದರೆ ಯಾರೂ ಅವರ ಬಳಿಗೆ ಬರಲಿಲ್ಲ, ಕೊನೆಗೆ, ತಲ್ಹಾ ಹೀಗೆ ಕರೆದು ಹೇಳಿದನು, ಓ ಮುಹಮ್ಮದ್(ಸ) ಅವರ ಸಹಚರರೇ! ನಿಮ್ಮ ಹುತಾತ್ಮರು ಸ್ವರ್ಗಕ್ಕೆ ಹೋಗುತ್ತಾರೆ ಮತ್ತು ನಮ್ಮ ಹುತಾತ್ಮರು ನರಕಕ್ಕೆ ಹೋಗುತ್ತಾರೆ ಎಂದು ನೀವು ಭಾವಿಸುತ್ತೀರಿ. ಒಂದು ವರದಿಯಲ್ಲಿ ಹೀಗಿದೆ: ಅವರು ಹೇಳಿದನು, ಓ ಮುಹಮ್ಮದ್(ಸ)ರ ಸಹಚರರೇ! ನಿಮ್ಮ ಕಲ್ಪನೆಯೆಂದರೆ, ಪರಮಾತ್ಮನಾದ ಅಲ್ಲಾಹನು ನಮ್ಮನ್ನು ನಿನ್ನ ಕತ್ತಿಯ ತುದಿಯಲ್ಲಿ ಇರಿಸಿ ನರಕಾಗ್ನಿಯಲ್ಲಿ ಎಸೆಯುತ್ತಾನೆ ಮತ್ತು ನಮ್ಮ ಕತ್ತಿಗಳಿಂದ ನಿಮ್ಮನ್ನು ಕೊಂದು ತಕ್ಷಣ ಸ್ವರ್ಗವನ್ನು ಪ್ರವೇಶಿಸುತ್ತಾನೆ. ಆದ್ದರಿಂದ ನಿಮ್ಮಲ್ಲಿ ಯಾರಿದ್ದಾರೆ ಅವರು ನನ್ನನ್ನು ತನ್ನ ಕತ್ತಿಯಿಂದ ಯಾರು ನರಕಕ್ಕೆ ಕಳುಹಿಸಬಲ್ಲರು ಅಥವಾ ನನ್ನ ಕತ್ತಿಯಿಂದ ಸ್ವರ್ಗಕ್ಕೆ ಪ್ರವೇಶಿಸುವರು ಯಾರಿದ್ದಾರೆ. ಹೀಗೆ ಆತನು ಪ್ರಚೋದಿಸಲು ಪ್ರಯತ್ನಿಸಿದನು. ಲಾತ್ ಮತ್ತು ಉಝ್ಝದ ಆಣೆ ನೀವೆಲ್ಲರು ಸುಳ್ಳುಗಾರರಾಗಿದ್ದೀರ ಎಂದು ಹೇಳತೊಡಗಿದ. ನಿಮ್ಮ ಈ ನಂಬಿಕೆಯನ್ನು ನೀವು ನಂಬಿದ್ದರೆ, ಖಂಡಿತವಾಗಿ ನಿಮ್ಮಲ್ಲಿ ಒಬ್ಬರು ಅಥವಾ ಇನ್ನೊಬ್ಬರು ಆ ಸಮಯದಲ್ಲಿ ನನ್ನೊಂದಿಗೆ ಸ್ಪರ್ಧಿಸಲು ಬರುತ್ತಿದ್ದರು. ಇದನ್ನು ಕೇಳಿದ ಹಝ್ರತ್ ಅಲಿ(ರ) ಹೊರಗೆ ಬಂದು ಹೋರಾಡಲು ಅವನ ಬಳಿಗೆ ಬಂದರು. ಇಬ್ಬರೂ ಕತ್ತಿಗಳಿಂದ ಹೋರಾಡಲು ಪ್ರಾರಂಭಿಸಿದರು ಮತ್ತು ಹಝ್ರತ್ ಅಲಿ(ರ) ಅವನನ್ನು ವಧಿಸಿದರು. ಇವರಿಬ್ಬರು ಎರಡು ಸೇನೆಗಳ ಮಧ್ಯದಲ್ಲಿ ಮುಖಾಮುಖಿಯಾದರು ಎಂದು ವರದಿ ಇದೆ. ಇದ್ದಕ್ಕಿದ್ದಂತೆ ಹಝ್ರತ್ ಅಲಿ(ರ) ಅವನ ಮೇಲೆ ಧಾವಿಸಿ ಅವನನ್ನು ಕೆಡವಿ, ಅವನ ಕಾಲು ಕತ್ತರಿಸಿ ನೆಲಕ್ಕೆ ಬೀಳುವಂತೆ ಮಾಡಿದರು. ಈ ಮೂಲಕ ಆತನ ದೇಹದ ಗುಪ್ತ ಭಾಗಗಳು ಬಯಲಾದವು. ಆ ವೇಳೆ ತಲ್ಹಾ 'ಓ ನನ್ನ ಸಹೋದರ! ನಾನು ದೇವರ ಸಲುವಗಿ ಕರುಣೆಗಾಗಿ ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ. ಇದನ್ನು ಕೇಳಿದ ಹಝ್ರತ್ ಅಲಿ(ರ) ಅಲ್ಲಿಂದ ಹಿಂತಿರುಗಿದರು ಅವನ ಮೇಲೆ ಆಕ್ರಮಣ ಮಾಡಲಿಲ್ಲ, ಕೆಲವು ಸಹಚರರು ಹಝ್ರತ್ ಅಲಿ(ರ) ಅವರಿಗೆ ನೀವು ಅವನನ್ನು ಏಕೆ ವಧಿಸಲಿಲ್ಲ? ಎಂದು ಕೇಳಿದರು ಅದಕ್ಕೆ ಹಝ್ರತ್ ಅಲಿ(ರ) ಹೇಳಿದರು: ಆತನ ಗುಪ್ತಾಂಗಗಳು ಬಯಲಾಗಿದ್ದವು ಮತ್ತು ಆತನು ನನ್ನ ಮುಂದೆ ನಿಂತಿದ್ದನು ನನಗೆ ಅವನ ಮೇಲೆ ಕರುಣೆ ಬಂತು ಮತ್ತು ಅಲ್ಲಾಹನು ಅವನನ್ನು ಕೊಂದನೆಂದು ನನಗೆ ತಿಳಿದಿದೆ.

ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ) ಅವರಿಗೆ ಹೇಳಿದರು: ನೀವು ಅವನನ್ನು ಏಕೆ ತೊರೆದಿದ್ದೀರಿ? ಹಝ್ರತ್ ಅಲಿ(ರ) ಹೇಳಿದರು ಅವನು ದೇವರ ಸಲುವಾಗಿ ನನ್ನಲ್ಲಿ ಕರುಣೆಯನ್ನು ಕೋರಿದ್ದಾನೆ. ಅದಕ್ಕೆ ಹಝ್ರತ್ ಪೈಗಂಬರ್(ಸ)ರವರು ಆತನನ್ನು ವಧಿಸು ಎಂದು ಉಪದೇಶಿಸಿದಾಗ ಅವರು ಅವನನ್ನು ವಧಿಸಿದರು.

ಮುಶ್ರಿಕೀನರ ಧ್ವಜವಾಹಕನ ಹತ್ಯೆಯು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ "ನಾನು ಆಡಿನ ಹಿಂಭಾಗದಲ್ಲಿ ಸವರಿ ಮಾಡಿದ್ದೇನೆ" ಎಂಬ ಕನಸಿನ ದೃಢೀಕರಣವಾಗಿದೆ.

ಹಝ್ರತ್ ಪೈಗಂಬರ್(ಸ) ಅವರು ಸಂತೋಷಪಟ್ಟರು ಮತ್ತು ಅಲ್ಲಾಹು ಅಕ್ಬರ್ ಎಂದು ಕೂಗಿದರು! ಅವರು ಹೀಗೆ ಹೇಳಿದಾಗ ಎಲ್ಲಾ ಮುಸ್ಲಿಮರೂ ಸಹ ಅಲ್ಲಾಹು ಅಕ್ಬರ್! ಎಂದು ಹೇಳಿ ಅವರು ಮುಶ್ರಿಕೀನರ ಮೇಲೆ ಎಷ್ಟು ಉಗ್ರವಾಗಿ ದಾಳಿ ಮಾಡಿದರು ಎಂದರೆ ಅವರ ಪಂಕ್ತಿಗಳು ಚದುರಿಹೋದವು.

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಸಹಾಬರವರು ವಿವಿಧ ಗುಂಪುಗಳಾಗಿ ವಿಂಗಡಿಸಲ್ಪಟ್ಟು ವೈರಿಗಳನ್ನು ತಮ್ಮ ಉಪಸ್ಥಿತಿಯಿಂದ ಓಡಿಸುವವರೆಗೂ ಕತ್ತಿಗಳಿಂದ ಕತ್ತರಿಸಲು ಪ್ರಾರಂಭಿಸಿದರು. ತಲ್ಹಾನನ್ನು ಕೊಂದ ನಂತರ, ಅವನ ಸಹೋದರ ಅಬು ಶಿಬಾ ಉಸ್ಮಾನ್ ಬಿನ್ ಅಬು ತಲ್ಹಾ ಅವನು ಮುಶ್ರಿಕೀನರ ಧ್ವಜವನ್ನು ಎತ್ತಿಕೊಂಡನು, ನಂತರ ಹಝ್ರತ್ ಹಂಝಾ(ರ) ಅವರು ಆತನ ಮೇಲೆ ದಾಳಿ ಮಾಡಿದರು, ಅವನ ಕೈಯನ್ನು ಭುಜದ ತನಕ ಕತ್ತರಿಸಲಾಯಿತು ಮತ್ತು ಅವನ ಕತ್ತಿಯನ್ನು ಅದರ ಮುಷ್ಠಿಯ ತನಕ ಕತ್ತರಿಸಲಾಯಿತು. ಅವನನ್ನು ಕೊಂದ ನಂತರ, ಹಝ್ರತ್ ಹಂಝಾ(ರ) ನಾನು ಹಾಜಿಗಳನ್ನು ನೀರು ನೀಡುವವನಾಗಿದ್ದೇನೆ ಅಂದರೆ ಅಬ್ದುಲ್ ಮುತ್ತಲಿಬ್ ಅವರ ಪುತ್ರನಾಗಿದ್ದೇನೆ ಎಂದು ಹೇಳುತ್ತಾ ಅಲ್ಲಿಂದ ಹಿಂದಿರುಗಿದರು. ಅದರ ನಂತರ, ಮುಶ್ರಿಕೀನರ ಧ್ವಜವನ್ನು ಉಸ್ಮಾನ್ ಮತ್ತು ತಲ್ಹಾ ಅವರ ಸಹೋದರ ಎತ್ತಿದರು, ಅವರ ಹೆಸರು ಅಬು ಸೈದ್ ಬಿನ್ ಅಬು ತಲ್ಹಾ ಎಂದಾಗಿತ್ತು. ಹಝ್ರತ್ ಸಾದ್ ಬಿನ್ ಅಬಿ ವಕ್ಕಾಸ್(ರ)ರು ಆತನ ಮೇಲೆ ಬಾಣವನ್ನು ಹೊಡೆದರು, ಅದು ಅವನ ಎದೆಗೆ ಬಡಿದು ಅವನನ್ನೂ ಕೊಂದಿತು. ಆ ನಂತರ ಹಝ್ರತ್ ಅಲಿ(ರ) ಅವರಿಂದ ಹತ್ಯೆಗೀಡಾದ ತಲ್ಹಾ ಬಿನ್ ಅಬು ತಲ್ಹಾ, ಅವರ ಪುತ್ರ ಮುಸಾಫಿ ಧ್ವಜಾಧಾರಿಯಾದನು, ನಂತರ ಹಝ್ರತ್ ಆಸಿಮ್ ಬಿನ್ ಸಾಬಿತ್ ಅವನ ಮೇಲೆ ಬಾಣವನ್ನು ಹೊಡೆದರು ಮತ್ತು ಅವನೂ ಕೊಲ್ಲಲ್ಪಟ್ಟನು. ನಂತರ ಮುಸಾಫಿಯ ಸಹೋದರ ಹಾರಿಸ್ ಬಿನ್ ತಲ್ಹಾ ಧ್ವಜಾರೋಹಣ ಮಾಡಿದರು. ಆಗ ಹಝ್ರತ್ ಅಸೀಮ್ ಬಾಣವನ್ನು ಹೊಡೆದು ಅವನನ್ನೂ ಕೊಂದರು.

ತಲ್ಹಾ ಅವರ ಇಬ್ಬರು ಮಕ್ಕಳಾದ ಮುಸಾಫಿ ಮತ್ತು ಹಾರಿಸ್ ಅವರ ತಾಯಿಯೂ ಮುಶ್ರಿಕೀನರ ಸೈನ್ಯದಲ್ಲಿದ್ದಳು. ಈ ಮಹಿಳೆಯ ಹೆಸರು ಸಲಾಫಾ ಎಂದಾಗಿತ್ತು. ಯಾರಿಗೆ ಹಝ್ರತ್ ಆಸೀಮ್ ಅವರ ಬಾಣ ತಗುಲುತ್ತದೆಯೋ ಅದೇ ಪುತ್ರ ಅಲ್ಲಿಂದ ಗಾಯಗೊಂಡು ಹಿಂತಿರುಗಿ ತಾಯಿಯ ಮಡಿಲಲ್ಲಿ ತಲೆಯಿಟ್ಟು ಮಲಗುತ್ತಾನೆ. ಸಲಾಫಾ ಹೇಳಿದಳು, ನಿನಗೆ ಗಾಯಗೊಳಿಸಿದವರು ಯಾರು? ಅದಕ್ಕೆ ಪುತ್ರ ಉತ್ತರಿಸಿದನು, ನಾನು ಈ ವ್ಯಕ್ತಿಯ ಧ್ವನಿಯನ್ನು ಕೇಳಿದೆ. ನನ್ನ ಮೇಲೆ ಬಾಣವನ್ನು ಹೊಡೆದ ನಂತರ ಅವನು ತೊಗೊ ಇದನ್ನು ಸಹಿಸಿಕೊ ನಾನು ಅಬು ಫಲಾಹ್ ಅವರ ಪುತ್ರನಾಗಿದ್ದೇನೆ ಎಂದು ಹೇಳಿದನು. ಹಾಗಾಗಿ ಆಸೀಮ್ ಬಿನ್ ಸಾಬಿತ್ ನ ತಲೆ ನನ್ನ ಕೈ ಮೇಲೆ ಬಿದ್ದರೆ ಅದಕ್ಕೆ ದ್ರಾಕ್ಷಾರಸ ತುಂಬಿ ಕುಡಿಯುತ್ತೇನೆ ಎಂದು ಪ್ರತಿಜ್ಞೆ ಮಾಡಿದಳು ಅಂದರೆ ಅವರ ತಾಯಿ. ಮತ್ತು ಆಸಿಮ್ ಬಿನ್ ಸಾಬಿತ್ ಅವರ ತಲೆಯನ್ನು ಕತ್ತರಿಸಿ ನನ್ನ ಬಳಿಗೆ ತಂದರೆ, ನಾನು ಅವನಿಗೆ ನೂರು ಒಂಟೆಗಳನ್ನು ಬಹುಮಾನವಾಗಿ ನೀಡುತ್ತೇನೆ ಎಂದು ಅವಳು ಘೋಷಿಸಿದಳು, ಆದರೆ ಈ ಉಹುದ್ ಯುದ್ಧದಲ್ಲಿ ಹಝ್ರತ್ ಆಸಿಮ್ ಹುತಾತ್ಮನಾಗಲಿಲ್ಲ. ಅವರು ಸರಿಯಾ ರಾಜೀ ನಲ್ಲಿ ಹುತಾತ್ಮರಾದರು. ಆದ್ದರಿಂದ, ಈ ಇಬ್ಬರು ಸಹೋದರರ ಹತ್ಯೆಯ ನಂತರ, ಅವರ ಮೂರನೇ ಸಹೋದರ ಕಿಲಾಬ್ ಬಿನ್ ತಲ್ಹಾ ಅವರು ಧ್ವಜವನ್ನು ಹಾರಿಸಿದನು, ಅವನನ್ನು ಹಝ್ರತ್ ಝುಬೈರ್ ಕೊಂದರು. ಒಂದು ವರದಿಯ ಪ್ರಕಾರ, ಅವನನ್ನು ಕುಜ್ಮಾನ್ ಕೊಂದನು, ನಂತರ ಅವನ ಸಹೋದರ ಜಲಸ್ ಬಿನ್ ತಲ್ಹಾ ಧ್ವಜವನ್ನು ಎತ್ತಿದನು ಮತ್ತು ಹಝ್ರತ್ ತಲ್ಹಾ ಬಿನ್ ಉಬೈದುಲ್ಲಾ ಅವನನ್ನು ಕೊಂದರು. ಈ ರೀತಿಯಲ್ಲಿ ಮುಸಾಫಿ, ಹಾರಿಸ್, ಕಲಾಬ್ ಮತ್ತು ಜಲಸ್ ಎಂಬ ಈ ನಾಲ್ಕು ಸಹೋದರರು ಅಲ್ಲಿ ಅವರ ತಂದೆ ತಲ್ಹಾ ಅವರಂತೆಯೇ ಕೊಲ್ಲಲ್ಪಟ್ಟರು ಮತ್ತು ಅವರೊಂದಿಗೆ ಅವರ ಇಬ್ಬರು ಚಿಕ್ಕಪ್ಪರಾದ ಉಸ್ಮಾನ್ ಮತ್ತು ಅಬು ಸಯೀದ್ ಸಹ ಉಹುದ್ ಯುದ್ಧದ ದಿನದಂದು ಕೊಲ್ಲಲ್ಪಟ್ಟರು.

ಅವರ ನಂತರ, ಖುರೈಷಿಯರ ಧ್ವಜವನ್ನು ಅರ್ತಾ ಬಿನ್ ಶಹರಬೀಲ್ ಎತ್ತಿದಾಗ ಅವನು ಹಝ್ರತ್ ಅಲಿ(ರ) ಅವರಿಂದ ಕೊಲ್ಲಲ್ಪಟ್ಟನು. ಹಝ್ರತ್ ಹಂಝಾ ಕೊಂದರು ಎಂಬ ವರದಿಯೂ ಇದೆ. ಅದರ ನಂತರ, ಶರೀಹ್ ಬಿನ್ ಕಾರಿಜ್ ಅವರು ಧ್ವಜವನ್ನು ವಹಿಸಿಕೊಂಡಾಗ, ಅವನೂ ಕೊಲ್ಲಲ್ಪಟ್ಟನು, ಆದರೆ ಅವನ ಕೊಲೆಗಾರನ ಹೆಸರು ತಿಳಿದಿಲ್ಲ. ಅದರ ನಂತರ, ಈ ಧ್ವಜವನ್ನು ಅಬು ಝೈದ್ ಬಿನ್ ಅಮ್ರ್ ಅವನು ಎತ್ತಿದನು. ಅವನನ್ನು ಕುಜ್ಮಾನ್ ಕೊಂದರು. ಅದರ ನಂತರ, ಶಹರಾಬಿಲ್ ಬಿನ್ ಹಾಶಿಮ್ ಅವನ ಪುತ್ರ ಧ್ವಜಾರೋಹಣ ಮಾಡಿದನು ಮತ್ತು ಅವನೂ ಕುಜ್ಮಾನ್‌ನಿಂದ ಕೊಲ್ಲಲ್ಪಟ್ಟನು. ಅದರ ನಂತರ, ಈ ಜನರ ಗುಲಾಮ ಸವಾಬ್ ಈ ಧ್ವಜವನ್ನು ಎತ್ತಿದನು. ಅವನು ಅಬಿಸ್ಸಿನಿಯನ್ ವ್ಯಕ್ತಿಯಾಗಿದ್ದನು, ಅವನು ತನ್ನ ಕೈಯನ್ನು ಕತ್ತರಿಸುವವರೆಗೂ ಹೋರಾಡಿದನು. ಕುಜ್ಮಾನ್‌ನಿಂದ ವಧೆಯಾಗುವವರೆಗೂ ಅವನು ಬೇಗನೆ ಕುಳಿತು ತನ್ನ ಎದೆ ಮತ್ತು ಕುತ್ತಿಗೆಯ ಸಹಾಯದಿಂದ ಧ್ವಜವನ್ನು ಎತ್ತು ಹಿಡಿದಿದ್ದನು. ಒಂದು ವರದಿಯ ಪ್ರಕಾರ ಹೀಗೆ ಎಲ್ಲಾ ಧ್ವಜಧಾರಿಗಳು ವಧಿಸಲ್ಪಟ್ಟಾಗ ಮುಶ್ರಿಕೀನರು ಸೋತು ಓಡಿಹೋದರು ಮತ್ತು ಅವರ ಮಹಿಳೆಯರು ಅವರ ಸಾವಿಗೆ ಶಪಿಸುತ್ತಿದ್ದರು.

ಧ್ವಜಾಧಾರಿಗಳನ್ನು ಕೊಲ್ಲಲಾಗುವುದು ಎಂದು ಹಝ್ರತ್ ಪೈಗಂಬರ್(ಸ) ಅವರು ತಮ್ಮ ಕನಸಿನಲ್ಲಿ ನೋಡಿದಂತೆ. ಅವರೆಲ್ಲರೂ ಕೊಲ್ಲಲ್ಪಟ್ಟರು ಮತ್ತು ಮುಸ್ಲಿಮರು

ಅವರನ್ನು ಹಿಂಬಾಲಿಸಿದರು ಮತ್ತು ಸೈನ್ಯದಿಂದ ಅವರನ್ನು ಓಡಿಸುವವರೆಗೂ ಕೊಲ್ಲುತ್ತಿದ್ದರು.

ಖುರೈಶ್ ಸೈನ್ಯದೊಂದಿಗೆ ಬಂದ ಮಹಿಳೆಯರೂ ಓಡಿಹೋದರು. ಖುರೈಷಿಗಳ ಸೋಲಿನ ಬಗ್ಗೆ ಯಾವುದೇ ಸಂದೇಹವಿರಲಿಲ್ಲ. ಮುಸ್ಲಿಮರು ಮುಶ್ರಿಕೀನರ ಸೈನ್ಯವನ್ನು ಪ್ರವೇಶಿಸಿದರು ಮತ್ತು ಯುದ್ಧ ಸಂಪತ್ತನ್ನು ಸಂಗ್ರಹಿಸಲು ಪ್ರಾರಂಭಿಸಿದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಈ ಬಗ್ಗೆ ಬರೆಯುತ್ತಾರೆ, "ಮೊದಲನೆಯದಾಗಿ, ಅಬು ಆಮಿರ್ ಮತ್ತು ಅವನ ಸಹಚರರು ಖುರೈಶ್ ಸೈನ್ಯದಿಂದ ಮುನ್ನಡೆದರು ..... ಇವರು ಔಸ್ ಗೋತ್ರದವರಾಗಿದ್ದನು ಮತ್ತು ಮದೀನಾದಲ್ಲಿ ವಾಸಿಸುತ್ತಿದ್ದನು ಮತ್ತು ರಹಾಬ್ ಎಂದು ಕರೆಯಲ್ಪಡುತ್ತಿದ್ದನು. ಹಝ್ರತ್ ಪೈಗಂಬರ್(ಸ) ಅವರು ಮದೀನಾಗೆ ಬಂದಾಗ, ಸ್ವಲ್ಪ ಸಮಯದ ನಂತರ ಈ ವ್ಯಕ್ತಿಯು ದುರುದ್ದೇಶ ಮತ್ತು ಅಸೂಯೆಯಿಂದ ತುಂಬಿದನು ಮತ್ತು ತನ್ನ ಕೆಲವು ಸಹಚರರೊಂದಿಗೆ ಮಕ್ಕಾಗೆ ಹೋದನು ಮತ್ತು ಮಕ್ಕಾದ ಖುರೈಶಿಗಳನ್ನು ಹಝ್ರತ್ ಪೈಗಂಬರ್(ಸ) ಮತ್ತು ಮುಸ್ಲಿಮರ ವಿರುದ್ಧ ಪ್ರಚೋದಿಸುವುದನ್ನು ಮುಂದುವರೆಸಿದನು. ಹಾಗಾಗಿ ಈಗ ಉಹುದ್ ಯುದ್ಧದಲ್ಲಿ ಖುರೈಷಿಗಳ ಬೆಂಬಲಿಗನಾಗಿ ಮುಸ್ಲಿಮರ ವಿರುದ್ಧದ ಯುದ್ಧದಲ್ಲಿ ಪಾಲ್ಗೊಂಡನು. ಮತ್ತು ಅಬು ಆಮಿರ್‌ನ ಪುತ್ರ ಹಂಝುಲಾ ಅತ್ಯಂತ ಪ್ರಾಮಾಣಿಕ ಮುಸಲ್ಮಾನ ಮತ್ತು ಈ ಯುದ್ಧದ ಸಂದರ್ಭದಲ್ಲಿ ಇಸ್ಲಾಮಿನ ಸೈನ್ಯಕ್ಕೆ ಸೇರಿಸಲ್ಪಟ್ಟನು ಮತ್ತು ಬಹಳ ಶೌರ್ಯದಿಂದ ಹೋರಾಡುವಾಗ ಹುತಾತ್ಮನಾದನು. ಅಬು ಆಮಿರ್ ಔಸ್ ಗೋತ್ರದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದರಿಂದ, ಈಗ ನಾನು ಇಷ್ಟು ಸುದೀರ್ಘವಾದ ಪ್ರತ್ಯೇಕತೆಯ ನಂತರ ಮದೀನಾದ ಜನರ ಮುಂದೆ ಇರುತ್ತೇನೆ, ಅವರು ನನ್ನೊಂದಿಗೆ ಪ್ರೀತಿಯಲ್ಲಿ ತಕ್ಷಣವೇ ಮುಹಮ್ಮದ್(ಸ) ಅವರನ್ನು ತೊರೆಯುತ್ತಾರೆ ಎಂಬ ದೃಢವಾದ ಭರವಸೆಯನ್ನು ಹೊಂದಿದ್ದನು. ಈ ಭರವಸೆಯಲ್ಲಿ, ಅಬು ಆಮಿರ್ ತನ್ನ ಸಹಚರರನ್ನು ಕರೆದುಕೊಂಡು ಮೊದಲು ಮುಂದೆ ಹೋಗಿ ದೊಡ್ಡ ಧ್ವನಿಯಲ್ಲಿ ಕೂಗಲು ಪ್ರಾರಂಭಿಸಿದನು. ಔಸ್ ಗೋತ್ರದ ಜನರೇ! ನಾನು ಅಬು ಆಮಿರ್, ಅದಕ್ಕೆ ಅನ್ಸಾರ್ ಒಂದೇ ಸಮನೆ ಹೇಳಿದರು. ದೂರ ಸರಿ ಸುಳ್ಳುಗಾರನೇ! ನಿನ್ನ ಕಣ್ಣುಗಳು ತಣ್ಣಗಾಗದಿರಲಿ ಮತ್ತು ಅಂತಹ ಕಲ್ಲುಗಳ ಸುರಿಮಳೆಯೊಂದಿಗೆ ಅಬು ಆಮಿರ್ ಮತ್ತು ಅವನ ಸಹಚರರು ಹಿಂದಕ್ಕೆ ಓಡಿದರು. ಈ ದೃಶ್ಯವನ್ನು ನೋಡಿದ ಖುರೈಷಿಗಳ ನಾಯಕ ತಲ್ಹಾ ಬಹಳ ಉತ್ಸಾಹದಿಂದ ಮುಂದೆ ಹೋಗಿ ಬಹಳ ಸೊಕ್ಕಿನ ಸ್ವರದಲ್ಲಿ ಯೋಧನನ್ನು ಕರೆದನು. ಹಝ್ರತ್ ಅಲಿ(ರ) ಮುಂದೆ ಹೋಗಿ ತಲ್ಹಾನನ್ನು ಕತ್ತರಿಸಿದರು. ಅದರ ನಂತರ ತಲ್ಹಾನ ಸಹೋದರ ಉಸ್ಮಾನ್ ಮುಂದೆ ಬಂದನು ಮತ್ತು ಹಝ್ರತ್ ಹಂಝಾ(ರ) ಮುಂದೆ ಬಂದು ಅವನಿಗೆ ತಕ್ಷಣ ವಧಿಸಿದರು. ಈ ದೃಶ್ಯವನ್ನು ನೋಡಿದ ಅವಿಶ್ವಾಸಿಗಳು ಕೋಪಗೊಂಡು ಸಾಮಾನ್ಯ ಆಕ್ರಮಣವನ್ನು ಮಾಡಿದರು. ಮುಸಲ್ಮಾನರೂ ತಕ್ಬೀರ್ ಘೋಷಣೆಗಳನ್ನು ಕೂಗುತ್ತಾ ಮುನ್ನುಗ್ಗಿದರು ಮತ್ತು ಉಭಯ ಸೇನೆಗಳು ಘರ್ಷಣೆಗೆ ಒಳಗಾದವು.

..... ಹೀಗೆ ಖುರೈಶರ ಧ್ವಜವಾಹಕರನ್ನು ಕೊಂದ ನಂತರ, ಎರಡು ಸೈನ್ಯಗಳು ಜಟಿಲಗೊಂಡವು ಮತ್ತು ಭೀಕರ ಯುದ್ಧವು ನಡೆಯಿತು ಮತ್ತು ರಕ್ತಪಾತವು ಎರಡೂ ಕಡೆಗಳಲ್ಲಿ ದೀರ್ಘಕಾಲ ಮುಂದುವರೆಯಿತು. ಅಂತಿಮವಾಗಿ, ಖುರೈಶ್ ಸೈನ್ಯವು ಇಸ್ಲಾಮಿಕ್ ಸೈನ್ಯದ ಮುಂದೆ ನಿಧಾನವಾಗಿ ಚಲಿಸಲು ಪ್ರಾರಂಭಿಸಿತು. ಹೀಗಾಗಿ, ಪ್ರಸಿದ್ಧ ಬ್ರಿಟಿಷ್ ಇತಿಹಾಸಕಾರ ಸರ್ ಮಿಲಿಯನ್ ಮ್ಯೂರ್ ಬರೆಯುತ್ತಾನೆ: ಮುಸ್ಲಿಮರ ಭೀಕರ ದಾಳಿಯ ಮುಂದೆ ಮಕ್ಕಾದ ಸೈನ್ಯದ ಪಾದಗಳು ನಡುಗಲು ಪ್ರಾರಂಭಿಸಿದವು. ಖುರೈಶ್‌ನ ಸೇನಾಧಿಪತಿಗಳು ಇಸ್ಲಾಮಿನ ಸೈನ್ಯದ ಎಡಭಾಗವನ್ನು ಹಿಂಭಾಗದಿಂದ ಆಕ್ರಮಣ ಮಾಡಲು ಹಲವು ಬಾರಿ ಪ್ರಯತ್ನಿಸಿತು. ಆದರೆ ಪ್ರತಿ ಬಾರಿಯೂ ಮುಹಮ್ಮದ್(ಸ) ಅವರು ವಿಶೇಷವಾಗಿ ನಿಯೋಜಿಸಿದ್ದ ಐವತ್ತು ಬಿಲ್ಲುಗಾರರ ಬಾಣಗಳನ್ನು ತಿಂದ ನಂತರ ಅವರು ಹಿಮ್ಮೆಟ್ಟಬೇಕಾಯಿತು.

ಬದ್ರ್ ಸಂದರ್ಭದಲ್ಲಿ ತೋರಿದ ಅದೇ ಧೈರ್ಯ ಮತ್ತು ಪೌರುಷ ಮತ್ತು ಸಾವು ಮತ್ತು ಅಪಾಯದ ಬಗ್ಗೆ ಅದೇ ಅಸಡ್ಡೆಯನ್ನು ಉಹದ್ ಕ್ಷೇತ್ರದಲ್ಲಿ ಮುಸ್ಲಿಮರು ತೋರಿಸಿದರು.

ಈ ಇಂಗ್ಲಿಷ್ ಇತಿಹಾಸಕಾರ ಬರೆಯುತ್ತಿದ್ದಾರೆ. ಮಕ್ಕಾದ ಸೈನ್ಯದ ಪಂಕ್ತಿಗಳು ಹರಿದುಹೋದವು. ಅಬು ದುಜಾನಾ ತನ್ನೊಂದಿಗೆ ಕೆಂಪು ಕರವಸ್ತ್ರವನ್ನು ಕಟ್ಟಿಕೊಂಡಾಗ, ಅವರು ಅವರ ಮೇಲೆ ದಾಳಿ ಮಾಡುತ್ತಿದ್ದರು ಮತ್ತು ಮುಹಮ್ಮದ್(ಸ) ತನಗೆ ನೀಡಿದ ಕತ್ತಿಯಿಂದ ಅವರು ಸಾವನ್ನು ಸುತ್ತಲೂ ಹರಡುತ್ತಿದ್ದನು. ಹಂಝಾ ತನ್ನ ತಲೆಯ ಮೇಲೆ ಶಹಾಮೃಗದ ಗರಿಗಳ ಕಿರೀಟವನ್ನು ಬೀಸುತ್ತಿರುವಂತೆ ಎಲ್ಲೆಡೆ ಕಾಣಿಸಿಕೊಳ್ಳುತ್ತಿತ್ತು. ಉದ್ದನೆಯ ಮತ್ತು ಬಿಳಿ ಕೂದಲಿನ ಅಲಿ ಮತ್ತು ಹಳದಿ ಪೇಟವನ್ನು ಹೊಂದಿರುವ ಜುಬೈರ್, ಧೈರ್ಯಶಾಲಿ ಇಲ್ಯಡ್‌ನಂತೆ, ಅವರು ಹೋದಲ್ಲೆಲ್ಲಾ, ಅವರು ತಮ್ಮೊಂದಿಗೆ ಸಾವು ಮತ್ತು ಶತ್ರುಗಳಿಗೆ ತೊಂದರೆಯನ್ನು ತಂದರು." ಈ ಇಲಿಯಡ್ ಅನ್ನು ವಿಲಿಯಂ ಮಿಯೂರ್ ಉಲ್ಲೇಖಿಸಿರುವುದು ಇವರು ಗ್ರೀಕ್ ಕಥೆಗಳ ನಾಯಕನಾಗಿದ್ದಾನೆ. ಉಗ್ರ ಯೋಧರಾಗಿದ್ದವರು. ಆದಾಗ್ಯೂ, ಇವುಗಳು ನಂತರದ ಇಸ್ಲಾಮಿಕ್ ವಿಜಯಗಳ ವೀರರಿಗೆ ತರಬೇತಿ ನೀಡಿದ ದೃಶ್ಯಗಳಾಗಿವೆ ಎಂದು ಅವರು ಹೇಳುತ್ತಾರೆ.

ಹೀಗೆ, ಭೀಕರ ಯುದ್ಧವು ನಡೆಯಿತು ಮತ್ತು ಬಹಳ ಉಗ್ರವಾಯಿತು ಮತ್ತು ಪ್ರಾಬಲ್ಯದ ಅಂಶವು ದೀರ್ಘಕಾಲದವರೆಗೆ ಅನುಮಾನಾಸ್ಪದವಾಗಿ ಉಳಿಯಿತು. ಆದರೆ ಅಂತಿಮವಾಗಿ, ದೇವರ ದಯೆಯಿಂದ, ಖುರೈಷಿಗಳ ಪಾದಗಳನ್ನು ಕಿತ್ತುಹಾಕಲು ಪ್ರಾರಂಭಿಸಿತು ಮತ್ತು ಅವರ ಸೈನ್ಯದಲ್ಲಿ ಅಸ್ವಸ್ಥತೆ ಮತ್ತು ನಿರ್ಗತಿಕತೆಯ ಚಿಹ್ನೆಗಳು ಕಾಣಿಸಿಕೊಳ್ಳಲಾರಂಭಿಸಿದವು. ಖುರೈಶ್ ನಾಯಕರು ಒಬ್ಬೊಬ್ಬರಾಗಿ ಕೊಲ್ಲಲ್ಪಟ್ಟರು ಮತ್ತು ಅವರಲ್ಲಿ ಸುಮಾರು ಒಂಬತ್ತು ಮಂದಿ ತಮ್ಮ ರಾಷ್ಟ್ರಧ್ವಜವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು ಆದರೆ ಅವರೆಲ್ಲರನ್ನೂ ಮುಸ್ಲಿಮರು ಕೊಂದರು. ಕೊನೆಗೆ, ತಲ್ಹಾದ ಸಾವಾಬ್ ಎಂಬ ಅಬಿಸ್ಸಿನಿಯಾದ ಗುಲಾಮನು ಧೈರ್ಯದಿಂದ ಮುಂದೆ ಬಂದು ಅವನ ಕೈಯಲ್ಲಿ ಧ್ವಜವನ್ನು ತೆಗೆದುಕೊಂಡನು, ಆದರೆ ಒಬ್ಬ ಮುಸಲ್ಮಾನ ಅವನ ಮೇಲೆ ದಾಳಿ ಮಾಡಿ ಅವನ ಎರಡೂ ಕೈಗಳನ್ನು ಒಂದೇ ಏಟಿನಲ್ಲಿ ಕತ್ತರಿಸಿ ಕುರೈಶ್ ಧ್ವಜವನ್ನು ನೆಲಕ್ಕೆ ಬೀಳುವಂತೆ ಮಾಡಿದನು. ಸಾವಾಬ್‌ನ ಶೌರ್ಯ ಮತ್ತು ಉತ್ಸಾಹದ ಸಂಕೇತವೆಂದರೆ ಅವನೂ ಅದರೊಂದಿಗೆ ನೆಲದ ಮೇಲೆ ಬಿದ್ದು ಧ್ವಜವನ್ನು ಎದೆಯಿಂದ ಎತ್ತಲು ಪ್ರಯತ್ನಿಸಿದನು, ಆದರೆ ಧ್ವಜ ಕೆಳಗೆ ಬೀಳುವ ಮೌಲ್ಯವನ್ನು ತಿಳಿದ ಈ ಮುಸಲ್ಮಾನನು, ಸವಾಬ್‌ನನ್ನು ಮೇಲಿನಿಂದ ಕತ್ತಿಯಿಂದ ಹೊಡೆದನು. ಅದರ ನಂತರ, ಯಾವುದೇ ಖುರೈಷಿಗಳು ತಮ್ಮ ಜ್ಞಾನವನ್ನು ಹೆಚ್ಚಿಸಲು ಧೈರ್ಯವನ್ನು ಹೊಂದಿರಲಿಲ್ಲ. ಮತ್ತೊಂದೆಡೆ, ಮುಸ್ಲಿಮರು ಹಝ್ರತ್ ಪೈಗಂಬರ್(ಸ) ಅವರ ಆದೇಶವನ್ನು ಅನುಸರಿಸಿದರು ಮತ್ತು ತಕ್ಬೀರ್ ಪಠಿಸಿದರು. ಶೀಘ್ರದಲ್ಲೇ ಮೈದಾನವನ್ನು ಬಹುತೇಕ ತೆರವುಗೊಳಿಸಲಾಯಿತು. ಮುಸಲ್ಮಾನರಿಗೆ ಎಂಥ ತೃಪ್ತಿದಾಯಕ ಪರಿಸ್ಥಿತಿಯೂ ನಿರ್ಮಾಣವಾಗಿದ್ದು, ಅವರು ಯುದ್ಧ ಸಂಪತ್ತು ಸಂಗ್ರಹಿಸುವುದರಲ್ಲಿ ನಿರತರಾದರು.

(ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶಿರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–488–491)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯುದ್ಧ ನಡೆಯಿತು ಹಾಗೂ ಅಲ್ಲಾಹನ ಸಹಾಯ ಮತ್ತು ನೆರವಿನಿಂದ ಸ್ವಲ್ಪ ಸಮಯದಲ್ಲೇ 650 ಮುಸ್ಲಿಮರ ಮುಂದೆ ಮಕ್ಕಾದ ಮೂರು ಸಾವಿರ ಅನುಭವಿ ಸೈನಿಕರು ತಲೆಯ ಮೇಲೆ ಕೈಯಿಟ್ಟು ಪರಾರಿಯಾದರು.

ಹಝ್ರತ್ ಪೈಗಂಬರ್(ಸ) ಹೇಳಿದ್ದು ಕೇವಲ ತಾಕೀತಾಗಿ ಆಗಿತ್ತು ಎಂದೂ ಶತ್ರುಗಳು ಓಡಿ ಹೋದರೂ ಕೂಡ ಇಲ್ಲಿ ನಿಲ್ಲಬೇಕು ಎಂದು ಹಝ್ರತ್ ಪೈಗಂಬರ್(ಸ) ಉದ್ದೇಶಿಸಿರಲು ಸಾಧ್ಯವಲ್ಲವೆಂದೂ ಆ ವೇಳೆ ಪರ್ವತದ ಹಾದಿಯಲ್ಲಿದ್ದ ಮುಸ್ಲಿಮರು ಭಾವಿಸಿದರು. ಆದ್ದರಿಂದ ಅವರು ಕಣಿವೆಯನ್ನು ಬಿಟ್ಟು ಯುದ್ಧ ಮೈದಾನಕ್ಕೆ ಧುಮುಕಿದರು.

(ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–249)

ಈ ಅವಿಧೇಯತೆಯಿಂದ ಅನಂತರ ಉಂಟಾದ ಪರಿಣಾಮಗಳ ಬಗ್ಗೆ ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು.

ಅಬೂದಜಾನಾದ ಬಗ್ಗೆ ಸರ್ ವಿಲಿಯಂ ಮ್ಯೂರ್ ಹೀಗೆ ಬರೆದಿದ್ದಾನೆ. ಅದರ ವಿವರಣೆಯಲ್ಲಿ ಹಝ್ರತ್ ಪೈಗಂಬರ್(ಸ) ಅವರ ಕತ್ತಿಯನ್ನು ತೆಗೆದುಕೊಂಡು ಅದರ ಹಕ್ಕನ್ನು ಈಡೇರಿಸುವವರು ಯಾರಾಗಿದ್ದಾರೆ? ಬರೆಯಲಾಗಿದೆ.

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಹುದಿನ ದಿನದಂದು ಒಂದು ಖಡ್ಗವನ್ನು ಹಿಡಿದು ಹೀಗೆ ಹೇಳಿದರು: ಇದನ್ನು ನನ್ನಿಂದ ಯಾರು ಪಡೆಯುವರು? ಇದರ ಹಕ್ಕುಗಳು ಏನೆಂದು ಹಝ್ರತ್ ಅಬೂದುಜಾನ(ರ) ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಇದರಿಂದ ಯಾವನೇ ಮುಸ್ಲಿಮನನ್ನು ವಧಿಸಬಾರದು ಹಾಗೂ ಯಾವನೇ ಸತ್ಯನಿಷೇಧಿಗೆ ಭಯಪಟ್ಟು ಓಡಬಾರದು ಮತ್ತು ಧೈರ್ಯದಿಂದ ಎದುರಿಸಬೇಕು. ಅವರು ಆ ಖಡ್ಗವನ್ನು ಪಡೆದು ಮುಶ್ರಿಕರ ತಲೆಗಳನ್ನು ಒಡೆದರು ಮತ್ತು ಅದರ ಹಕ್ಕನ್ನು ನೆರವೇರಿಸಿದರು. (ಸಹೀಹ್ ಮುಸ್ಲಿಮ್, ಕಿತಾಬ್ ಫಝಾಯಿಲುಸ್ಸಹಾಬ, ಹದೀಸ್–6353) ಇಸು ಸಹೀಹ್ ಮುಸ್ಲಿಮ್‌ನ ವರದಿಯಾಗಿದೆ.

ಇಬ್ನೆ ಉತ್ತ ಹೀಗೆ ಬರೆದಿದ್ದಾರೆ ಅಂದರೆ ರಸೂಲುಲ್ಲಾಹ್(ಸ) ರವರು ತಮ್ಮ ಖಡ್ಗವನ್ನು ತೋರಿಸಿದಾಗ, ಹಝ್ರತ್ ಉಮರ್(ರ) ಅವರು ಅದನ್ನು ಕೇಳಿದಾಗ ಹಝ್ರತ್ ಪೈಗಂಬರ್(ಸ)ರವರು ಅದನ್ನು ತಿರಸ್ಕರಿಸಿದರು. ಮೊದಲು ಹಝ್ರತ್ ಉಮರ್(ರ) ಅದನ್ನು ಕೇಳಲು ಪ್ರಯತ್ನಿಸಿದರು, ನಂತರ ಹಝ್ರತ್ ಝುಬೈರ್(ರ) ಅದನ್ನು ಕೇಳಿದರು, ಆದರೆ ಹಝ್ರತ್ ಪೈಗಂಬರ್(ಸ) ಅವರು ಅದನ್ನು ಅವರಿಗೆ ನೀಡಲಿಲ್ಲ. ಹಾಗಾಗಿ ಇಬ್ಬರೂ ಮನದಲ್ಲೇ ಪಶ್ಚಾತ್ತಾಪ ಪಟ್ಟರು ಮತ್ತು ಝುಬೈರ್ ಮೂರು ಬಾರಿ ಕತ್ತಿಯನ್ನು ಕೇಳಿದರು ಎಂಬ ವರದಿಯೂ ಇದೆ. ಪ್ರತಿ ಬಾರಿಯೂ ಹಝ್ರತ್ ಪೈಗಂಬರ್(ಸ) ವಿರೋಧಿಸಿದರು. ಹಝ್ರತ್ ಅಲಿ(ರ) ಎದ್ದುನಿಂತು ಒತ್ತಾಯಿಸಿದರು, ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಕುಳಿತುಕೊಳ್ಳಿ ಎಂದು ಹೇಳಿದರು. (ಸಬ್ಲುಲ್ ಹುದಾ ವರ್ರಶ್ದ್, ಸಂಪುಟ–4, ಪುಟ–192, ದಅರುಲ್ ಕುತುಬ್ ಇಲ್ಮೀಯ ಬೈರುತ್) ಅವರಿಗೂ ನೀಡಲಿಲ್ಲ.

ಈ ಸಂದರ್ಭದಲ್ಲಿ ಆ ಕತ್ತಿಯನ್ನು ನೀಡಬೇಕೆಂದು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ ಸಹಚರರಲ್ಲಿ ಹಝ್ರತ್ ಅಬೂಬಕರ್(ರ) ಕೂಡ ಇದ್ದರು ಎಂದು ಒಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. (ಶರ್ಹ್ ಝುರ್ಖಾನಿ, ಸಂಪುಟ–2, ಪುಟ–404, ದಾರುಲ್ ಕುತುಬ್ ಇಲ್ಮೀಯ ಬೈರುತ್)

ಒಂದು ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಇದರ ಹಕ್ಕನೊಂದಿಗೆ ಯಾರು ಇದನ್ನು ಉಪಯೋಗಿಸುತ್ತೀರ? ಎಂದು ಕೇಳಿದಾಗ. ಅಬೂದಜಾನಾ(ರ) ಇದರ ಹಕ್ಕು ಏನಾಗಿದೆ? ಎಂದು ಕೇಳಿದರು ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು: ಮುಸ್ಲಿಮನನ್ನು ಅದರೊಂದಿಗೆ ಕೊಲ್ಲಬೇಡಿ ಮತ್ತು ಅದು ಇರುವಾಗ ಯಾವ ಅವಿಶ್ವಾಸಿಯ ವಿರುದ್ಧ ಹೋರಾಡಲು ಓಡಿಹೋಗಬಾರದು. ದೃಢ ಸಂಕಲ್ಪದೊಂದಿಗೆ ಯುದ್ಧವಾಡಬೇಕು.

ಅದಕ್ಕೆ ಹಝ್ರತ್ ಅಬುದಜಾನಾ(ರ) ಹೇಳಿದರು. ನಾನು ಈ ಕತ್ತಿಯನ್ನು ಅದರ ಹಕ್ಕಿನೊಂದಿಗೆ ತೆಗೆದುಕೊಳ್ಳುತ್ತೇನೆ. ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಅಬುದಜಾನಾ(ರ) ಅವರಿಗೆ ಕತ್ತಿಯನ್ನು ನೀಡಿದಾಗ, ಅವರು ಮುಶ್ರಿಕೀನರ ತಲೆಯನ್ನು ಹರಿದು ಹಾಕಿದರು. ಈ ಸಂದರ್ಭದಲ್ಲಿ ಅವರು ಈ ಕವಿತೆಯನ್ನು ಹೇಳಿದರು:

**ಅನಲ್ಲಝೀ ಆಹಬನೀ ಖಲೀಲೀ**

*(ಪುಟ ಸಂಖ್ಯೆ–12ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಹಝ್ರತ್ ಪೈಗಂಬರ್(ಸ)ರ ಶಕ್ತವಾದ ಆದೇಶವಿದ್ದೂ ಪರ್ವತದ ಹಾದಿಯಲ್ಲಿ ನೇಮಿಸಲ್ಪಟ್ಟವರಲ್ಲಿ ಅನೇಕರು ಆ ಜಾಗವನ್ನು ಬಿಟ್ಟು ಹೋದಾಗ ಶತ್ರುಗಳು ಆ ಮಾರ್ಗದಿಂದ ದಾಳಿ ನಡೆಸಿದರು ಮತ್ತು ಮುಸ್ಲಿಮರಿಗೆ ತೀವ್ರ ನಷ್ಟ ಉಂಟುಮಾಡಿದರು.

ಲೌಕಿಕ ಅಭಿಲಾಷೆಗಳಿಗಾಗಿ ಕಣಿವೆಯನ್ನು ಬಿಟ್ಟು ಹೋಗಿದ್ದರು ಎಂದು ಸಹಾಬಿಯರ ಬಗ್ಗೆ ಹೇಳುವುದು ಸರಿಯೆಂದು ಅನಿಸುತ್ತಿಲ್ಲ..... ಸಹಾಬರವರ ಬಗ್ಗೆ ಅವರಿಗೆ ಯುದ್ಧ ಸಂಪತ್ತಿನ ಆಸೆಯಿತ್ತು ಎಂದು ಹೇಳುವುದು ಅಥವಾ ಯೋಚಿಸುವುದು ಕೂಡ ಅವರ ಮಹಿಮೆಗೆ ವಿರುದ್ಧವಾದ ಸಂಗತಿಯಾಗಿದೆ.

ಆ ಸಮಯದಲ್ಲಿ ಮುಸಲ್ಮಾನರು ಯುದ್ಧ ಸಂಪತ್ತನ್ನು ಸಂಗ್ರಹಿಸುವುದರಲ್ಲಿ ಮತ್ತು ಮುಶ್ರಿಕೀನರನ್ನು ಖೈದಿಗಳಾಗಿ ತೆಗೆದುಕೊಳ್ಳುವುದರಲ್ಲಿ ನಿರತರಾಗಿದ್ದರು, ಇದ್ದಕ್ಕಿದ್ದಂತೆ ಅವಿಶ್ವಾಸಿಗಳ ಕುದುರೆ ಸವಾರರು ಅವರ ತಲೆಯ ಮೇಲೆ ಧಾವಿಸಿದರು.

ಹಝ್ರತ್ ಹಂಝ(ರ) ಶಹೀದ್ ಆದ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿದಾಗ ಅವರು ಬಹಳ ದುಃಖಿತರಾದರು. ವರದಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: ತಾಯಿಫ್ ಯುದ್ಧದ ನಂತರ ಹಝ್ರತ್ ಹಂಝ(ರ)ರ ಕೊಲೆಗಾರನಾದ ವಹ್‌ಶೀ ಗುಲಾಮನು ಹಝ್ರತ್ ಪೈಗಂಬರ್(ಸ)ರ ಮುಂದೆ ಬಂದಾಗ ಹಝ್ರತ್ ಪೈಗಂಬರ್(ಸ) ಆತನನ್ನು ಕ್ಷಮಿಸಿದರು. ಆದರೆ ವಹ್‌ಶಿ ಕೊಲೆಗಾರ ನನ್ನ ಮುಂದೆ ಬರದಿರಲಿ ಎಂದು ಹಝ್ರತ್ ಹಂಝ(ರ)ರೊಡನೆ ಇದ್ದ ಪ್ರೀತಿಗೆ ಗೌರವ ನೀಡುತ್ತಾ ಹಝ್ರತ್ ಪೈಗಂಬರ್(ಸ) ಹೇಳಿದರು.

**ಉಹದ್ ಯುದ್ಧದ ಸಂದರ್ಭದಲ್ಲಿ ಸಯ್ಯಿದು ಶ್ಶುಹದಾ ಹಝ್ರತ್ ಹಮ್‌ಝಾ(ರ) ರವರ ಶಹಾದತ್ ಮತ್ತಿತರ ಸಂಭವಿಸಿದ ಪರಿಸ್ಥಿತಿಗಳು ಹಾಗೂ ಘಟನೆಗಳ ಪ್ರಸ್ತಾವನೆ ಮತ್ತು ಫಲಸ್ತೀನರಿಗೆ ದುಆ ಮಾಡಲು ಮನವಿ**

ತಮ್ಮ ಧ್ವನಿಯನ್ನು ಉಚ್ಚಗೊಳಿಸಲು, ನಿಜವಾಗಿಯೂ ಒಗ್ಗಟ್ಟಿನಿಂದ ಈ ದೌರ್ಜನ್ಯದ ವಿರುದ್ಧ ದನಿಯೆತ್ತಲು ಮತ್ತು ಇದನ್ನು ಕೊನೆಗೊಳಿಸಲು ಪ್ರಯತ್ನಿಸುವಂತಾಗಲು ಮುಸ್ಲಿಮ್ ದೇಶಗಳಿಗೂ ಅಲ್ಲಾಹನು ಧೈರ್ಯ ನೀಡಲಿ.

ಇಬ್ಬರು ದಿವಂಗತರಾದ ಗ಼ಝ್ಝಾದ ಮಾನ್ಯ ಶೇಖ್ ಅಹ್ಮದ್ ಹುಸೈನ್ ಅಬು ಸರ್ದಾನ ಸಾಹಿಬ್ ಮತ್ತು ಕೀನಿಯಾದ ಮಾನ್ಯ ಉಸ್ಮಾನ್ ಅಹ್ಮದ್ ಗಾಕೋರಿಯಾ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಾಗು ನಮಾಝೆ ಜನಾಝ ಗ಼ಾಯಿಬ್ ನಿರ್ವಹಣೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **22-12-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಖುತ್ಬಗಳಲ್ಲಿ ಇತ್ತೀಚೆಗೆ ಉಹುದ್ ಯುದ್ಧದ ಪ್ರಸ್ತಾಪ ನಡೆಯುತ್ತಿದೆ. ಪ್ರಸ್ತಾಪಿಸಲಾದಂತೆ ಯುದ್ಧದಲ್ಲಿ ಮುಸ್ಲಿಮರು ಸತ್ಯನಿಷೇಧಿಗಳಿಗೆ ಬಹಳಷ್ಟು ನಷ್ಟ ಉಂಟುಮಾಡಿದರು ಮತ್ತು ಸತ್ಯನಿಷೇಧಿಗಳು ಪರಾರಿಯಾಗಲು ನಿರ್ಬಂಧಿತರಾಗಿದ್ದರು. ಆದರೆ ಹಝ್ರತ್ ಪೈಗಂಬರ್(ಸ)ರ ಶಕ್ತವಾದ ಆದೇಶವಿದ್ದೂ ಪರ್ವತದ ಹಾದಿಯಲ್ಲಿ ನೇಮಿಸಲ್ಪಟ್ಟವರಲ್ಲಿ ಅನೇಕರು ಆ ಜಾಗವನ್ನು ಬಿಟ್ಟು ಹೋದಾಗ ಶತ್ರುಗಳು ಆ ಮಾರ್ಗದಿಂದ ದಾಳಿ ನಡೆಸಿದರು ಮತ್ತು ಮುಸ್ಲಿಮರಿಗೆ ತೀವ್ರ ನಷ್ಟ ಉಂಟುಮಾಡಿದರು. ಇದರ ಸ್ವಲ್ಪ ವಿಶದ ವಿವರಣೆ ಹೀಗಿದೆ: ಮುಶ್ರಿಕರ ಧ್ವಜವಾಹಕರು ಒಬ್ಬೊಬ್ಬರಾಗಿ ವಧಿಸಲ್ಪಟ್ಟಾಗ ಮತ್ತು ಯಾರೂ ಧ್ವಜವನ್ನು ಎತ್ತಲು ಅಥವಾ ಅದರ ಬಳಿಗೆ ಬರಲು ಧೈರ್ಯ ಮಾಡಲಿಲ್ಲ. ಮುಶ್ರಿಕರು ಬೆನ್ನು ತಿರುಗಿಸಿ ಓಡಲು ಆರಂಭಿಸಿದರು. ಸ್ವಲ್ಪ ಸಮಯದ ಮುಂಚೆ ಸಂತೋಷದ ಸ್ವರದಿಂದ ಮತ್ತು ಉತ್ಸಾಹದಿಂದ ಹಾಡುತ್ತಿದ್ದ ಅವರ ಮಹಿಳೆಯರು ಸಹ ಡೋಲುಗಳನ್ನು ಎಸೆದು ಪರ್ವತದ ಕಡೆಗೆ ಓಡಿಹೋದರು. ಮುಶ್ರಿಕರು ಪರಾರಿ ಆಗುತ್ತಿರುವುದನ್ನು ಮುಸ್ಲಿಮರು ಕಂಡಾಗ, ಅವರು ಮುಶ್ರಿಕರನ್ನು ಬೆನ್ನಟ್ಟುವುದರಲ್ಲಿ ಮತ್ತು ಯುದ್ಧ ಸಂಪತ್ತನ್ನು ಒಟ್ಟುಗೂಡಿಸುವುದರಲ್ಲಿ ನಿರತರಾದರು. ಅದೇ ವೇಳೆ ಯಾವುದೇ ಅವಸ್ಥೆಯಲ್ಲೂ ತಮ್ಮ ಜಾಗವನ್ನು ಬಿಡದಿರಿ ಎಂದು ಆದೇಶ ನೀಡಿಕೊಂಡು ಪರ್ವತದ ಹಾದಿಯಲ್ಲಿ ಹಝ್ರತ್ ಪೈಗಂಬರ್(ಸ) ನಿಶ್ಚಯಿಸಿದ ಬಿಲ್ಲುಗಾರರ ತಂಡ ಯುದ್ಧ ಸಂಪತ್ತನ್ನು ಒಟ್ಟುಗೂಡಿಸಲಿಕ್ಕಾಗಿ ತಮ್ಮ ಜಾಗದಿಂದ ಓಡಿ ಹೋದರು ಎಂದು ಹೇಳಲಾಗುತ್ತದೆ. ಹಝ್ರತ್ ಪೈಗಂಬರ್(ಸ) ಅಮೀರಾಗಿ ನೇಮಿಸಿದ ಹಝ್ರತ್ ಅಬ್ದುಲ್ಲಾಹ್ ಬಿನ್ ಜುಬೈರ್(ರ) ಓಡಿ ಹೋಗುವವರನ್ನು ತಡೆದರು. ಆದರೆ ಅವರು ನಿಲ್ಲಲಿಲ್ಲ. ಮತ್ತು ಅವರು ಮುಶ್ರಿಕೀನರು ಸೋಲಲ್ಪಟ್ಟಿದ್ದಾರೆ, ಈಗ ನಾವು ಇಲ್ಲಿ ಇದ್ದು ಏನು ಮಾಡಬೇಕು? ಎಂದು ಹೇಳತೊಡಗಿದರು. ಹೀಗೆ ಹೇಳಿ ಆ ಜನರು ಪರ್ವತದಿಂದ ಇಳಿದು ಯುದ್ಧ ಸಂಪತ್ತನ್ನು ಸಂಗ್ರಹಿಸಲು ಆರಂಭಿಸಿದರು. ಅವರಲ್ಲಿ ಹೆಚ್ಚಿನವರು ತಮ್ಮ ಸ್ಥಳವನ್ನು ತೊರೆದಿದ್ದರೂ, ಅವರ ಅಮೀರ್ ಹಝ್ರತ್ ಅಬ್ದುಲ್ಲಾ ಬಿನ್ ಜುಬೈರ್(ರ) ಮತ್ತು ಇತರ ಕೆಲವು ಸಹಚರರು ತಮ್ಮ ಸ್ಥಳದಲ್ಲಿಯೇ ಉಳಿದರು, ಅವರ ಸಂಖ್ಯೆ ಹತ್ತಕ್ಕಿಂತ ಕಡಿಮೆಯಾಗಿತ್ತು. ಅವರು ಕೆಳಗೆ ಹೋಗುತ್ತಿದ್ದವರಿಗೆ, ಅಂದರೆ ಪರ್ವತದಿಂದ ಕೆಳಗೆ ಬರುತ್ತಿದ್ದವರಿಗೆ, ಹಝ್ರತ್ ಪೈಗಂಬರ್(ಸ) ಅವರ ಆದೇಶವನ್ನು ನಾನು ಎಂದಿಗೂ ಉಲ್ಲಂಘಿಸುವುದಿಲ್ಲ ಎಂದು ಹೇಳಿದರು.

ಪರ್ವತದ ಹಾದಿಯನ್ನು ಬಿಟ್ಟು ಹೋಗಿದ್ದ ಸಹಾಬಿಯರು ಯುದ್ಧ ಸಂಪತ್ತನ್ನು ಒಂದುಗೂಡಿಸುವ ಅವಸರದಲ್ಲಿ ಇದ್ದರು ಎಂದು ಹೆಚ್ಚಿನ ಚರಿತ್ರೆಗಾರರು ಹಾಗೂ ಇತಿಹಾಸದ ಗ್ರಂಥಗಳಲ್ಲಿ ಮತ್ತು ಹದೀಸುಗಳಲ್ಲಿ ಬರೆಯಲಾಗಿದೆ. ಅದೇ ರೀತಿಯಲ್ಲಿ ಸಹಾಬಿಯರು ಯುದ್ಧದಲ್ಲಿ ಲಭಿಸಿದ ಸಂಪತ್ತನ್ನು ಪಡೆಯಲಿಕ್ಕಾಗಿ ಬೇಗನೇ ಹೋಗಲು ಬಯಸಿದ್ದರು ಎಂದು ಸೂರ ಆಲಿ ಇಮ್ರಾನಿನ 153ನೇ ವಚನ ಮಿನ್‌ಕುಮ್ ಮ್ಮೆಂಯುರೀದುದ್ದುನಿಯಾ ವ ಮಿನ್‌ಕುಮ್ ಮ್ಮೆಂ ಯುರೀದುಲ್ ಆಖಿರ ಅಂದರೆ: ನಿಮ್ಮಲ್ಲಿ ಕೆಲವರು ಈ ಲೋಕವನ್ನು ಬಯಸುವವರಾಗಿದ್ದರು ಹಾಗೂ ನಿಮ್ಮಲ್ಲಿ ಕೆಲವರು ಪರಲೋಕವನ್ನು ಬಯಸುವವರಾಗಿದ್ದರು. ಆ ಬಳಿಕ ಅವನು ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ ಅವರಿಂದ ನಿಮ್ಮನ್ನು ದೂರ ಸರಿಸಿದನು (ಶತ್ರುಗಳ ಆಕ್ರಮಣದಿಂದ ರಕ್ಷಿಸಿದನು). ಇದರ ವ್ಯಾಖ್ಯಾನದಲ್ಲಿ ವ್ಯಾಖ್ಯಾನಗಾರರು ಕೂಡ ಬರೆದಿರುವರು. ಆದರೆ ಲೌಕಿಕ ಅಭಿಲಾಷೆಗಳಿಗಾಗಿ ಕಣಿವೆಯನ್ನು ಬಿಟ್ಟು ಹೋಗಿದ್ದರು ಎಂದು ಸಹಾಬಿಯರ ಬಗ್ಗೆ ಹೇಳುವುದು ಸರಿಯೆಂದು ಅನಿಸುತ್ತಿಲ್ಲ.

ಈ ಬಗ್ಗೆ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಅಪ್ರಕಟಿತ ಟಿಪ್ಪಣಿಯನ್ನು ಬರೆದಿದ್ದಾರೆ, ನಾನು ಅದನ್ನು ಮುಂದೆ ಅದರ ವ್ಯಾಖ್ಯಾನದಲ್ಲಿ ವಿವರಿಸುತ್ತೇನೆ. ಅದಕ್ಕೂ ಮೊದಲು ನಾನು ಏನನ್ನಾದರೂ ವಿವರಿಸುತ್ತೇನೆ ಅಥವಾ ಇಡೀ ಆಯತ್ ಅನ್ನು ಮೊದಲು ವಿವರಿಸುತ್ತೇನೆ. ಇಡೀ ವಚನವು ಹೀಗಿದೆ: ಹತ್ತಾ ಇಝಾ ಫಶಿಲ್ತುಮ್ ವತನಾಝಅ್‌ತುಮ್ ಫಿಲ್‌ಅಮ್ರಿ ವ ಅಸೀತುಮ್ ಮಿಮ್ ಬಅ್‌ದಿ ಮಾ ಅರಾಕುಮ್ ಮಾ ತುಹಿಬ್ಬೂನ್, ಮಿನ್‌ಕುಮ್ ಮ್ಮೆಂ ಯುರೀದು ದ್ದುನಿಯಾ ವ ಮಿನ್‌ಕುಮ್ ಮ್ಮೆಂ ಯುರೀದುಲ್ ಆಖಿರತ, ಸುಮ್ಮ ಸರಫಕುಮ್ ಅನ್‌ಹುಮ್ ಲಿಯಬ್‌ತಲಿಯಕುಮ್, ವಲಖದ್ ಅಫಾ ಅನ್‌ಕುಮ್, ವಲ್ಲಾಹು ಝುಲ್ ಫಝ್ಲಿನ್ ಅಲಲ್‌ಮುಮಿನೀನ್ (ಆಲಿಇಮ್ರಾನ್: 153) ಅಲ್ಲಾಹನ ಆಣತಿಯಂತೆ ನೀವು ಅವರನ್ನು ಕೊಂದು ನಿರ್ನಾಮ ಮಾಡುತ್ತಿದ್ದಾಗ, ಅವನು ತನ್ನ ವಾಗ್ದಾನಗಳನ್ನು ನಿಮಗೆ ಪೂರೈಸಿಕೊಟ್ಟನು. ಹಾಗೆ ನೀವು ಇಷ್ಟಪಡುವುದನ್ನು ಅವನು ನಿಮಗೆ ತೋರಿಸಿಕೊಟ್ಟ ಬಳಿಕ ನೀವು ಆಲಸಿಗರಾಗಿ (ಪ್ರವಾದಿ ನಿಮಗೆ ನೀಡಿದ) ಆದೇಶದ ಬಗ್ಗೆ ಪರಸ್ಪರ ಭಿನ್ನಾಭಿಪ್ರಾಯವನ್ನು ಹೊಂದಿ ಅವಿಧೇಯತೆ ತೋರಿಸತೊಡಗಿದಾಗ (ಅವನು ತನ್ನ ಸಹಾಯವನ್ನು ಹಿಂದೆಗೆದನು). ನಿಮ್ಮಲ್ಲಿ ಕೆಲವರು ಈ ಲೋಕವನ್ನು ಬಯಸುವವರಾಗಿದ್ದರು ಹಾಗೂ ನಿಮ್ಮಲ್ಲಿ ಕೆಲವರು ಪರಲೋಕವನ್ನು ಬಯಸುವವರಾಗಿದ್ದರು.ಆ ಬಳಿಕ ಅವನು ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ ಅವರಿಂದ ನಿಮ್ಮನ್ನು ದೂರ ಸರಿಸಿದನು (ಶತ್ರುಗಳ ಆಕ್ರಮಣದಿಂದ ರಕ್ಷಿಸಿದನು). ಖಂಡಿತವಾಗಿಯೂ ಅವನು ನಿಮ್ಮನ್ನು ಕ್ಷಮಿಸಿದ್ದಾನೆ. ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಅತ್ಯಧಿಕ ಔದಾರ್ಯ ತೋರಿಸುವವನಾಗಿದ್ದಾನೆ.

ಈ ವಚನದ ವ್ಯಾಖ್ಯಾನದಲ್ಲಿ ಯುದ್ಧ ಸಂಪತ್ತನ್ನು ಸಂಗ್ರಹಿಸಲು ಅಥವಾ ಈ ಯುದ್ಧದ ಬಗ್ಗೆ ಆಗಿದೆ ಎಂದು ಹೇಳಲಾಗುತ್ತದೆ.

ಸಹಾಬರವರ ಬಗ್ಗೆ ಅವರಿಗೆ ಯುದ್ಧ ಸಂಪತ್ತಿನ ಆಸೆಯಿತ್ತು ಎಂದು

ಹೇಳುವುದು ಅಥವಾ ಯೋಚಿಸುವುದು ಕೂಡ ಅವರ ಮಹಿಮೆಗೆ ವಿರುದ್ಧವಾದ ಸಂಗತಿಯಾಗಿದೆ. ಅವರಂತು ತಮ್ಮ ಪತ್ನಿ ಮಕ್ಕಳು, ತಮ್ಮ ಸಂಪತ್ತನ್ನು ಮಾತ್ರವಲ್ಲ ತಮ್ಮ ಜೀವವನ್ನು ಕೂಡ ಹಝ್ರತ್ ಪೈಗಂಬರ್(ಸ)ರಿಗಾಗಿ ಸಮರ್ಪಿಸಿದ್ದರು. ಯುದ್ಧ ಜಯಿಸಿದರೆ ಯುದ್ಧ ಸಂಪತ್ತು ಲಭಿಸುವುದು ಒಂದು ಹೆಚ್ಚುವರಿ ಸಂಗತಿ ಆಗಿರಬಹುದು. ಆದರೆ ಸಹಾಬಿಯರ ಉದ್ದೇಶ ಮತ್ತು ಗುರಿ ಯುದ್ಧ ಸಂಪತ್ತು ಖಂಡಿತವಾಗಿಯೂ ಆಗಿರಲು ಸಾಧ್ಯವಲ್ಲ.

ಆದಾಗ್ಯೂ ಇಸ್ಲಾಮಿನ ಇತಿಹಾಸದಲ್ಲಿ ಮತ್ತು ಅದೇ ರೀತಿಯಲ್ಲಿ, ಇತಿಹಾಸಕಾರರು ಅಥವಾ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಕಾರರು ಅಥವಾ ಮುಹದ್ದಿಸ್‌ಗಳು ಅಥವಾ ವ್ಯಾಖ್ಯಾನಕಾರರಿಗೆ ಈ ಹಿರಿಯರು ಎಲ್ಲೋ ತಪ್ಪನ್ನು ಮಾಡಿದ್ದಾರೆ ಎಂದು ತೋರುತ್ತದೆ. ಕೇವಲ ವರದಿಯ ದಾಖಲೆ ಇತ್ಯಾದಿಗಳನ್ನು ನೊಂಬಿ ಈ ಜನರು ತಮ್ಮ ಸರಳತೆಯಲ್ಲಿ ಅಥವಾ ಈ ವರದಿಯು ಸರಿಯಾಗಿರಬಹುದು ಎಂದು ವಿಶ್ವಾಸ ಹೊಂದಿ, ಸಹಾಬರವರು ಯುದ್ಧ ಸಂಪತ್ತನ್ನು ಸಂಗ್ರಹಿಸಲು ಪರ್ವತದಿಂದ ಇಳಿದಿದ್ದಾರೆ ಎಂದು ಹೇಳಿದ್ದಾರೆ. ಹಝ್ರತ್ ಪೈಗಂಬರ್(ಸ) ಅವರ ವ್ಯಕ್ತಿತ್ವವಾಗಲಿ ಅಥವಾ ಅವರ(ಸ) ದೈವಿಕ ಶಕ್ತಿಯಿಂದ ಪ್ರಭಾವಿತರಾದ ಸಹಾಬ(ರ)ರವರ ಗೌರವ ಹಾಗೂ ಮಹಿಮೆಯ ವಿಷಯದಲ್ಲಿ ಇದು ಎಷ್ಟು ಹಾನಿಕಾರಕವೆಂದು ಸಾಬೀತುಪಡಿಸಬಹುದು ಎಂಬುದನ್ನು ಅವರಿಗೆ ತಿಳಿದಿರಲಿಲ್ಲ. ಆದಾಗ್ಯೂ, ಸಹಾಬರವರ ತ್ಯಾಗಗಳು ಮತ್ತು ಹುತಾತ್ಮತೆಯನ್ನು ನೋಡಿದರೆ, ಸಹಾಬಿಗಳು ಯುದ್ಧ ಸಂಪತ್ತನ್ನು ಸಂಗ್ರಹಿಸಲು ಮಾತ್ರ ಈ ಪರ್ವತದ ಕಣಿವೆಯನ್ನು ಬಿಡುವ ಆತುರದಲ್ಲಿದ್ದರು ಎಂದು ನಂಬುವುದು ಕಷ್ಟ. ಒಟ್ಟಿನಲ್ಲಿ ಸತ್ಯನಿಷೇಧಿಗಳ ಮೇಲೆ ಸ್ಪಷ್ಟವಾದ ವಿಜಯ ಲಭಿಸಿದ್ದನ್ನು ಮತ್ತು ಮುಸ್ಲಿಮರು ಸತ್ಯನಿಷೇಧಿಗಳನ್ನು ಓಡಿಸುವುದನ್ನು ಪರ್ವತದ ಹಾದಿಯಲ್ಲಿದ್ದ ಸಹಾಬಿಯರು ಕಂಡಾಗ ಅವರು ಸಹ ಯುದ್ಧದ ವಿಜಯದ ಖುಶಿಯ ಆಚರಣೆಯಲ್ಲಿ ಭಾಗವಹಿಸಲು ಹಂಬಲಿಸಿದರು. ನಮ್ಮ ಸಹೋದರರು ಜಿಹಾದಿನಲ್ಲಿ ನೇರವಾಗಿ ಭಾಗವಹಿಸುತ್ತಿದ್ದಾರೆ ಮತ್ತು ನಾವು ಈ ಪರ್ವತದ ಹಾದಿಯಲ್ಲಿ ಸುಮ್ಮನೆ ನಿಂತಿದ್ದೇವೆ ಎಂದು ಅವರಿಗೆ ಬಹುಶಃ ಅನಿಸಿರಬಹುದು. ಆದ್ದರಿಂದ ಯುದ್ಧದ ಕೊನೆಯ ನಿಮಿಷಗಳಲ್ಲಿ ಜಿಹಾದಿನಲ್ಲಿ ನೇರವಾಗಿ ಭಾಗಿಯಾಗಲು ಮತ್ತು ವಿಜಯದ ಖುಶಿಯ ಆಚರಣೆಯಲ್ಲಿ ಪಾಲ್ಗೊಳ್ಳಲು ಅವರು ಪರ್ವತದ ಹಾದಿಯನ್ನು ಬಿಟ್ಟು ಯುದ್ಧ ಮೈದಾನಕ್ಕೆ ಧುಮುಕಿದರು. ಆದರೆ ಅವರ ಅಮೀರ್ ಹಝ್ರತ್ ಅಬ್ದುಲ್ಲಾ ಬಿನ್ ಜುಬೈರ್(ರ) ಅವರು ಅತ್ಯಂತ ಉದಾರ ವ್ಯಕ್ತಿ ಎಂದು ಸಾಬೀತುಪಡಿಸಿತು. ಅವರಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಆದೇಶದ ಮೇಲೆ ದೃಷ್ಟಿ ಇತ್ತು. ಅವರು ಏನೇ ಆಗಲಿ ಈ ಸ್ಥಳವನ್ನು ತ್ಯಜಿಸ ಬಾರದು ಎಂದು ಅವರ ನಿರ್ಧಾರವಾಗಿತ್ತು.

ನಾನು ಹೇಳಿದಂತೆ, ಸೂರ ಆಲಿ ಇಮ್ರಾನಿನ 153ನೇ ವಚನದ ವ್ಯಾಖ್ಯಾನವನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಮಾಡಿರುವರು. ಅದು ಇಲ್ಲಿಯ ವರೆಗೂ ಪ್ರಕಾಶನಗೊಂಡಿಲ್ಲ. ಅದರಲ್ಲಿ ಅವರು ಹೇಳುತ್ತಾರೆ: ವಮಿನ್‌ಕುಮ್ ಮೈಂ ಯುರೀದುದ್ದುನಿಯಾ– ಈ ಸ್ಥಳದಲ್ಲಿ, ಲೌಕಿಕ ಎಂದರೆ ಯುದ್ಧ ಸಂಪತ್ತಲ್ಲ ಬದಲಿಗೆ ಲೌಕಿಕ ವಸ್ತುಗಳು ಎಂದಾಗಿದೆ ಮತ್ತು ಪರಲೋಕ ಎಂದರೆ ಅಂತ್ಯ ಮತ್ತು ಅಂತಿಮ ಫಲಿತಾಂಶವಾಗಿದೆ. ನಮಗೆ ಯುದ್ಧ ಸಂಪತ್ತು ಸಿಗುವುದಿಲ್ಲ ಎಂಬ ಕಲ್ಪನೆ ಅವರಲ್ಲಿದೆ ಎಂದು ಭಾವಿಸುವುದು ಸತ್ಯಕ್ಕೆ ವಿರುದ್ಧವಾಗಿದೆ ಏಕೆಂದರೆ ಬದ್ರ್‌ನಲ್ಲಿ ಕೆಲವು ನಿರ್ಬಂಧಗಳಿಂದ ಯುದ್ಧಕ್ಕೆ ಸೇರಲು ಸಾಧ್ಯವಾಗದವರೂ ಸಹ ಯುದ್ಧ ಸಂಪತ್ತಿನಲ್ಲಿ ಪಾಲು ಪಡೆದರು, ಆದ್ದರಿಂದ, ಈ ಕಲ್ಪನೆಯು ಸಂಪೂರ್ಣವಾಗಿ ತಪ್ಪು. ಸಹಚರರ ಬಗ್ಗೆ ಲೌಕಿಕ ಚಿಂತನೆ ಸರಿಯಲ್ಲ.

ಇದನ್ನು ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳಿದ್ದಾರೆ: ನಂತರ ಅವರು ಹೇಳಿದರು, ಸತ್ಯ ಸಂಗತಿಯೇನೆಂದರೆ, ಪರ್ವತದ ಹಾದಿಯಲ್ಲಿ ನೇಮಿಸಲ್ಪಟ್ಟಿದ್ದ ಸಹಾಬಿಯರಿಗೂ ಉಹುದ್ ಯುದ್ಧದಲ್ಲಿ ಪಾಲ್ಗೊಳ್ಳುವ ಅಭಿಲಾಷೆಯಿತ್ತು. ಇದು ಕೂಡ ಒಂದು ಲೌಕಿಕ ಆಸೆಯಾಗಿದೆ. ನಾವು ಯುದ್ಧದಲ್ಲಿ ನೇರವಾಗಿ ಭಾಗಿಯಾಗಿಲ್ಲ ಎಂದು ಅವರಿಗೆ ಅನಿಸುತ್ತಿತ್ತು. ಆದರೆ ಹಝ್ರತ್ ಪೈಗಂಬರ್(ಸ)ರನ್ನು ಅನುಸರಿಸಬೇಕು ಎಂಬುದಾಗಿತ್ತು ಅವರಿಗೆ ಲಭಿಸಿದ ಆದೇಶ. ನಿಮ್ಮ ಅಧಿಕಾರಿ ಮತ್ತು ಅವರ ಸಂಗಡಿಗರು ಪರಲೋಕವನ್ನು ಬಯಸುತ್ತಿದ್ದರು ಎಂದು ಈ ವಚನದಲ್ಲಿ ಹೇಳಲಾಗಿದೆ. ಎಂದರೆ ಅಂತಿಮ ಪರಿಣಾಮ ಮತ್ತು ಫಲಿತಾಂಶವನ್ನು ಅವರು ತಮ್ಮ ದೃಷ್ಟಿಯಲ್ಲಿ ಇರಿಸಿಕೊಂಡಿದ್ದರು. ಪರ್ವತದ ಹಾದಿಯನ್ನು ಬಿಟ್ಟು ಬಂದರೆ ಅದರ ಪರಿಣಾಮ ಉತ್ತಮವಾಗಿರದು ಎಂದು ಅವರಿಗೆ ಗೊತ್ತಿತ್ತು. ಅದಕ್ಕೆ ವಿರುದ್ಧವಾಗಿ ಪರ್ವತದ ಹಾದಿಯಲ್ಲಿದ್ದ ಕೆಲವು ಸಹಾಬಿಯರದ್ದು ಬಾಹ್ಯವಾದ ನೋಟವಾಗಿತ್ತು. ಈ ಅರ್ಥವನ್ನು ಅವರ ಕೃತ್ಯಕ್ಕೆ ನೀಡುವುದು ಅವರ ಕೆಲಸಗಳಿಂದ ಮತ್ತು ತ್ಯಾಗಗಳಿಂದ ಸ್ಪಷ್ಟವಾಗುವ ಅವರ ಮಹಿಮೆಗೆ ಅನುಯೋಜ್ಯವಾಗಿದೆ. (ಅಪ್ರಕಟಿತ ಟಿಪ್ಪಣಿ ಹಝ್ರತ್ ಮುಸ್ಲೆಹ್ ಮೌಊದ್(ರ))

ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರು ಹಝ್ರತ್ ಮುಸ್ಲೆಹ್ ಮೌಊದ್(ರ) ರವರ ಈ ಟಿಪ್ಪಣಿಯನ್ನು ಉಲ್ಲೇಖಿಸುತ್ತಾ ಹೀಗೆ ವಿವರಿಸಿದರು ಅವರಿಗೆ ಲೌಕಿಕತೆಯನ್ನು ಬಯಸುತ್ತಿದ್ದರು ಅಂದರೆ, ಅವರೊಂದಿಗೆ ಜಗಳವಾಡುವರು ಮತ್ತು ಸೈನ್ಯದ ಅಮೀರ್ ಹಝ್ರತ್ ಅಬ್ದುಲ್ಲಾ ಬಿನ್ ಜುಬೈರ್(ರ) ಅವರು ಈ ಪರಲೋಕವನ್ನು ಬಯಸುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್)ರವರು ಈ ಲೇಖನವನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ತಮ್ಮ ಟಿಪ್ಪಣಿಯಲ್ಲಿ ಹೀಗೆ ವಿವರಿಸಿದ್ದಾರೆ: ಈ ವಚನದಲ್ಲಿ ಲೌಕಿಕತೆ ಎಂದು ಹೇಳಿದ್ದನ್ನು ವ್ಯಾಖ್ಯಾನಗಾರರು ಯುದ್ಧ ಸಂಪತ್ತು ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಇದು ಸರಿಯಲ್ಲ. ಸಹಾಬಿಯರು ತಾತ್ಕಾಲಿಕ ವಿಜಯದ ಬಗ್ಗೆ ಗಮನ ಹೊಂದಿದ್ದರು. ಇಲ್ಲಿ ಲೌಕಿಕತೆ ಎಂಬುದರ ಅರ್ಥ, ಮೊದಲಿಗೆ ಉಂಟಾದ ವಿಜಯವಾಗಿದೆ. ಪರ್ವತದ ಹಾದಿಯಲ್ಲಿದ್ದ ಸಹಾಬಿಯರ ನೋಟ ಅದರ ಮೇಲಾಗಿತ್ತು. ಆದರೆ ಅಬ್ದುಲ್ಲಾಹ್ ಬಿನ್ ಜುಬೈರ್(ರ)ರ ದೃಷ್ಟಿ ಪರಲೋಕದಲ್ಲಾಗಿತ್ತು. ಎಂದರೆ ಅವರು ಹಝ್ರತ್ ಪೈಗಂಬರ್(ಸ)ರ ಅನುಸರಣೆಯಲ್ಲಿ ಅತ್ಯಂತ ಹಿರಿಯ ವಿಜಯವನ್ನು ಕಾಣುತ್ತಿದ್ದರು. ಆದ್ದರಿಂದ ಅವರು ಅಂತಿಮವಾಗಿ ಹಝ್ರತ್ ಪೈಗಂಬರ್(ಸ) ಅವರು ಮತ್ತು ಸರ್ವಶಕ್ತನಾದ ಅಲ್ಲಾಹನು ಸಂತಸಪಡಲಿ ಎಂದು ಬಯಸಿದ್ದರು ಮತ್ತು ಈ ತಾತ್ಕಾಲಿಕ ವಿಷಯಗಳು ಸಂಪೂರ್ಣವಾಗಿ ಅರ್ಥಹೀನ ಮತ್ತು ಅವಾಸ್ತವಿಕವಾಗಿವೆ. ಅವರ ಆನಂದವನ್ನು ಪಡೆಯುವುದೇ ನಮ್ಮ ನಿಜವಾದ ಪುಣ್ಯವಾಗಿದೆ ಎಂದು ಬಯಸುತ್ತಿದ್ದರು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಮುಂದೆ ವಿವರಿಸುತ್ತಾರೆ: ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಹೇಳುತ್ತಾರೆ ಅವರು ಲೌಕಿಕತೆಯನ್ನು ಅಪೇಕ್ಷಿಸುತ್ತಿದ್ದರು ಮತ್ತು ಅವರು ಪರಲೋಕವನ್ನು ಅಪೇಕ್ಷಿಸುತ್ತಿದ್ದರು ಎಂಬ ಈ ಚರ್ಚೆಯು ಅಪ್ರಸ್ತುತವಾಗಿದೆ, ಏಕೆಂದರೆ ಈ ಜಗತ್ತು ತುಂಬಾ ಚಿಕ್ಕದಾಗಿದೆ ಎಂಬುದು ಸತ್ಯವಾಗಿದೆ. ಇದು ವಿಚಿತ್ರವಾದ ವಿಷಯ ಎಂದು ಕಾಣುತ್ತದೆ. ಮುಂದೆ ಅವರು ಈ ವಿವರಣೆಯನ್ನು ವಿವರಿಸುತ್ತಾರೆ ಅಂದರೆ ಆ ಪರ್ವತದ ಕಣಿವೆಯ ರಕ್ಷಣೆಗಾಗಿ ನೇಮಿಸಿದ್ದವರು ಕಣಿವೆಯನ್ನು ತ್ಯಜಿಸಿ ಓಡಿ ಹೋದ ಸಮಯದಲ್ಲಿ ಅಷ್ಟರಲ್ಲಿ ಎಲ್ಲಾ ಸಂಪತ್ತು ವಿಭಜಿಸಲ್ಪಟ್ಟಿರಬಹುದು ಮತ್ತು ಅವರಿಗೆ ನಾವು ಬೇಗ ಹೋಗಿ ಅವರೊಂದಿಗೆ ಸೇರಬೇಕು ಎಂಬ ಆತುರವಿತ್ತು ಎಂಬ ಪರಿಕಲ್ಪನೆಯು. ಪವಿತ್ರ ಖುರ್‌ಆನ್ ವಿವರಿಸಿದಂತೆ ನಿಮ್ಮ ಜನರ ಬಗ್ಗೆ ಒಳ್ಳೆಯ ಆಲೋಚನೆಗಳನ್ನು ಹೊಂದಿರಿ ಎಂದು ಏಕೆ ಯೋಚಿಸುವುದಿಲ್ಲ. ಅವರೆಲ್ಲರು ವಿಜಯದ ಸಂಭ್ರಮವನ್ನು ಆಚರಿಸುತ್ತಿದ್ದರು, ಸಂತೋಷಪಡುತ್ತಿದ್ದರು,ಹಝ್ರತ್ ಪೈಗಂಬರ್(ಸ)ರ ಬಳಿ ನಿಂತಿದ್ದಾರೆ, ಪರಸ್ಪರ ಅಭಿನಂದಿಸುತ್ತಿರಬಹುದು. ಹಾಗಾದರೆ ನಾವು ಈ ಸನ್ನಿವೇಶದಿಂದ ಏಕೆ ವಂಚಿತರಾಗಿಬೇಕು? ಎಂದು ತಮ್ಮ ಜನರ ಬಗ್ಗೆ ಆಲೋಚಿಸಿ. ಹೀಗೆ ಕೆಲವೊಮ್ಮೆ ಅದು ಸಂಭವಿಸುತ್ತದೆ ಮತ್ತು ಅದು ಪ್ರಕೃತಿಗೆ ಅನುಗುಣವಾಗಿರುತ್ತದೆ, ಎಲ್ಲೆಲ್ಲಿ ಆಚರಣೆ, ಸಂತೋಷವಿರುತ್ತದೆಯೊ, ಎಲ್ಲರೂ ಅಲ್ಲಿಗೆ ಆ ಸಂತೋಷವನ್ನು ಆಚರಿಸಲು ಧಾವಿಸುತ್ತಾರೆ. ಖಲೀಫಾ ರಾಬಿ(ರಹ್)ರವರು ಹೇಳುತ್ತಾರೆ: ತಾವು ಇಲ್ಲಿ ತಂಗಿದ್ದ ಸಮಯದಲ್ಲಿ ಅನೇಕ ಬಾರಿ ನೋಡಿರಬಹುದು ಯಾವುದೇ ಒಳ್ಳೆಯ ಸುದ್ದಿ ಇದ್ದರೆ, ಜನರು ಯಾವುದೇ ಲೂಟಿ ಮಾಡಲು ಇಲ್ಲಿಗೆ ಬರುವುದಿಲ್ಲ. ಬದಲಿಗೆ ಅಭಿನಂದಿಸಲು ಜನರು ಆಗಮಿಸಿ ಖುಷಿಯಲ್ಲಿ ಸೇರುತ್ತಾರೆ. ಹಾಗಾಗಿ ಅವರಿಗೆ ಅದು ತುಂಬಾ ಖುಷಿಯಾಯಿತು. ಪರ್ವತದಿಂದ ಕೆಳಗೆ ಇಳಿದು ನೋಡಲು ಅಥವಾ ಹಝ್ರತ್ ಪೈಗಂಬರ್(ಸ) ಅವರು ಇದ್ದ ಕಡೆ ನೋಡಿ ಆನಂದಿಸುತ್ತಿದ್ದರು. ಪ್ರತಿಯೊಬ್ಬರೂ ಹಝ್ರತ್ ಪೈಗಂಬರ್(ಸ) ಅವರ ಸುತ್ತಲೂ ಸೇರುವುದನ್ನು ಆನಂದಿಸುತ್ತಿದ್ದರು. ಅಲ್ಲಾಹನ ವಾಗ್ದಾನ ನೆರವೇರಿದೆ. ನಾವು ಇಲ್ಲಿ ಒಬ್ಬಂಟಿಯಾಗಿ ನಿಲ್ಲುತ್ತೇವೆ, ನಾವೂ ಅಲ್ಲಿಗೆ ಹೋಗಬೇಕು, ಆದರೆ ಹಝ್ರತ್ ಅಬ್ದುಲ್ಲಾ ಬಿನ್ ಜುಬೈರ್(ರ.ಅ) ಅವರು ಪರಲೋಕದ ಮೇಲೆ ಕಣ್ಣಿಟ್ಟಿದ್ದರು, ಈ ಸಮಯದಲ್ಲಿ ನಾವು ಹಝ್ರತ್ ಪೈಗಂಬರ್(ಸ) ಅವರ ಸಲುವಾಗಿ ಒಂದು ಬದಿಯಲ್ಲಿ ಕುಳಿತುಕೊಳ್ಳುವುದು ತುಂಬಾ ಆನಂದದ ವಿಷಯವಾಗಿತ್ತು. ನಮಗೆ ಆಜ್ಞಾಪಿಸಿರುವುದನ್ನು ಅನುಸರಿಸರಿಸಬೇಕು. ಮತ್ತು ಆನಂದವೆಂದರೆ ವಾಸ್ತವವಾಗಿ ಆ ಸಂತೋಷದಲ್ಲಿರುವ ಆನಂದವಲ್ಲ.

(ದರ್ಸ್ ಅಲ್–ಖುರ್‌ಆನ್‌ನಿಂದ ಪಡೆಯಲಾಗಿದೆ, 5ನೇ ರಂಜಾನ್, 16ನೇ ಫೆಬ್ರವರಿ 1994)

ಹೇಗಿದ್ದರೂ ಪರ್ವತದ ಹಾದಿ ಖಾಲಿಯಾಯಿತು ಮತ್ತು ಅಬ್ದುಲ್ಲಾಹ್ ಬಿನ್ ಜುಬೇರ್(ರ) ಬೆರಳೆಣಿಕೆಯಷ್ಟು ಸಂಗಡಿಗರ ಜೊತೆಗೆ ಅಲ್ಲಿ ಬಾಕಿ ಉಳಿದರು. ಪರ್ವತದ ಹಾದಿ ಖಾಲಿಯಾಗಿರುವುದನ್ನು ಮಕ್ಕಾದ ಸತ್ಯನಿಷೇಧಿಗಳ ಪರಾರಿಯಾದ ಸೈನ್ಯದಲ್ಲಿ ಅಲ್ಲಿಯ ವರೆಗೂ ಮುಸ್ಲಿಮರಾಗಿರದ ಖಾಲಿದ್ ಬಿನ್ ವಲೀದ್ ಕಂಡರು. ಅವರು ಇಕ್ರಿಮ ಬಿನ್ ಅಬೂಜಹಲಿನ ಜೊತೆಗೆ ಕುದುರೆ ಸವಾರರ ಒಂದು ತುಕಡಿಯೊಂದಿಗೆ ಆ ಪರ್ವತದ ಹಾದಿಯ ಮೇಲೆ ದಾಳಿ ನಡೆಸಿದರು. ಸತ್ಯನಿಷೇಧಿಗಳ ದಾಳಿ ಎಷ್ಟು ಪ್ರಬಲ ಮತ್ತು ತೀವ್ರವಾಗಿತ್ತು ಎಂದರೆ, ಒಂದೇ ಹಲ್ಲೆಯಿಂದ ಪರ್ವತದ ಹಾದಿಯಲ್ಲಿದ್ದ ಅಮೀರ್ ಹಝ್ರತ್ ಅಬ್ದುಲ್ಲಾ ಬಿನ್ ಜುಬೈರ್(ರ) ಅವರನ್ನು ಹಾಗೂ ಅವರ ಸಂಗಡಿಗರನ್ನು ವಧಿಸಿದರು. ಮತ್ತು ಅವರು ಹಝ್ರತ್ ಅಬ್ದುಲ್ಲಾ ಬಿನ್ ಜುಬೈರ್(ರ) ಅವರ ದೇಹವನ್ನು ವಿರೂಪಗೊಳಿಸಿದರು, ಅಂದರೆ ಅವರು ಕೈ ಕಾಲುಗಳನ್ನು ಮತ್ತು ದೇಹದ ಇತರ ಭಾಗಗಳನ್ನು ಕತ್ತರಿಸಿದರು. ಅದರ ನಂತರ, ಖುರೈಷಿಗಳ ಈ ಸೈನ್ಯವು ಕೆಳಗಿಳಿದು ಇದ್ದಕ್ಕಿದ್ದಂತೆ ಮುಸ್ಲಿಮರನ್ನು ಸುತ್ತುವರೆದಿತು.

ಆ ಸಮಯದಲ್ಲಿ ಮುಸಲ್ಮಾನರು ಯುದ್ಧ ಸಂಪತ್ತನ್ನು ಸಂಗ್ರಹಿಸುವುದರಲ್ಲಿ ಮತ್ತು ಮುಶ್ರಿಕೀನರನ್ನು ಖೈದಿಗಳಾಗಿ ತೆಗೆದುಕೊಳ್ಳುವುದರಲ್ಲಿ ನಿರತರಾಗಿದ್ದರು, ಇದ್ದಕ್ಕಿದ್ದಂತೆ ಅವಿಶ್ವಾಸಿಗಳ ಕುದುರೆ ಸವಾರರು ಅವರ ತಲೆಯ ಮೇಲೆ ಧಾವಿಸಿದರು. ಅವರೆಲ್ಲರು ಉಝ್ಝಾ ಹಾಗೂ ಹುಬಲ್‌ನ ಘೋಷಣೆಗಳನ್ನು ಕೂಗುತ್ತಿದ್ದರು ಅದು

ಉಹುದ್ ದಿವಸ ಮುಶ್ರಿಕೀನರ ಧ್ಯೇಯವಾಕ್ಯವಾಗಿತ್ತು. ಆದ್ದರಿಂದ ಆ ದಾಳಿಯನ್ನು ಅವರಿಗೆ ನಿಯಂತ್ರಿಸಲು ಸಾಧ್ಯವಾಗಲಿಲ್ಲ ಮತ್ತು ಈ ಅಚಾನಕ್ಕಾದ ದಾಳಿಯಿಂದ ಮುಸ್ಲಿಮರು ಚದುರಿ ಹೋದರು. ಅವರು ಸಂಗ್ರಹಿಸಿದ ಎಲ್ಲಾ ಯುದ್ಧ ಸಂಪತ್ತು ಮತ್ತು ಸೆರೆಯಾಳುಗಳನ್ನು ಅಲ್ಲಿಯೇ ಬಿಟ್ಟುಬಿಟ್ಟರು. ಅವರ ಪಂಕ್ತಿಗಳಾಗಲೀ ಅಥವಾ ಅವರ ಕ್ರಮವಾಗಲೀ ಏನೂ ಉಳಿಯಲಿಲ್ಲ. ಒಬ್ಬರಿಗೆ ಮತ್ತೊಬ್ಬರ ಜ್ಞಾನವಿರಲಿಲ್ಲ. ಮುಶ್ರಿಕೀನರ ಧ್ವಜವು ಇದ್ದಕ್ಕಿದ್ದಂತೆ ನೆಲದ ಮೇಲೆ ಬಿದ್ದಿತ್ತು, ಈ ಹೊಸ ಪರಿಸ್ಥಿತಿಯನ್ನು ನೋಡಿದ ಓರ್ವ ಮಹಿಳೆ ಉಮ್ರಾ ಬಿಂತ್ ಅಲ್-ಕಮಾ ಅದನ್ನು ಮೇಲಕ್ಕೆತ್ತಿ ಅವಿಶ್ವಾಸಿಗಳನ್ನು ದೊಡ್ಡ ಧ್ವನಿಯಲ್ಲಿ ಮತ್ತೆ ಕರೆಯಲು ಪ್ರಾರಂಭಿಸಿದಳು. ಮುಶ್ರಿಕೀನರು ತಮ್ಮ ಧ್ವಜವನ್ನು ಎತ್ತಿರುವುದನ್ನು ನೋಡಿದಾಗ, ಯುದ್ಧದ ತಕ್ಕಡಿಯು ತಿರುಗಿದೆ ಎಂದು ಅರಿತುಕೊಂಡು ಅವರೆಲ್ಲರು ಮತ್ತೆ ಹಿಂತಿರುಗಿ ತಮ್ಮ ಧ್ವಜದ ಸುತ್ತಲೂ ಒಟ್ಟುಗೂಡಿದರು. (ಸೀರತ್ ಅಲ್-ಹಲ್ಬಿಯಾಹ್ ಸಂಪುಟ 2, ಪುಟ 308, ದಾರ್ ಅಲ್-ಕಿತಾಬ್ ಅಲ್-ಇಲಾಮಿಯಾ, ಬೈರುತ್)

ಓರ್ವ ಬರಹಗಾರ ಹೀಗೆ ಬರೆದಿದ್ದಾನೆ ಖುರೈಶರ ಧೂಳು ಹಾಗೂ ರಕ್ತದಿಂದ ಆವೃತವಾದ ಧ್ವಜವನ್ನು ಉಮ್ರಾ ಬಿಂತ್ ಅಲ್-ಕಮಾಹ್ ಎಂಬ ಮಹಿಳೆಯು ಎತ್ತಿ ಹಿಡಿದಳು. ಅವಳು ಅದನ್ನು ಜೋರಾಗಿ ಬೀಸಿದಳು ಮತ್ತು ಅಖಾಡದಿಂದ ಓಡಿಹೋದವರನ್ನು ಗದರಿಸಿದಳು. ಅವಳು ಮಕ್ಕಾದ ಅವಿಶ್ವಾಸಿಗಳನ್ನು ಹಿಂತಿರುಗುವಂತೆ ಕರೆಯುತ್ತಿದ್ದಳು. ಹೀಗೆ ಸೋತ ಕಾಫಿರ್ ಗಳು ಮತ್ತೆ ಉಹುದ್ ಕ್ಷೇತ್ರದಲ್ಲಿ ಒಟ್ಟುಗೂಡಿ ಮುಸಲ್ಮಾನರನ್ನು ಹಿಂಬದಿಯಿಂದ ಮತ್ತು ಮುಂಬದಿಯಿಂದ ಸುತ್ತುವರೆದರು. ಅಜಾಗರೂಕತೆಯಿಂದ ಮುಸ್ಲಿಮರು ತಮ್ಮ ಪಂಕ್ತಗಳನ್ನು ಕಳೆದುಕೊಂಡಿದ್ದರಿಂದ ಅವರಿಗೆ ಇನ್ನು ಮುಂದೆ ಯಾವುದೇ ಕ್ರಮವಿರಲಿಲ್ಲ.

(ದಾಯೆರಾ ಮಾರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಾ ಸಲ್ಲಂ ಸಂಪುಟ-6, ಪುಟ 486-487, ಬಝ್ಮ್ ಇಕ್ಬಾಲ್ ಲಾಹೋರ್)

ಅಂದು ಗಣನೀಯ ಸಂಖ್ಯೆಯಲ್ಲಿ ಮುಸ್ಲಿಮರು ಹುತಾತ್ಮತೆಯ (ಶಹಾದತ್‌ನ) ಬಟ್ಟಲನ್ನು ಸೇವಿಸಿದರು. ಹಿಂದಿನ ಗೆಲುವು ಈಗ ಸೋಲಿಗೆ ತಿರುಗಿತ್ತು. ಓರ್ವ ಬರಹಗಾರರು ಬರೆಯುತ್ತಾರೆ: ಮುಸ್ಲಿಮರು ಬಿಲ್ಲುಗಾರರ ತಪ್ಪಿನಿಂದಾಗಿ ತಮ್ಮ ಸಂಘಟನೆಯನ್ನು ಕಳೆದುಕೊಂಡಾಗ ಮತ್ತು ಅವರ ಪಂಕ್ತಿಗಳು ಅಸ್ತವ್ಯಸ್ತಗೊಂಡಾಗ ಮತ್ತು ಅವರು ತಮ್ಮ ಕೈಯಿಂದ ಯುದ್ಧ ಸಂಪತ್ತನ್ನು ಎಸೆದು ಉನ್ಮಾದದಿಂದ ಪರಸ್ಪರ ಹೊಡೆದಾಡಿಕೊಂಡರು ಮತ್ತು ಅವರಲ್ಲಿ ಅನೇಕರು ದಾರಿ ತಪ್ಪಿದರು. ಅವರು ಎಲ್ಲಿಗೆ ಹೋಗಬೇಕೆಂದು ತಿಳಿದಿರಲಿಲ್ಲ, ವಿಶೇಷವಾಗಿ ಮುಹಮ್ಮದ್ ಕೊಲ್ಲಲ್ಪಟ್ಟರು ಎಂದು ಮುಶ್ರಿಕೀನರ ಬೋಧಕನು ಘೋಷಿಸಿದ ನಂತರ. ಇದು ತೀವ್ರವಾದ ಅಗ್ನಿಪರೀಕ್ಷೆಯಾಗಿದ್ದು, ಇದರಲ್ಲಿ ಅನೇಕ ಮುಸ್ಲಿಮರು ಅವರ ಸಹೋದರರಿಂದ ಉದ್ದೇಶಪೂರ್ವಕವಾಗಿ ಕೊಲ್ಲಲ್ಪಟ್ಟರು. ಕೆಲವೊಮ್ಮೆ ತಪ್ಪಾಗಿ ಮುಸ್ಲಿಮರೂ ಮುಸ್ಲಿಮರನ್ನು ಕೊಂದರು ಮತ್ತು ಖಾಲಿದ್‌ನ ಕ್ರಿಯೆಯ ನಂತರ ತಮ್ಮನ್ನು ಮರುಸಂಘಟಿಸಿದ ಶತ್ರುಗಳ ದೊಡ್ಡ ಸಂಖ್ಯೆಯು ಅಲ್ಪ ಸಂಖ್ಯೆಯ ಮುಸ್ಲಿಮರನ್ನು ನಾಶಪಡಿಸುತ್ತದೆ ಮತ್ತು ನಿರ್ನಾಮ ಮಾಡುತ್ತದೆ ಎಂದು ನಿರೀಕ್ಷಿಸಲಾಗಿತ್ತು. (ಘಝ್ವಾ ಎ ಉಹುದ್, ಮುಹಮ್ಮದ್ ಅಹ್ಮದ್ ಬಾಶ್ಮಿಲ್, ಪುಟ-140-141, ನಫೀಸ್ ಅಕಾಡೆಮಿ, ಕರಾಚಿ, 1989) ಆದರೆ ಆದಾಗ್ಯೂ ಸರ್ವಶಕ್ತನಾದ ಅಲ್ಲಾಹನು ಮತ್ತೊಮ್ಮೆ ಒಲವು ತೋರಿದನು ಮತ್ತು ಶತ್ರುಗಳು ಬಯಸಿದ್ದು ಸಂಭವಿಸಲಿಲ್ಲ.

ಹಝ್ರತ್ ಹುಝೈಫನ ತಂದೆ ಯಮಾನ್‌ನನ್ನು ಮುಸ್ಲಿಮರು ಆಕಸ್ಮಿಕವಾಗಿ ವಧಿಸಿದ ಬಗ್ಗೆ ಹೀಗೆ ಬರೆಯಲಾಗಿದೆ: ಸಹಾಬಿಗಳು ಒಬ್ಬರನ್ನೊಬ್ಬರು ವಧಿಸಿದ ಉದಾಹರಣೆ ಹಝ್ರತ್ ಹುಝೈಫಾ(ರ) ಅವರ ತಂದೆ ಯಮಾನ್ನರು ಅಜ್ಞಾನದಿಂದ ಮುಸ್ಲಿಮರಿಂದ ಹುತಾತ್ಮತೆಯಾಗಿದೆ. ಇಬ್ನ್ ಇಸ್‌ಹಾಕ್ ಹೇಳುವಂತೆ, ಹಝ್ರತ್ ಪೈಗಂಬರ್(ಸ) ಅವರು ಉಹುದ್ ಯುದ್ಧಕ್ಕೆ ಹೋದಾಗ, ಸಾಬಿತ್ ಬಿನ್ ವಕ್ಶ್ ಮತ್ತು ಹುಸೈಲ್ ಬಿನ್ ಜಾಬಿರ್ ಅವರ ಹೆಸರು ಯಮಾನ್ ಎಂದಾಗಿತ್ತು ಮತ್ತು ಅವರು ಹುಝೈಫಾ ಬಿನ್ ಯಮಾನ್ ಅವರ ತಂದೆಯಾಗಿದ್ದರು. ಅವರಿಬ್ಬರು ವಯಸ್ಕರರಾಗಿದ್ದರು ಮತ್ತು ಮುಸ್ಲಿಮರ ಮಹಿಳೆಯರು ಹಾಗೂ ಮಕ್ಕಳು ರಕ್ಷಣೆಗಾಗಿ ಆಶ್ರಯ ಪಡೆದಿದ್ದ ಕೋಟೆಯಲ್ಲಿ ಅವರಿದ್ದರು. ಅವರಲ್ಲಿ ಒಬ್ಬರು ಇನ್ನೊಬ್ಬರಿಗೆ ಹೇಳಿದರು, ನೀವು ಏನು ಕಾಯುತ್ತಿದ್ದೀರಿ? ಇಬ್ಬರು ಮುದುಕರನ್ನು ಕೋಟೆಯಲ್ಲಿ ಬಂಧಿಸಲಾಗಿತ್ತು. ಅವರು ಮಾತನಾಡಲು ಪ್ರಾರಂಭಿಸಿದರು ನಾವು ಯಾವುದಕ್ಕಾಗಿ ಕಾಯುತ್ತಿದ್ದೇವೆ? ನಮಗೆ ಹೆಚ್ಚು ಸಮಯ ಉಳಿದಿಲ್ಲ. ನಾವು ಬೆಳೆದಿದ್ದೇವೆ ಇಂದು ಸಾಯದಿದ್ದರೆ ನಾಳೆ ಸಾಯುವುದು ಖಂಡಿತ. ನಾವು ನಮ್ಮ ಕತ್ತಿಗಳನ್ನು ಎತ್ತಿಕೊಂಡು ಹಝ್ರತ್ ಪೈಗಂಬರ್(ಸ) ಅವರನ್ನು ಭೇಟಿಯಾಗಬಾರದೇ? ಅಲ್ಲಾಹನು ನಮಗೆ ಶಹಾದತ್ ಅನುಗ್ರಹಿಸಬಹುದು. ಆಗ ಇವರಿಬ್ಬರು ಕತ್ತಿಗಳನ್ನು ಹಿಡಿದು ಅವಿಶ್ವಾಸಿಗಳ ಬಳಿಗೆ ಹೋಗಿ ಜನರೊಂದಿಗೆ ಬೆರೆತರು. ಅರ್ಥಾತ್, ಈ ಇಬ್ಬರು ಹಿರಿಯರು ಯುದ್ಧದಲ್ಲಿ ಭಾಗಿಯಾಗಿಲ್ಲ ಮತ್ತು ಮದೀನಾದಲ್ಲಿದ್ದಾರೆ ಎಂದು ಮುಸ್ಲಿಮರಿಗೆ ತಿಳಿದಿತ್ತು, ಅವರು ಈಗ ಯುದ್ಧಭೂಮಿಯನ್ನು ತಲುಪಿ ಹೋರಾಟಕ್ಕೆ ಸೇರಿದ್ದಾರೆ ಮತ್ತು ಮುಸ್ಲಿಮರು ಅವರನ್ನು ತಕ್ಷಣ ಗುರುತಿಸಲು ಸಾಧ್ಯವಾಗಲಿಲ್ಲ. ಇವರು ಯಾರು ಎಂದು. ಸಾಬಿತ್ ಬಿನ್ ವಕಾಶ್ ಅವಿಶ್ವಾಸಿಗಳಿಂದ ಶಹೀದ್ ಆದರು ಮತ್ತು ಹುಝೈಫನ ತಂದೆಯು ಮುಸ್ಲಿಮರಿಂದ ಅಜ್ಞಾನದಿಂದ ಶಹೀದ್ ಆದರು. ಹುಝೈಫಾ ಹೇಳಿದರು ಅಲ್ಲಾಹನ ಆಣೆ! ಶಹೀದ್ ಆದವರು ನನ್ನ ತಂದೆ ಇವರಾಗಿದ್ದಾರೆ. ಅದನ್ನು ನೋಡಿದ ಅವರು, "ಇವರು ನನ್ನ ತಂದೆ" ಎಂದು ಹೇಳಿದರು. ಅದಕ್ಕೆ ಮುಸ್ಲಿಮರು ಹೇಳಿದರು: ಅಲ್ಲಾಹನ ಆಣೆ! ನಾವು ಅವರನ್ನು ಗುರುತಿಸಲಿಲ್ಲ, ಅವರು ತಪ್ಪಾಗಿ ಶಹೀದ್ ಆದರು. ಮತ್ತು ಅವರು ನಿಜವಾಗಿಯೂ ಸತ್ಯವನ್ನು ಹೇಳಿದ್ದರು. ಹುಝೈಫಾ ಹೇಳಿದರು, ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ, ಅವನು ಅತ್ಯಂತ ಕರುಣಾಮಯಿಯಾಗಿದ್ದಾನೆ. ನಂತರ ಹಝ್ರತ್ ಪೈಗಂಬರ್(ಸ) ಅವರು ನಂತರ ಹುಝೈಫಾ ಅವರನ್ನು ಅವರ ತಂದೆಯ ರಕ್ತದ ಪರಿಹಾರವನ್ನು ನೀಡಬೇಕೆಂದು ಬಯಸಿದ್ದರು ಆದರೆ ಹುಜೈಫಾ ಅದನ್ನು ಸ್ವೀಕರಿಸಲಿಲ್ಲ, ಅವರು ನಿರಾಕರಿಸಿದರು ಮತ್ತು ಮುಸ್ಲಿಮರನ್ನು ಕ್ಷಮಿಸಿದರು. ಈ ಕಾರಣದಿಂದಾಗಿ, ಅಲ್ಲಾಹನು ಮತ್ತು ಅಲ್ಲಾಹನ ಸಂದೇಶವಾಹಕರ ದೃಷ್ಟಿಯಲ್ಲಿ ಹುಝೈಫಾ ಅವರ ಮೌಲ್ಯ ಮತ್ತು ಸ್ಥಾನಮಾನವು ಮುಸ್ಲಿಮರಲ್ಲಿ ಬಹಳ ಉತ್ತುಂಗವಾಗಿತ್ತು.

ಈ ಯುದ್ಧದಲ್ಲಿ ಹಝ್ರತ್ ಹಮ್‌ಝಾ(ರ) ಕೂಡ ಶಹೀದ್ ಆದರು. ಉಹುದ್ ದಿನದಂದು ಹಂಝಾ ಬಿನ್ ಅಬ್ದುಲ್ ಮುತ್ತಲಿಬ್ ಹಝ್ರತ್ ಪೈಗಂಬರ್(ಸ) ಅವರ ಮುಂದೆ ಎರಡು ಖಡ್ಗಗಳಿಂದ ಹೋರಾಡುತ್ತಿದ್ದರು ಮತ್ತು ನಾನು ಅಸದುಲ್ಲಾ ಅಂದರೆ ಅಲ್ಲಾಹನ ಸಿಂಹವಾಗಿದ್ದೇನೆ ಎಂದು ಹೇಳುತ್ತಿದ್ದರು. ಹೀಗೆ ಹೇಳುತ್ತಾ ಕೆಲವೊಮ್ಮೆ ಅವರು ಮುಂದೆ ಹೋಗುತ್ತಿದ್ದರು ಮತ್ತೆ ಕೆಲವೊಮ್ಮೆ ಹಿಂದೆ ಸರಿಯುತ್ತಿದ್ದರು. ಹಠಾತ್ತನೆ ಕಾಲು ಜಾರಿ ಬೀಳುವ ಸ್ಥಿತಿಯಲ್ಲಿದ್ದರು. ವಹ್‌ಶಿ ಅಸ್ವದ್ ಅವರನ್ನು ನೋಡಿದನು. ಅಬು ಉಸಾಮಾ ಹೇಳುತ್ತಾರೆ: ಅವನು ಈಟಿಯನ್ನು ಎಳೆದು ಕೊಂದನು. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-8, ದರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಹಝ್ರತ್ ಹಂಝ(ರ) ಶಹೀದ್ ಆದ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿದಾಗ ಅವರು ಬಹಳ ದುಃಖಿತರಾದರು. ವರದಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: ತಾಯಿಫ್ ಯುದ್ಧದ ನಂತರ ಹಝ್ರತ್ ಹಂಝ(ರ)ರ ಕೊಲೆಗಾರನಾದ ವಹ್‌ಶೀ ಗುಲಾಮನು ಹಝ್ರತ್ ಪೈಗಂಬರ್(ಸ)ರ ಮುಂದೆ ಬಂದಾಗ ಹಝ್ರತ್ ಪೈಗಂಬರ್(ಸ) ಆತನನ್ನು ಕ್ಷಮಿಸಿದರು. ಆದರೆ ವಹ್‌ಶಿ ಕೊಲೆಗಾರ ನನ್ನ ಮುಂದೆ ಬರದಿರಲಿ ಎಂದು ಹಝ್ರತ್ ಹಂಝ(ರ)ರೊಡನೆ ಇದ್ದ ಪ್ರೀತಿಗೆ ಗೌರವ ನೀಡುತ್ತಾ ಹಝ್ರತ್ ಪೈಗಂಬರ್(ಸ) ಹೇಳಿದರು.

ಆ ವೇಳೆ ಆ ವಹ್‌ಶೀ ತನ್ನ ಮನಸ್ಸಿನಲ್ಲಿ ಹೀಗೆ ಪ್ರತಿಜ್ಞೆ ಮಾಡಿಕೊಂಡನು: ಯಾವ ಕೈಯಿಂದ ನಾನು ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪರನ್ನು ವಧಿಸಿದನೋ ಅದೇ ಕೈಯಿಂದ ಇಸ್ಲಾಮಿನ ಯಾವನಾದರೂ ದೊಡ್ಡ ಶತ್ರುವನ್ನು ನಾನು ವಧಿಸುವ ವರೆಗೂ ಸುಮ್ಮನಿರುವುದಿಲ್ಲ. ಹೀಗೆ ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಆತನು ಯಮಾಮ ಯುದ್ಧದಲ್ಲಿ ಪ್ರವಾದಿತ್ವದ ಸುಳ್ಳುವಾದಿ ಮುಸೈಲಿಮ ಕದ್ದಾಬ್‌ನನ್ನು ಕೊಂದು ತನ್ನ ಶಪಥವನ್ನು ಈಡೇರಿಸಿದನು. (ಸೀರ‌ತ್ ಖಾತಮನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-492-493)

ಹಝ್ರತ್ ಹಂಝ(ರ)ರ ಮೃತಶರೀರವನ್ನು ಅಪಮಾನಿಸಲಾಗಿತ್ತು. ಅವರ ಶರೀರವನ್ನು ಬಹಳವಾಗಿ ವಿರೂಪಗೊಳಿಸಲಾಗಿತ್ತು. ವರದಿ ಹೀಗಿದೆ: ಅಬೂಸುಫ್ಯಾನ್‌ನ ಪತ್ನಿ ಹಿಂದ್ ಉಹುದ್ ದಿನದಂದು ಸೈನ್ಯದೊಂದಿಗೆ ಬಂದಳು. ಬದ್ರ್‌ನಲ್ಲಿ ಹಝ್ರತ್ ಹಮ್ಝಾನೊಂದಿಗೆ ಹೋರಾಡಿ ಕೊಲ್ಲಲ್ಪಟ್ಟ ತನ್ನ ತಂದೆಗೆ ಸೇಡು ತೀರಿಸಿಕೊಳ್ಳಲು, ನನಗೆ ಅವಕಾಶ ಲಭಿಸಿದರೆ ನಾನು ಹಂಝಾನ ಯಕೃತ್ತನ್ನು ಅಗಿಯುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದಳು. ಈ ಪರಿಸ್ಥಿತಿಯು ಸಂಭವಿಸಿದಾಗ ಮತ್ತು ಹಝ್ರತ್ ಹಮ್‌ಝಾ(ರ) ತೊಂದರೆಗೆ ಒಳಗಾದಾಗ, ಮುಶ್ರಿಕೀನರು ವಧಿಸಲ್ಪಟ್ಟವರನ್ನು ವಿರೂಪಗೊಳಿಸಿದರು. ಮೂಗು, ಕಿವಿ ಇತ್ಯಾದಿಗಳನ್ನು ಕತ್ತರಿಸಿದರು. ಅವಳು ಹಮ್‌ಝಾರ ಯಕೃತ್ತಿನ ತುಂಡನ್ನು ತಂದಳು. ಹಿಂದ್ ಅದನ್ನು ತೆಗೆದುಕೊಂಡು ತಿನ್ನಲು ಅಗಿದಳು, ಆದರೆ ಅವಳು ಅದನ್ನು ಅಗಿಯಲು ಸಾಧ್ಯವಾಗದಿದ್ದಾಗ, ಅವಳು ಅದನ್ನು ಎಸೆದಳು. ಈ ಘಟನೆಯು ಹಝ್ರತ್ ಪೈಗಂಬರ್(ಸ) ಅವರ ಜ್ಞಾನಕ್ಕೆ ಬಂದಿತು ಮತ್ತು ಅವರು(ಸ) ಅವರು ಹಮ್‌ಝಾನ ಯಾವುದೇ ಮಾಂಸವನ್ನು ಸವಿಯುವುದನ್ನು ಅಲ್ಲಾಹನು ಬೆಂಕಿಯನ್ನು ಶಾಶ್ವತವಾಗಿ ನಿಷೇಧಿಸಿದ್ದಾನೆ ಎಂದು ಹೇಳಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಾದ್, ಸಂಪುಟ-3, ಪುಟ-8, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಹಮ್‌ಝಾ(ರ.ಅ) ರವರ ಶವದ ಬಳಿಗೆ ಬಂದು ಹಝ್ರತ್ ಪೈಗಂಬರ್(ಸ) ಅವರು ವ್ಯಕ್ತಪಡಿಸಿದ ಭಾವನೆಗಳ ಬಗ್ಗೆ ಮತ್ತು ಅವರು ಅವರಿಗೆ ಉನ್ನತ ಸ್ಥಾನವನ್ನು ನೀಡಿದ ಸಂತೋಷದ ಬಗ್ಗೆ ಒಂದು ವರದಿ ಹೀಗಿದೆ: ಹಝ್ರತ್ ಪೈಗಂಬರ್(ಸ)ರವರು ಹಝ್ರತ್ ಹಮ್‌ಝಾ(ರ) ಅವರ ಶವವನ್ನು ನೋಡಿದಾಗ ಅವರ ಯಕೃತ್ತು ತೆಗೆಯಲಾಗಿತ್ತು. ಇಬ್ನೆ ಹಿಶಾಮ್ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರವರು ಹಝ್ರತ್ ಹಮ್‌ಝಾ(ರ) ಅವರ ಶವದ ಬಳಿಗೆ ಬಂದು ನಿಂತಾಗ ಅವರು ಹೇಳಿದರು: ಓ ಹಮ್‌ಝಾ! ಇದಕ್ಕಿಂತ ನೋವಿನ ದೃಶ್ಯವನ್ನು ನಾನು ನೋಡಿಲ್ಲ. ಆಗ ಅವರು(ಸ) ಹೇಳಿದರು, ಜಿಬ್ರೀಲ್ ಬಂದು ನನಗೆ ತಿಳಿಸಿದನು, ಹಮ್‌ಝಾ ಬಿನ್ ಅಬ್ದುಲ್ ಮುತ್ತಲಿಬ್ ಅನ್ನು ಅಲ್ಲಾಹನ ಸಿಂಹ ಮತ್ತು ಅವನ ಸಂದೇಶವಾಹಕರ ಸಿಂಹ ಎಂದು ಏಳು ಆಕಾಶಗಳಲ್ಲಿ ಬರೆಯಲಾಗಿದೆ.

(ಸೀರತ್ ಇಬ್ನ್ ಹಿಶಾಮ್ ಪುಟ 395 ದಾರ್ ಇಬ್ನ್ ಹಜ್ಮ್ ಬೈರುತ್ 2009)

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳುತ್ತಾರೆ, "ಹಝ್ರತ್

ಪೈಗಂಬರ್(ಸ) ರ ಉಗ್ರ ಶತ್ರುಗಳಲ್ಲಿ ಒಬ್ಬರು ಹಿಂದಾ ಆಗಿದ್ದಳು, ಅವಳು ಎಷ್ಟರ ಮಟ್ಟಿಗೆ ಉಗ್ರ ವಿರೋಧಿಯಾಗಿದ್ದಳು ಅಂದರೆ ಉಹುದ್ ಯುದ್ಧ ದಿನದಂದು ಅವಳು ಇಸ್ಲಾಮಿನ ಸೈನ್ಯದ ಮೇಲೆ ದಾಳಿ ಮಾಡಲು ಹೋಗಬೇಕೆಂದು ಕವಾದಲ್ಲಿ ಕವಿತೆಗಳನ್ನು ಓದುತ್ತಾ ಜನರನ್ನು ಪ್ರಚೋದಿಸುತ್ತಿದ್ದಳು ಮತ್ತು ಮುಸ್ಲಿಮರಿಗೆ ಒಂದು ಅಪಾಯಕಾರಿ ಸಂದರ್ಭ ಬಂದು ಅಂದರೆ ಅವಳು ಹೇಳಿದಳು ಯಾರು ಹಝ್ರತ್ ಪೈಗಂಬರ್(ಸ) ಅವರ ಚಿಕ್ಕಪ್ಪರಾದ ಹಝ್ರತ್ ಹಮ್‌ಝಾ(ರ.ಅ) ಅವರ ಯಕೃತ್ತನ್ನು ತೆಗೆದು ನನ್ನ ಬಳಿ ತರುತ್ತಾರೊ ಮತ್ತು ಅದೇ ದಿವಸ ಅವರ ಕಿವಿ, ಮೂಗನ್ನು ಕತ್ತರಿಸಿ ತರುತ್ತಾರೊ ನಾನು ಅವರಿಗೆ ಪ್ರತಿಫಲ ನೀಡುತ್ತೇನೆ ಎಂದು ಹೇಳಿದಳು. ಹಾಗಾಗಿ ಹಝ್ರತ್ ಹಮ್‌ಝಾ(ರ) ಅವರ ಶವದೊಂದಿಗೆ ಹಾಗೆಯೇ ಮಾಡಲಾಯಿತು. ಯುದ್ಧದ ನಂತರ, ಹಝ್ರತ್ ಪೈಗಂಬರ್(ಸ) ಅವರು ತನ್ನ ಚಿಕ್ಕಪ್ಪನಿಗೆ ಈ ರೀತಿ ಅವಮಾನಿಸಲಾಗಿದೆ ಎಂದು ತಿಳಿದಾಗ, ಅವರು ಸಹಜವಾಗಿ ನೋವು ಅನುಭವಿಸಿದರು ಮತ್ತು ಶತ್ರುಗಳು ಈ ರೀತಿಯ ಕ್ರೂರ ವರ್ತನೆಯನ್ನು ಪ್ರಾರಂಭಿಸಿದಾಗ ಅವರು ಹೇಳಿದರು. ಹಾಗಿದ್ದರೆ ಅವರನ್ನೂ ಅದೇ ರೀತಿ ನಡೆಸಿಕೊಳ್ಳುತ್ತೇನೆ. ಆಗ ಉದಾತ್ತನಾದ ಅಲ್ಲಾಹನಿಂದ ಅವರಿಗೆ ದೈವವಾಣಿ ಲಭಿಸಿತು, ಅಂದರೆ ಅವರ ಕ್ರೂರ ವರ್ತನೆಯ ಹೊರತಾಗಿಯೂ, ನೀವು ಅಂತಹ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಾರದು ಮತ್ತು ಕ್ಷಮೆ ಮತ್ತು ಕರುಣೆಯಿಂದ ವರ್ತಿಸಬೇಕು. (ತಫ್ಸೀರೆ ಕಬೀರ್, ಸಂಪುಟ–6, ಪುಟ–353–354, ಸೂರತುನ್ನೂರ್ ಆಯತ್ 47) ಆದ್ದರಿಂದ ಇಸ್ಲಾಂನಲ್ಲಿ ಇದನ್ನು ನಿಷೇಧಿಸಲಾಗಿದೆ.

ಹಝ್ರತ್ ಹಮ್‌ಝಾ(ರ) ಅವರ ಸಹೋದರಿಯ ಘಟನೆಯನ್ನು ಸಹ ಇಲ್ಲಿ ಉಲ್ಲೇಖಿಸಲಾಗಿದೆ, ಅವರು ಹೇಗೆ ತಾಳ್ಮೆ ಮತ್ತು ವಿಧೇಯತೆಯ ಅಪೇಕ್ಷಣೀಯ ಉದಾಹರಣೆಯನ್ನು ತೋರಿಸಿದರು. ಹಝ್ರತ್ ಝುಬೈರ್(ರ) ವರದಿ ಮಾಡುತ್ತಾರೆ: ಉಹುದ್ ಯುದ್ಧದ ದಿನದ ಕೊನೆಯಲ್ಲಿ ಮಹಿಳೆಯೊಬ್ಬರು ಅತಿವೇಗದಿಂದ ಎದುರಿನಿಂದ ಬರುತ್ತಿರುವುದು ಕಂಡುಬಂದಿತು. ಹುತಾತ್ಮರ ಮೃತ ದೇಹಗಳನ್ನು ನೋಡಲು ಅವಳು ಹತ್ತಿರವಾಗಿದ್ದಳು. ಒಬ್ಬ ಮಹಿಳೆ ಅಲ್ಲಿಗೆ ಬಂದು ಶವಗಳನ್ನು ನೋಡುವುದು ಒಳ್ಳೆಯದಲ್ಲ ಎಂದು ಹಝ್ರತ್ ಪೈಗಂಬರ್(ಸ) ಅವರು ಸರಿಯಲ್ಲ ಎಂದುಹೇಳಿದ್ದರು. ಮೃತದೇಹಗಳಲ್ಲಿ ಹೆಚ್ಚಿನವರು ವಿರೂಪಗೊಂಡಿದ್ದರಿಂದ ತುಂಬಾ ಕೆಟ್ಟ ಸ್ಥಿತಿಯಲ್ಲಿದ್ದರು. ಅದಕ್ಕಾಗಿಯೇ ಈ ಮಹಿಳೆಯನ್ನು ನಿಲ್ಲಿಸಿ, ಈ ಮಹಿಳೆಯನ್ನು ನಿಲ್ಲಿಸಿ ಎಂದು ಹೇಳಿದರು. ನಾನು ಎಚ್ಚರಿಕೆಯಿಂದ ನೋಡಿದೆ ಇಕೆಯು ನನ್ನ ತಾಯಿ ಹಝ್ರತ್ ಸುಫಿಯಾ ಆಗಿದ್ದರು ಎಂದು ತಿಳಿಯಿತು ಎಂದು ಹಝ್ರತ್ ಝುಬೈರ್ ಹೇಳುತ್ತಾರೆ. ಆದ್ದರಿಂದ ನಾನು ಅವರ ಕಡೆಗೆ ಓಡಿ ಅವರು ಹುತಾತ್ಮರ ದೇಹಗಳನ್ನು ತಲುಪುವ ಮೊದಲು ಅವರನ್ನು ಕರೆದುಕೊಂಡು ಹೋದೆ. ಅವರು ನನ್ನನ್ನು ನೋಡಿ ನನ್ನ ಎದೆಗೆ ಹೊಡೆದು ಹಿಂದಕ್ಕೆ ತಳ್ಳಿದರು. ಅವರು ಬಹಳ ಬಲಶಾಲಿ ಮಹಿಳೆಯಾಗಿದ್ದರು. ಅವರು ಹೇಳಲು ಪ್ರಾರಂಭಿಸಿದರು, "ದೂರ ಹೋಗು!" ನೀನು ಏನು ಹೇಳಿದರೂ ನಾನು ಕೇಳುವುದಿಲ್ಲ. ಅದಕ್ಕೆ ನಾನು ಹೇಳಿದೆ ನಿಮ್ಮನ್ನು ಶವಗಳನ್ನು ನೋಡದಂತೆ ತಡೆಯಲು ಹಝ್ರತ್ ಪೈಗಂಬರ್(ಸ) ಹೇಳಿದ್ದಾರೆ. ಇದನ್ನು ಕೇಳಿದ ಕೂಡಲೇ ಅವರು ನಿಂತುಕೊಂಡರು. ಮತ್ತು ತಮ್ಮ ಬಳಿ ಇದ್ದ ಎರಡು ಬಟ್ಟೆಗಳನ್ನು ತೆಗೆದು ಹೇಳಿದರು. ಈ ಎರಡು ಬಟ್ಟೆಗಳು ನಾನು ನನ್ನ ಸಹೋದರನಿಗೆ ತಂದಿರುವೆನೆ ಏಕೆಂದರೆ ಅವರು ಶಹೀದ್ ಆಗಿದ್ದಾರೆ ಎಂದು ನನಗೆ ತಿಳಿಯಿತು. ಆದಾಗ್ಯೂ, ಅವರು ತನ್ನ ಪುತ್ರನ ಮಾತನ್ನು ಕೇಳಲಿಲ್ಲ ಬದಲಿಗೆ ಹಝ್ರತ್ ಪೈಗಂಬರ್(ಸ) ಅವರ ಆದೇಶವಿದೆ ಎಂದು ಇಳಿದ ತಕ್ಷಣ ವಿಧೇಯರಾಗಿ ಅಲ್ಲಿಯೇ ನಿಂತುಕೊಂಡರು.

ಮತ್ತೆ ಅವರು ಹೇಳಿದರು: ಹಝ್ರತ್ ಪೈಗಂಬರ್(ಸ) ಅವರಿಗೆ ಹೇಳಿರಿ. ಈಗ ನಾನು ನಿಂತಿರುವೆನು ಆದರೆ ರಸೂಲುಲ್ಲಾಹ್(ಸ) ಅವರಿಗೆ ಹೇಳಿ: ನನ್ನ ಸಹೋದರ ಹಮ್‌ಝಾ(ರ) ಹುತಾತ್ಮರಾಗಿದ್ದಾರೆ ಮತ್ತು ಮುಶ್ರಿಕೀನರು ಅವರ ದೇಹವನ್ನು ಛಿದ್ರಗೊಳಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಅವರನ್ನು ನೋಡಬೇಕು ಎಂದು ಬಯಸುತ್ತೇನೆ ಮತ್ತು ನಾನು ಯಾವುದೇ ರೀತಿಯ ಗಲಾಟೆ ಮಾಡುವುದಿಲ್ಲ ತಾಳ್ಮೆಯಿಂದ ಇರುತ್ತೇನೆ ಎಂದು ಭರವಸೆ ನೀಡುತ್ತೇನೆ. ಆದ್ದರಿಂದ ಹಝ್ರತ್ ಝುಬೈರ್(ರ.ಅ) ಈ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರನ್ನು ಕೇಳಿದಾಗ ಅವರು(ಸ) ಹೇಳಿದರು: ಅವರು ಹೋಗಲಿ. ಸರಿ, ನೋಡಿ ಎಂದು ಹೇಳಿದರು. ಅಣ್ಣನ ಮೃತದೇಹದ ಬಳಿಗೆ ಹೋಗಿ ಕುಳಿತು, ಸಿಂಹದಂತಹ ವೀರ ಹುತಾತ್ಮನನ್ನು ನೋಡಿ, ಅವಳ ಅಸಹಾಯಕ ಕಣ್ಣುಗಳಿಂದ ನೀರು ಹರಿಯಿತು, ಆದರೆ ಅವರು ಒಂದು ಮಾತನ್ನೂ ಹೇಳಲಿಲ್ಲ. ಒಂದು ವರದಿಯ ಪ್ರಕಾರ, ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬಂದು ಅವರ ಪಕ್ಕದಲ್ಲಿ ಕುಳಿತುಕೊಂಡರು ಮತ್ತು ಅವರ ಕಣ್ಣುಗಳಿಂದ ನೀರು ಹರಿಯಲು ಪ್ರಾರಂಭಿಸಿತು. ಧೈರ್ಯಶಾಲಿ ಮತ್ತು ತಾಳ್ಮೆಯ ಸಹೋದರಿ ಸ್ವಲ್ಪ ಸಮಯದವರೆಗೆ ಕಣ್ಣೀರಿನೊಂದಿಗೆ ಗೌರವ ಸಲ್ಲಿಸಿದರು ಮತ್ತು ಎದ್ದುನಿಂತು, ಮೊದಲು ಹೇಳಿದಂತೆ ತನ್ನ ಸಹೋದರನಿಗೆ ಎರಡು ಚಾದರಗಳನ್ನು ತರಲು ಮಗನನ್ನು ಕೇಳಿದಳು. ನನಗೆ ಶಹಾದತ್ತಿನ ಸುದ್ದಿಯನ್ನು ಲಭಿಸಿದೆ, ಆದ್ದರಿಂದ ನಾನು ಅದನ್ನು ತಂದಿದ್ದೇನೆ. ನೀವು ಅವರನ್ನು ಈ ಬಟ್ಟೆಗಳಲ್ಲಿ ದಫನ್ ಮಾಡಬೇಕು. ವರದಿಗಾರರು ಹೇಳುತ್ತಾರೆ: ನಾವು ಹಝ್ರತ್ ಹಮ್‌ಝಾ(ರ) ಅವರನ್ನು ಈ ಎರಡು ಬಟ್ಟೆಗಳಿಂದ ದಫನ್ ಮಾಡಲು ಪ್ರಾರಂಭಿಸಿದಾಗ, ಅವರ ಪಕ್ಕದಲ್ಲಿ ಅನ್ಸಾರಿ ಹುತಾತ್ಮರು ಮಲಗಿರುವುದನ್ನು ನಾವು ನೋಡಿದೆವು. ಹಝ್ರತ್ ಹಮ್‌ಝಾ(ರ) ಅವರಿಗೆ ಮಾಡಿದ ಉಪಚಾರವನ್ನೇ ಆತನಿಗೂ ಮಾಡಲಾಗಿತ್ತು. ಹಝ್ರತ್ ಹಮ್‌ಝಾ(ರ) ಅವರನ್ನು ಎರಡು ಬಟ್ಟೆಯಲ್ಲಿ ಹೊದಿಸಲು ನಮಗೆ ನಾಚಿಕೆಯಾಯಿತು ಮತ್ತು ಈ ಅನ್ಸಾರಿಯ ಬಳಿ ಒಂದು ಬಟ್ಟೆಯೂ ಇರಲಿಲ್ಲ, ಆದ್ದರಿಂದ ನಾವು ಒಂದು ಬಟ್ಟೆಯಲ್ಲಿ ಹಝ್ರತ್ ಹಮ್‌ಝಾರನ್ನು ಮತ್ತು ಇನ್ನೊಂದು ಬಟ್ಟೆಯಲ್ಲಿ ಈ ಅನ್ಸಾರಿ ಸಹಾಬಿಯನ್ನು ಹೊದಿಸಲು ನಿರ್ಧರಿಸಿದೆವು. ಮೌಲ್ಯಮಾಪನದಲ್ಲಿ, ಇಬ್ಬರು ಮಹನೀಯರಲ್ಲಿ ಒಬ್ಬರು ಎತ್ತರವಾಗಿರುವುದು ಕಂಡುಬಂದಿತು. ನಾವು ಚೀಟುಗಳನ್ನು ಎಳೆದು ಅವನ ಹೆಸರು ಹೊರಬಂದ ಬಟ್ಟೆಯಲ್ಲಿ ದಫನ್ ಮಾಡಿದೆವು.

(ಮುಸ್ನಾದ್ ಅಹ್ಮದ್ ಬಿನ್ ಹನ್ಬಲ್, ಸಂಪುಟ–1, ಪುಟ–452, ಹದೀಸ್–1418, ಆಲಂ ಅಲ್–ಕಿತಾಬ್, ಬೈರುತ್) (ಖುತ್ಬತೆ ತಾಹಿರ್(ರಹ್), ಖಿಲಾಫತ್ತಿನ ಮುಂಚೆಯ ಜಲ್ಸ ಸಾಲಾನದ ಭಾಷಣಗಳು, ಪುಟಗಳು 364–365, ತಾಹಿರ್ ಫೌಂಡೇಶನ್, 2006)

ಹಝ್ರತ್ ಖಲೀಫತುಲ್ ಮಸೀಹ್ ಅಲ್–ಅವ್ವಲ್(ರ) ಹೇಳುತ್ತಾರೆ, ಹಝ್ರತ್ ಹಮ್‌ಝಾ(ರ) ಅವರು ಅವಿಶ್ವಾಸಿಗಳ ಸೈನ್ಯವನ್ನು ವಿಚಲಿತಗೊಳಿಸಿದರು ಮತ್ತು ಸೈನ್ಯದ ಹೃದಯವನ್ನು ಪ್ರವೇಶಿಸಿದರು. ಮುಸಲ್ಮಾನರ ಗೆಲುವು ಸಾಧಿಸಿದಂತೆಯೇ, ಅಬ್ದುಲ್ಲಾ ಬಿನ್ ಜುಬೈರ್ ಅವರ ಸಹಚರರು, ಹಝ್ರತ್ ಪೈಗಂಬರ್(ಸ) ಅವರ ಆದೇಶವನ್ನು ಮರೆತು, ನಿರೀಕ್ಷಿತ ಯುದ್ಧ ಸಂಪತ್ತನ್ನು ಪಡೆಯಲು ಸೈನ್ಯವನ್ನು ಬಿಟ್ಟು ಮುಂಭಾಗದಿಂದ ಕೆಳಗಿಳಿದರು. ಶತ್ರುಗಳ ಮುಂಭಾಗವು ಖಾಲಿಯಾಗಿರುವುದನ್ನು ನೋಡಿ, ಸೈನ್ಯವು ಸವಾರರನ್ನು ಒಟ್ಟುಗೂಡಿಸಿ ಇಸ್ಲಾಂನ ಹಿಂಭಾಗದಲ್ಲಿ ಬಿದ್ದಿತು. ಮಹಾಯುದ್ಧವಾಯಿತು. ಹಝ್ರತ್ ಅಮೀರ್ ಹಮ್‌ಝಾ(ರ) ಮತ್ತು ಅಬ್ದುಲ್ಲಾ ಬಿನ್ ಜುಬೈರ್(ರ) ಹುತಾತ್ಮರಾದರು. ಹಝ್ರತ್ ಅಲಿ(ರ) ಮತ್ತು ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬೂಬಕರ್ ಸಿದ್ದಿಕ್(ರ) ಕೂಡ ಗಾಯಗೊಂಡರು. ಅಬು ಸುಫ್ಯಾನ್‌ನ ಪತ್ನಿ ಹಿಂದಾ ಬಿಂತ್ ಉತ್ಬಾ ಅವಳು ಅಮೀರ್ ಹಮ್‌ಝಾ(ರ) ಅವರ ಯಕೃತ್ತನ್ನು ಅಗಿಯುತ್ತಾಳೆ ಮತ್ತು ಮುಸ್ಲಿಮರ ಮೃತದೇಹಗಳ ಕಿವಿ ಮತ್ತು ಮೂಗುಗಳನ್ನು ಕತ್ತರಿಸಿ ಹಾರವನ್ನಾಗಿ ಮಾಡಿ ಅವರ ಕುತ್ತಿಗೆಗೆ ಧರಿಸಿದ್ದರು. ಹುತಾತ್ಮರ ಶವಗಳಿಂದ ಈ ಅಸಭ್ಯತೆಯನ್ನು ನೋಡಿ, ಹಝ್ರತ್ ಪೈಗಂಬರ್(ಸ) ಅವರು ಸ್ವತಃ ಕನಿಕರ ಮತ್ತು ಕೋಪವನ್ನು ಅನುಭವಿಸುವವರೆಗೂ ಮುಸ್ಲಿಮರ ಕಣ್ಣಿಗೆ ರಕ್ತ ಬಂದಿತು, ಈಗ ನೀವು ವಿಜಯಶಾಲಿಯಾಗಿದ್ದೀರಿ, ನಿಮ್ಮ ದೇಹಗಳನ್ನು ಸಹ ಅದೇ ರೀತಿ ಪರಿಗಣಿಸಿ ಎಂದು ಅವರು ಆದೇಶಿಸಿದರು. ಅವಿಶ್ವಾಸಿಗಳಿಗೆ ನೀವೇ ಚಿಕಿತ್ಸೆ ನೀಡಿ. ಆದ್ದರಿಂದ ಅವನು ತನ್ನ ಪ್ರೀತಿಯ ಚಿಕ್ಕಪ್ಪ ಅಮೀರ್ ಹಮ್‌ಝಾ(ರ) ಅವರನ್ನು ನೋಡಿ ಹೇಳಿದರು. ಅಂದರೆ, ನಿಮ್ಮ ಬದಲು, ನಾನು ಅವರಲ್ಲಿ ಎಪ್ಪತ್ತನ್ನು ಕೊಲ್ಲುತ್ತೇನೆ, ಆದರೆ ನೈಸರ್ಗಿಕ ಕರುಣೆಯು ಮಾನವ ತಾತ್ಕಾಲಿಕ ಕೋಪವನ್ನು ಜಯಿಸಿದೆ. ಮತ್ತು ಕೆಳಗಿನ ಈ ದೈವವಾಣಿಯು ಅವತರಿಸಿತು ಅದೇನೆಂದರೆ, ನಿಮಗೆ ಶಿಕ್ಷೆಯಾದ ರೀತಿಯಲ್ಲಿಯೇ ನಿಮಗೆ ಶಿಕ್ಷೆಯಾಗುತ್ತದೆ ಮತ್ತು ನೀವು ತಾಳ್ಮೆಯಿಂದಿದ್ದರೆ, ತಾಳ್ಮೆಯಿಂದಿರುವವರಿಗೆ ಅದು ಒಳ್ಳೆಯದು (ಅಲ್–ನಹ್ಲ್: 127). ಇಂತಹ ಪರಿಸ್ಥಿತಿಯಲ್ಲಿ ತಾಳ್ಮೆ ವಹಿಸುವುದು ಸುಬ್‌ಹಾನಲ್ಲಾಹ್ ಇದು ಸತ್ಯವಾಗಿದೆ ವಮಾ ಅರ್ಸಲ್ನಾಕ ಇಲ್ಲಾ ರಹ್ಮತನ್ ಲಿಲ್ ಆಲಮೀನ್ (ಅಲ್‌ಅಂಬಿಯಾ:108) ಅಂದರೆ ಹಝ್ರತ್ ಪೈಗಂಬರ್(ಸ) ಅವರಿಗೆ ಲೋಕದ ಜನರಿಗೆ ಒಂದು ಅನುಗ್ರಹನಾಗಿಯೇ ಕಳುಹಿಸಿದ್ದೇವೆ. ಹಜ್ರರತ್ ಖಲೀಫತುಲ ಮಸೀಹ್ ಅವ್ವಲ್(ರ) ಹೇಳಿದರು, ಆದ್ದರಿಂದ ಶವಗಳನ್ನು ಅಪವಿತ್ರಗೊಳಿಸುವ ಮತ್ತು ವಿರೂಪಗೊಳಿಸುವ ಅಸಹ್ಯಕರ ಪದ್ಧತಿಯು ಮುಂದಿನ ಯುಗದ ಎಲ್ಲಾ ರಾಷ್ಟ್ರಗಳಲ್ಲಿ ಮುಂದುವರೆಯಿತು, ಮುಸ್ಲಿಮರಲ್ಲಿ ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿತು ಮತ್ತು ಈ ಯುದ್ಧದಲ್ಲಿ ಇಸ್ಲಾಂ ಧರ್ಮಕ್ಕೆ ಮಾತ್ರ ಈ ಹೆಮ್ಮೆಯನ್ನು ನೀಡಲಾಯಿತು. ಈ ಆಘಾತವು ಮುಸ್ಲಿಮರನ್ನು ತಲುಪಿತು ಮತ್ತು ಅದನ್ನು ಅಬ್ದುಲ್ಲಾ ಬಿನ್ ಜುಬೈರ್ ಸೈನ್ಯದ ತಪ್ಪಿನಿಂದ ಕರೆಯಲಾಯಿತು, ಆದರೆ ಕಪಟಿಗಳ ಬೂಟಾಟಿಕೆ ಮತ್ತು ಯಹೂದಿಗಳ ದುರುದ್ದೇಶ ಮತ್ತು ಮೊಂಡುತನವು ಸ್ಪಷ್ಟವಾಯಿತು ಮತ್ತು ಶುದ್ಧ ಮುಸ್ಲಿಮರು ಗುರುತಿಸಲ್ಪಟ್ಟರು. (ಫಸ್ಲುಲ್ ಖಿತಾಬ್, ಭಾಗ–1, ಪುಟ–126–127)

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳಿದರು: "ಹಝ್ರತ್ ಪೈಗಂಬರ್(ಸ) ರ ಉಗ್ರ ಶತ್ರುಗಳಲ್ಲಿ ಒಬ್ಬರು ಹಿಂದಾ ಆಗಿದ್ದಳು, ಅವಳು ಎಷ್ಟರ ಮಟ್ಟಿಗೆ ಉಗ್ರ ವಿರೋಧಿಯಾಗಿದ್ದಳು ಅಂದರೆ ಉಹುದ್ ಯುದ್ಧ ದಿನದಂದು ಅವಳು ಇಸ್ಲಾಮಿನ ಸೈನ್ಯದ ಮೇಲೆ ದಾಳಿ ಮಾಡಲು ಹೋಗಬೇಕೆಂದು ಕವಾದಲ್ಲಿ ಕವಿತೆಗಳನ್ನು ಓದುತ್ತಾ ಜನರನ್ನು ಪ್ರಚೋದಿಸುತ್ತಿದ್ದಳು ಮತ್ತು ಮುಸ್ಲಿಮರಿಗೆ ಒಂದು ಅಪಾಯಕಾರಿ ಸಂದರ್ಭ ಬಂದು ಅಂದರೆ ಅವಳು ಹೇಳಿದಳು ಯಾರು ಹಝ್ರತ್ ಪೈಗಂಬರ್(ಸ) ಅವರ ಚಿಕ್ಕಪ್ಪರಾದ ಹಝ್ರತ್ ಹಮ್‌ಝಾ(ರ.ಅ) ಅವರ ಯಕೃತ್ತನ್ನು ತೆಗೆದು ನನ್ನ ಬಳಿ ತರುತ್ತಾರೊ ಮತ್ತು ಅದೇ ದಿವಸ ಅವರ ಕಿವಿ, ಮೂಗನ್ನು ಕತ್ತರಿಸಿ ತರುತ್ತಾರೊ ನಾನು ಅವರಿಗೆ ಪ್ರತಿಫಲ ನೀಡುತ್ತೇನೆ ಎಂದು ಹೇಳಿದಳು. ಹಾಗಾಗಿ ಹಝ್ರತ್ ಹಮ್‌ಝಾ(ರ) ಅವರ ಶವದೊಂದಿಗೆ ಹಾಗೆಯೇ ಮಾಡಲಾಯಿತು. ಯುದ್ಧದ ನಂತರ, ಹಝ್ರತ್ ಪೈಗಂಬರ್(ಸ) ಅವರು ತನ್ನ ಚಿಕ್ಕಪ್ಪನಿಗೆ ಈ ರೀತಿ ಅವಮಾನಿಸಲಾಗಿದೆ ಎಂದು ತಿಳಿದಾಗ, ಅವರು ಸಹಜವಾಗಿ ನೋವು ಅನುಭವಿಸಿದರು ಮತ್ತು ಶತ್ರುಗಳು ಈ ರೀತಿಯ

ಕ್ರೂರ ವರ್ತನೆಯನ್ನು ಪ್ರಾರಂಭಿಸಿದಾಗ ಅವರು ಹೇಳಿದರು. ಹಾಗಿದ್ದರೆ ಅವರನ್ನೂ ಅದೇ ರೀತಿ ನಡೆಸಿಕೊಳ್ಳುತ್ತೇನೆ. ಆಗ ಉದಾತ್ತನಾದ ಅಲ್ಲಾಹನಿಂದ ಅವರಿಗೆ ದೈವವಾಣಿ ಲಭಿಸಿತು, ಅಂದರೆ ಅವರ ಕ್ರೂರ ವರ್ತನೆಯ ಹೊರತಾಗಿಯೂ, ನೀವು ಅಂತಹ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಾರದು ಮತ್ತು ಕ್ಷಮೆ ಮತ್ತು ಕರುಣೆಯಿಂದ ವರ್ತಿಸಬೇಕು. (ತಫ್ಸೀರೆ ಕಬೀರ್, ಸಂಪುಟ–6, ಪುಟ–353–354)

ಯುದ್ಧದ ವಿವರಣೆ ಮುಂದುವರೆಯುವುದು ಎಂದು ಹುಝೂರ್ ಹೇಳಿದರು.

ಪೆಲಸ್ತೀನಿಯರಿಗಾಗಿ ದುಆ ಮಾಡಲು ನಾನು ಹೇಳುತ್ತಾ ಇದ್ದೇನೆ. ದುಆ ಮಾಡಿರಿ. ದೌರ್ಜನ್ಯದ ವಿರುದ್ಧ ನಿಜವಾದ ಪ್ರತಿಕ್ರಿಯೆ ನಡೆಸಲು ಲೋಕಕ್ಕೆ ಅಲ್ಲಾಹನು ಸೌಭಾಗ್ಯ ನೀಡಲಿ. ದೌರ್ಜನ್ಯ ಆಗುತ್ತಿದೆ, ದೌರ್ಜನ್ಯ ಆಗುತ್ತಿದೆ ಎಂದು ಹೇಳಿ ಸ್ವಲ್ಪ ಮಟ್ಟಿಗೆ ಸ್ವರವೆತ್ತಲು ಪಾಶ್ಚಿಮಾತ್ಯ ಲೋಕದ ಜನರು ಪ್ರಾರಂಭಿಸಿದ್ದಾರೆ. ಆದರೂ ಎಲ್ಲರೂ ಇಸ್ರೇಲಿ ಸರ್ಕಾರವನ್ನು ಭಯಪಡುತ್ತಿದ್ದಾರೆ ಎಂದು ತೋರುತ್ತಿದೆ. ಅಥವಾ ಸಹಜವಾಗಿಯೇ ಮುಸ್ಲಿಮರ ವಿರುದ್ಧ ಪಾಶ್ಚಿಮಾತ್ಯ ಲೋಕದ ಜನರಿಗೆ ಇರುವ ಹಗೆಯ ಕಾರಣದಿಂದ ಮುಸ್ಲಿಮರ ಮೇಲೆ ನಡೆಯುತ್ತಿರುವ ದೌರ್ಜನ್ಯ ಕೊನೆಗೊಳ್ಳದಿರಲಿ ಎಂದೋ ಅಥವಾ ಕೈಗೊಳ್ಳಬೇಕಾದ ರೀತಿಯಲ್ಲಿ ಪ್ರಯತ್ನ ನಡೆಯದಿರಲಿ ಎಂದೋ ಪಾಶ್ಚಿಮಾತ್ಯ ಲೋಕದ ಜನರು ಬಯಸುತ್ತಾರೆ. ಮುಗ್ಧ ಮಕ್ಕಳು, ಮಹಿಳೆಯರು ಮತ್ತು ವೃದ್ಧರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ ಎಂಬುದನ್ನು ಅವರು ಲೆಕ್ಕಿಸುವುದಿಲ್ಲ. ಆದ್ದರಿಂದ ಹೇಗಿದ್ದರೂ ಅವರ ಮೇಲೆ ನಮಗೆ ಹೆಚ್ಚಿನ ಭರವಸೆ ಇರಿಸಲು ಸಾಧ್ಯವಿಲ್ಲ. ಆದರೆ ಹೇಗಿದ್ದರೂ ಪ್ರಯತ್ನ ಮಾಡುತ್ತಿರಬೇಕು. ಅವರನ್ನು ಮನವರಿಕೆ ಮಾಡಿಸುತ್ತಾ ಇರಬೇಕು ಮತ್ತು ದುಆಗಳನ್ನು ಮಾಡುತ್ತಿರಬೇಕು.

ತಮ್ಮ ಧ್ವನಿಯನ್ನು ಉಚ್ಚಗೊಳಿಸಲು, ನಿಜವಾಗಿಯೂ ಒಗ್ಗಟ್ಟಿನಿಂದ ಈ ದೌರ್ಜನ್ಯದ ವಿರುದ್ಧ ದನಿಯೆತ್ತಲು ಮತ್ತು ಇದನ್ನು ಕೊನೆಗೊಳಿಸಲು ಪ್ರಯತ್ನಿಸುವಂತಾಗಲು ಮುಸ್ಲಿಮ್ ದೇಶಗಳಿಗೂ ಅಲ್ಲಾಹನು ಧೈರ್ಯ ನೀಡಲಿ.

ನಮಾಝಿನ ನಂತರ, ಇಬ್ಬರು ದಿವಂಗತರ ಜನಾಝ ನಮಾಝ್ ನಿರ್ವಹಿಸಲಾಗುವುದು. ಅವರಲ್ಲಿ ಮೊದಲನೆಯ ಪ್ರಸ್ತಾಪ ಗಾಝಾದ ನಿವಾಸಿಯಾದ ಸನ್ಮಾನ್ಯ ಶೇಖ್ ಅಹ್ಮದ್ ಹುಸೇನ್ ಅಬೂ ಸರ್ದಾನ ಸಾಹಿಬ್‌ರದ್ದಾಗಿದೆ. ಕೆಲವು ದಿನಗಳ ಹಿಂದೆ ಗಾಝಾದಲ್ಲಿ ಇಸ್ರೇಲಿನ ಬಾಂಬ್ ದಾಳಿಯ ವೇಳೆ ನಮ್ಮ ಈ ಹಿರಿಯ ಅಹ್ಮದೀ ಶಹೀದ್ ಆದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಸನ್ಮಾನ್ಯರು ಗಾಝಾದ ಪ್ರಸ್ತುತ ಯುದ್ಧದಲ್ಲಿ ಶಹೀದ್ ಆದ ಮೊದಲ ಅಹ್ಮದಿಯಾಗಿರುವರು. ದಿವಂಗತರಿಗೆ ಸುಮಾರು 94 ವಯಸ್ಸು ಇತ್ತು. ದಿವಂಗತರು ಅಲ್‌ಅಝ್‌ಹರ್ ಯೂನಿವರ್ಸಿಟಿಯಿಂದ ತೇರ್ಗಡೆಯಾದ ಪಂಡಿತರಲ್ಲಿ ಒಬ್ಬರಾಗಿದ್ದರು. 1970ರಲ್ಲಿ ದಿವಂಗತರು ದೈವಿಕ ಸಹಾಯದಿಂದ ಬೈಅತ್ ಮಾಡಿದರು ಮತ್ತು ಅಹ್ಮದಿಯ್ಯತ್ ಪ್ರವೇಶಿಸಿದರು. ಇದು ಈದ್ ದಿನವಾದ್ದರಿಂದ, ದಿವಂಗತರು ದೈವಿಕ ವಿಧಿಯ ಅಡಿಯಲ್ಲಿ ಈದ್ ನಮಾಝ್‌ಗಾಗಿ ತನ್ನ ಸ್ನೇಹಿತರೊಂದಿಗೆ ಕಬಾಬೀರ್ ತಲುಪಿದರು. ದಿವಂಗತ ಮೌಲಾನಾ ಬಶೀರುದ್ದೀನ್ ಉಬೈದುಲ್ಲಾ ಸಾಹಿಬ್ ಮುಬಲ್ಲಿಗ್ ಅವರು ಈದ್ ಖುತ್‌ಬದ ಸಮಯದಲ್ಲಿ ಇಮಾಮ್ ಮಹದಿಯ ಆಗಮನದ ಕುರಿತು ಪ್ರಸ್ತಾಪಿಸಿದರು, ಇದು ದಿವಂಗತ ಶೇಖ್ ಅಬು ಸರ್ದಾನ ಸಾಹಿಬ್ ಅವರ ಆಸಕ್ತಿಯನ್ನು ಹೆಚ್ಚಿಸಿತು. ಮೌಲಾನಾ ಬಶೀರುದ್ದೀನ್ ಉಬೈದುಲ್ಲಾ ಸಾಹಿಬ್ ಅವರೊಂದಿಗೆ ವಿವರವಾದ ಸಭೆಯನ್ನು ಏರ್ಪಡಿಸಲು ಅವರು ತಮ್ಮ ಪಕ್ಕದಲ್ಲಿ ಕುಳಿತಿದ್ದ ಅಹ್ಮದಿ ಅಲಾವುದ್ದೀನ್ ಓದಾ ಸಾಹಿಬ್ ಅವರನ್ನು ಕೇಳಿದರು. ಸಂಭಾಷಣೆಯ ಸಮಯದಲ್ಲಿ ಅವರು ಮೌಲಾನಾ ಸಾಹಿಬ್‌ಗೆ ಹೇಳಿದರು, ನಾನು ನನ್ನ ದಿವಂಗತ ತಂದೆಯ ಸಲಹೆಯನ್ನು ಹೊಂದಿದ್ದೇನೆ ಅದೇನೆಂದರೆ ನಿಮ್ಮ ಜೀವನದಲ್ಲಿ ಇಮಾಮ್ ಮಹದಿ ಅಲೈಹಿಸ್ಸಲಾಮ್ ಆಗಮನದ ಸುದ್ದಿ ನಿಮಗೆ ತಿಳಿದರೆ, ನೀವು ಬೈಅತ್ ಮಾಡಬೇಕು ಎಂದು. ಆದ್ದರಿಂದ ಅವರು ಅಂದು ಬೈಅತ್ ಮಾಡಿದರು. ಅವರ ಬೈಅತ್ ಅನ್ನು ಕಂಡು ಅವರ ಕೆಲವು ಸಹೋದ್ಯೋಗಿಗಳು ಸಹ ಬೈಅತ್ ಮಾಡಿದರು. ದಿವಂಗತರು ತಮ್ಮ ಪ್ರದೇಶದಲ್ಲಿ ಗೌರವಾನ್ವಿತ ವಿದ್ವಾಂಸರಾಗಿ ಹೆಚ್ಚು ಗೌರವಿಸಲ್ಪಟ್ಟರು. ಅವರಿಗೆ ಮಕ್ಕಳಿರಲಿಲ್ಲ, ಆದರೆ ಅವರ ಪ್ರೀತಿಪಾತ್ರರಲ್ಲಿ ಕೆಲವು ಪ್ರಾಮಾಣಿಕ ಅಹ್ಮದಿಯರೂ ಇದ್ದಾರೆ. ಬೈಅತ್‌ನ ನಂತರ, ದಿವಂಗತರು ಕಬಾಬೀರ್‌ನ ಬಳಿಗೆ ಹೋಗುವುದನ್ನು ಮುಂದುವರೆಸಿದರು ಮತ್ತು ಕಬೀರ್‌ನ ಅಹ್ಮದೀಯರೊಂದಿಗೆ ಸಂಪರ್ಕದಲ್ಲಿದ್ದರು. ಅವರು ಖಿಲಾಫತ್ ಅನ್ನು ಬಹಳ ಪ್ರೀತಿಸುತ್ತಿದ್ದರು ಮತ್ತು ಅವರು ನಿಜವಾದ ಅಹ್ಮದಿ ಎಂದು ಅನೇಕ ಬಾರಿ ವ್ಯಕ್ತಪಡಿಸಿದ್ದಾರೆ.

ಅವರು ಪವಿತ್ರ ಖುರ್‌ಆನ್‌ಗೆ ಅಸಾಮಾನ್ಯವಾದ ಬಾಂಧವ್ಯವನ್ನು ಹೊಂದಿದ್ದರು. ಅವರು ವಾರಕ್ಕೊಮ್ಮೆ ಸಂಪೂರ್ಣ ಖುರ್‌ಆನ್ ಅನ್ನು ಪಠಿಸುತ್ತಿದ್ದರು, ನನಗೆ ಕಳುಹಿಸಿದ ಸಂದೇಶದ ರೆಕಾರ್ಡಿಂಗ್ನಲ್ಲಿಯೂ ಸಹ ಅದನ್ನು ಉಲ್ಲೇಖಿಸಲಾಗಿದೆ. ಫಲಸ್ತೀನಿನ ಮಾಜಿ ಖಾಝಿ ಅಲ್–ಖುಝಾ ಶೇಖ್ ಮುಹಮ್ಮದ್ ಹುಸೇನ್ ಅಬು ಸರ್ದಾನಾ ದಿವಂಗತ ಅಹ್ಮದ್ ಅಬು ಸರ್ದಾನ ಅವರ ಸಹೋದರ ಆಗಿದ್ದರು. ಈ ಅಪಘಾತದಲ್ಲಿ ಅವರ ಎರಡನೇ ಪತ್ನಿಯಾದ ಅವರ ಪತ್ನಿಯೂ ಸಹ ಗಾಯಗೊಂಡಿದ್ದಾರೆ, ಅಲ್ಲಾಹನು ಅವರನ್ನು ಗುಣಪಡಿಸಲಿ.

ಡಾ. ಅಝೀಝ್ ಹಫೀಝ್ ಸಾಹಿಬ್ ಇಲ್ಲಿಂದ ಹ್ಯುಮಾನಿಟಿ ಫಸ್ಟ್ ಅಡಿಯಲ್ಲಿ ಅಲ್ಲಿಗೆ ಹೋಗುತ್ತಲೇ ಇದ್ದರು, ಅವರಿಗೆ ಅಬು ಸರ್ದಾನ ಸಾಹಿಬ್ ಅವರನ್ನು ಭೇಟಿ ಮಾಡುವ ಅವಕಾಶ ಲಭಿಸಿತು. ಅವರು ಹೇಳುತ್ತಾರೆ: ನಾನು ಅವರನ್ನು ಭೇಟಿ ಮಾಡಲು ಹೋದಾಗ ಅವರು ನನ್ನನ್ನು ಗೌರವಿಸಲು ಎದ್ದು ನಿಲ್ಲಲು ಪ್ರಯತ್ನಿಸಿದರು ಅದಕ್ಕೆ ನಾನು ಅವರನ್ನು ಕುಳಿತುಕೊಳ್ಳಲು ಹೇಳಿದೆ. ಅವರು ಬಹಳ ಭಾವೋದ್ವೇಗಕ್ಕೆ ಒಳಗಾದರು ಮತ್ತು ತಮ್ಮ ಕೋಲಿನಿಂದ ಅವರನ್ನು ಮುಟ್ಟಿ ನೀವು ನನ್ನ ಮುಂದೆ ನಿಂತಿರುವ ಖಲೀಫತುಲ್ ಮಸೀಹ್ ಅವರ ಪ್ರತಿನಿಧಿಯಾಗಿದ್ದೀರಿ, ನಾನು ಹೇಗೆ ಕುಳಿತುಕೊಳ್ಳಲಿ? ಎಂದು ಹೇಳಿದರು. ಖಿಲಾಫತ್‌ಗೆ ಬಹಳ ಗೌರವವನ್ನು ನಿಡುತ್ತಿದ್ದರು. ತದನಂತರ ಅವರು ಕೈ ಹಿಡಿದುಕೊಂಡು ನೀವು ಯಾವ ಪ್ರದೇಶದಿಂದ ಬಂದಿರುವಿರೊ ಅಲ್ಲಿ ಹಝ್‌ರತ್ ಮಸೀಹ್ ಮೌಊದ್(ಅ) ಆಗಮಿಸಿದ್ದಾರೆ ಎಂದು ಹೇಳಿದರು. ಮಸೀಹ್ ಮೌಊದ್(ಅ) ಹಾಗೂ ಖಿಲಾಫತ್‌ನೊಂದಿಗೆ ಇದ್ದ ಅವರ ಪ್ರೀತಿಯನ್ನು ಕಂಡು ನನಗೂ ಕಣ್ಣೀರು ಬಂತು ಎಂದು ಹೇಳಿದರು. ನಂತರ ಅವರು ಡಾಕ್ಟರ್ ಸಾಇಬ್ ಅವರ ಮೂಲಕ ಅವರ ಮೊಬೈಲ್ ಫೋನ್‌ನಲ್ಲಿ ನನಗೆ ಸಂದೇಶವನ್ನು ರೆಕಾರ್ಡ್ ಮಾಡಲು ಬಯಸುತ್ತೇನೆ ಎಂದು ಹೇಳಿ ಕಳುಹಿಸಿದ್ದಾರೆ. ಆ ಸಂದೇಶವೂ ವೈರಲ್ ಆಗಿತ್ತು, ಅದರ ಒಂದು ಭಾಗವನ್ನು ಸಹ ನಾನು ಹೇಳುತ್ತೇನೆ, ಅವರು ನನಗೆ ಕಳುಹಿಸಿದ ಸಂದೇಶದಲ್ಲಿ ಅವರು ಹೇಳುತ್ತಾರೆ: ಸರ್ವಶಕ್ತನಾದ ಅಲ್ಲಾಹನ ಹೊರತು ಬೇರೆ ಯಾವ ಆರಾಧಕನಿಲ್ಲ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅಲ್ಲಾಹನ ರಸೂಲ್ ಆಗಿದ್ದಾರೆ. ಅಸ್ಸಲಾಮು ಅಲೈಕುಮ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್. ನಾನು ವಾರಕ್ಕೊಮ್ಮೆ ಸಂಪೂರ್ಣ ಪವಿತ್ರ ಖುರ್‌ಆನ್‌ನ ತಿಲಾವತ್ ಮಾಡುತ್ತೇನೆ ಮತ್ತು ಪ್ರತಿ ಫಜರ್ ನಮಾಝಿನಲ್ಲಿ ನಾನು ನಿಮಗಾಗಿ ಪ್ರಾರ್ಥಿಸುತ್ತೇನೆ ಮತ್ತು ಓ ನನ್ನ ಖಲೀಫಾ! ನನ್ನನ್ನು ಉಳಿಸಿಕೊಳ್ಳಿ ನನ್ನನ್ನು ಸಹಾಯ ಮಾಡಿ. ನಾನು ತೀವ್ರ ಆಧ್ಯಾತ್ಮಿಕ ಸಂಕಟ ಮತ್ತು ತೊಂದರೆಯಲ್ಲಿದ್ದೇನೆ. ಮುಂದೆ ಹೇಳುತ್ತಾರೆ: ನಿಮ್ಮ ಪ್ರತಿಯೊಂದು ಆದೇಶವನ್ನು ನಾನು ಪೂರೈಸುತ್ತೇನೆ. ಜಗತ್ತಿಗೆ ಸತ್ಯವಲ್ಲದೆ ಇನ್ನೇನು ಬೇಕು ಎಂದು ಹೇಳಿದರು. ಅಲ್ಲಾಹನ ಮಾರ್ಗದಲ್ಲಿ ಜಿಹಾದ್‌ಗಾಗಿ ಇಲ್ಲಿ ತುಂಬಾ ಕಷ್ಟಕರವಾಗಿದೆ ಆದರೆ ನಾನು ಅದಕ್ಕೆ ಸಂಕಲ್ಪ ಮಾಡಿದ್ದೇನೆ. ನಾನು 1948ರ ಯುದ್ಧದಲ್ಲಿ ಭಾಗವಹಿಸಿದ್ದೆ. ನಾನು ಮೂರು ಗಡಿ ಯುದ್ಧಗಳಲ್ಲಿ ಕಮಾಂಡರ್ ಆಗಿ ಸೇವೆ ಸಲ್ಲಿಸಿದ್ದೇನೆ ಮತ್ತು ಸಿನೈನಲ್ಲಿ ಸ್ಥಳಾಂತರಗೊಂಡೆ. ನನ್ನ ತಂದೆ ಪ್ರಸಿದ್ಧ ಸೂಫಿಯಾಗಿದ್ದರು ಮತ್ತು ನನ್ನ ಸಹೋದರ ಮುಹಮ್ಮದ್ ಗಝಾದಲ್ಲಿ ಮುಖ್ಯ ನ್ಯಾಯಾಧೀಶರಾಗಿದ್ದರು. ನನ್ನ ಕುಟುಂಬದಲ್ಲಿ ನನಗೆ ತೊಂದರೆ ಕೊಡುವ ಜನರಿದ್ದಾರೆ, ಅವರ ಮಾರ್ಗದರ್ಶನ ಮತ್ತು ತಿದ್ದುಪಡಿಗಾಗಿ ನನಗಾಗಿ ಪ್ರಾರ್ಥಿಸಿ. ನಂತರ ಈ ಜಿಲ್ಲೆಯಲ್ಲಿ ನನಗೆ ಕೆಲವೇ ಕೆಲವು ಸಹೋದ್ಯೋಗಿಗಳಿದ್ದಾರೆ ಎಂದು ಅವರು ಹೇಳಿದರು ಮತ್ತು ನಂತರ ಅವರು ನನಗೆ ಮಗನಂತೆ ಆತ್ಮೀಯರು ಎಂದು ಕೆಲವರ ಹೆಸರನ್ನು ತೆಗೆದುಕೊಂಡರು, ಅವರಲ್ಲಿ ತಾರಿಕ್ ಅಬುದಿಯಾ ಎಂಬ ಯುವಕ ಕೂಡ ಇದ್ದಾನೆ. ಮುಂದೆ ಅವರು ಹೇಳುತ್ತಾರೆ ನನಗೆ ಮಕ್ಕಳಿಲ್ಲ. ನಂತರ, ದುವಾ ಮಾಡುತ್ತಾ ಹೇಳುತ್ತಾರೆ, ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನು ಅನುಗ್ರಹಿಸುತ್ತಾನೆ. ನಾನು ನಿಮಗೆ ಧನ್ಯವಾದ ಹೇಳುತ್ತೇನೆ ಮತ್ತು ಪುನರುತ್ಥಾನದ ದಿನದವರೆಗೆ ನಾನು ಸರ್ವಶಕ್ತನಾದ ಅಲ್ಲಾಹನನ್ನು ಭೇಟಿಯಾಗುವವರೆಗೆ, ನೀವು ನನ್ನ ಬೈಅತ್ ಅನ್ನು ಸ್ವೀಕರಿಸುತ್ತೀರಿ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ.

ಮತ್ತೆ ಅವರು ಹೇಳುತ್ತಾರೆ: ನನಗೆ ಅಹಮದಿಯಾ ನಂಬಿಕೆಯನ್ನು ಬಿಟ್ಟು ಬೇರೆ ನಂಬಿಕೆ ಇಲ್ಲ. ಕೆಲವು ವಿರೋಧಿಗಳು ಇವರು ಅಹ್ಮದೀಯರಲ್ಲ, ಅಹ್ಮದಿ ಎಂದು ಮಾತ್ರ ಪ್ರಸಿದ್ಧಿ ಮಾಡುತ್ತಿದ್ದಾರೆ ಎಂದು ಹೇಳಿದ್ದರು, ಆದರೆ ಅವರ ಈ ದಾಖಲಿತ ಹೇಳಿಕೆಯು ಮುಂದೆ ಇದೆ. ಅದರ ನಂತರ, ಬಹುಶಃ ಆ ವಿರೋಧಿಗಳು ಈಗ ಮೌನವಾಗಿರಬಹುದು. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ ಮತ್ತು ಅವರ ಪತ್ನಿಗೂ ಶಮನ ನೀಡಲಿ. ಅಲ್ಲಾಹನು ಅವರ ದುಆಗಳನ್ನು ಪೆಲಸ್ತೀನಿಯರ ಪರವಾಗಿಯೂ ಸ್ವೀಕಾರ ಮಾಡಲಿ. ಅಲ್ಲಿ ಶಾಂತಿ ಸ್ಥಾಪನೆಯಾಗಲಿ ಮತ್ತು ಅಲ್ಲಿಯ ಜನರಿಗೆ ಹಝ್‌ರತ್ ಮಸೀಹ್ ಮೌಊದ್(ಅ)ರನ್ನು ನಂಬಲು ಅಲ್ಲಾಹನು ಸೌಭಾಗ್ಯ ನೀಡಲಿ.

ಎರಡನೆಯ ಪ್ರಸ್ತಾಪ ಕೆನ್ಯಾದ ಸನ್ಮಾನ್ಯ ಉಸ್ಮಾನ್ ಅಹ್ಮದ್ ಗಾಕೋರಿಯ ಸಾಹಿಬ್‌ರದ್ದಾಗಿದೆ. ದಿವಂಗತರು ಕೆಲವು ದಿನಗಳ ಹಿಂದೆ ನಿಧನಗೊಂಡರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

ದಿವಂಗತರು ಅನೇಕ ದಶಕಗಳಷ್ಟು ದೀರ್ಘ ಕಾಲ ಜಮಾಅತಿನ ಸೇವೆ ಮಾಡಿದ್ದರು. ಅವರು 1932 ರಲ್ಲಿ ಜನಿಸಿದರು. ಅರವತ್ತರ ದಶಕದಲ್ಲಿ ಅವರನ್ನು ಜಮಾತ್‌ಗೆ ಪರಿಚಯಿಸಲಾಯಿತು. ಅವರನ್ನು ಜಮಾತ್‌ಗೆ ಹಳೆಯ ಹಿರಿಯ ಅರಬ್ ಅಹ್ಮದಿ ದಿವಂಗತ ಸಾಲಿಮ್ ಅಫೀಫ್ ಸಾಹಿಬ್ ಪರಿಚಯಿಸಿದರು. ಆ ಬಳಿಕ 1964ರಲ್ಲಿ ಜಮಾಅತ್ ಧರ್ಮ ಪ್ರಚಾರಕರಾದ ಗೌರವಾನ್ವಿತ ಮೌಲಾನಾ ರೋಷನ್ ದೀನ್ ಸಾಹಿಬ್ ಅವರಿಂದ ಬೈಅತ್ ಮಾಡಿ ಜಮಾಅತ್ ಗೆ ಸೇರ್ಪಡೆಗೊಂಡು ಕೊನೆಯವರೆಗೂ ಶ್ರೇಷ್ಠ ಶೈಲಿಯಿಂದ ಈ ಬೈಅತ್ ಅನ್ನು ನೆರವೇರಿಸಿದರು. ಶಿಕ್ಷಣ ಇಲಾಖೆಯೊಂದಿಗೆ ಸಂಬಂಧ ಹೊಂದಿರಿ. ಕೀನ್ಯಾದ ಸ್ವಾತಂತ್ರ್ಯದ ನಂತರ, ಅವರು ಕ್ವಾಲೆ ಪಾಲಿಟೆಕ್ನಿಕ್ ಶಾಲೆಯ ಮೊದಲ ಸ್ಥಳೀಯ ಪ್ರಾಂಶುಪಾಲರಾಗಿ ನೇಮಕಗೊಂಡರು. ಅದೇ ರೀತಿ, ನೀವು ಆಗಾಗ ಹೇಳುತ್ತಿದ್ದ ಮತ್ತೊಂದು ಪಾಲಿಟೆಕ್ನಿಕ್ ಕಾಲೇಜಿನ ಮೊದಲ ಸ್ಥಳೀಯ ಪ್ರಾಂಶುಪಾಲರು ಎಂಬ ಗೌರವವನ್ನು ನೀವು ಹೊಂದಿದ್ದೀರಿ. ಶಿಕ್ಷಣ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದು

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 25 January 2024, Issue No. 04

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ನಿವೃತ್ತರಾದರು. ಹಲವಾರು ಜಮಾತ್ ಪುಸ್ತಕಗಳನ್ನು ಸ್ವಾಹಿಲಿ ಭಾಷೆಗೆ ಭಾಷಾಂತರಿಸುವ ಸುಯೋಗವನ್ನು ಹೊಂದಿದ್ದರು. ನೈರೋಬಿ ಜಮಾತ್‌ನ ಮೊದಲ ಸ್ಥಳೀಯ ಅಧ್ಯಕ್ಷ ಎಂಬ ಗೌರವವೂ ನಿಮಗಿದೆ. ಅದೇ ರೀತಿ, ಕೀನ್ಯಾದ ಜಮಾತ್‌ನ ಮೊದಲ ಸ್ಥಳೀಯ ಮೂಸಿಯಾನ್‌ರಲ್ಲಿ ಅವರು ಕೂಡ ಎಣಿಸಲ್ಪಟ್ಟಿದ್ದಾರೆ. ದಿವಂಗತರು ಅನೇಕ ಒಳ್ಳೆಯ ಗುಣಗಳನ್ನು ಹೊಂದಿದ್ದವರು, ತತ್ವನಿಷ್ಠರು. ಅವರು ತಮ್ಮ ಜೀವನದ ಕೊನೆಯ ಭಾಗದವರೆಗೂ ತಹಜುದ್ ನಮಾಝಿನಲ್ಲಿ ನಿಯಮಿತವಾಗಿರುತ್ತಿದ್ದರು. ಚಂದ ನೀಡುವಲ್ಲಿ ಅವರು ಎಂದಿಗೂ ಅಸಡ್ಡೆ ಅಥವಾ ನಿರಾಸಕ್ತಿ ತೋರಲಿಲ್ಲ. ಕೇಂದ್ರ ಪ್ರಚಾರಕರ ಬಗ್ಗೆ ನಿಮಗೆ ಅಪಾರ ಗೌರವವಿತ್ತು. ಒಬ್ಬ ಅಹ್ಮದಿಯು ಕೇಂದ್ರ ಮುಬಲ್ಲಿಗರ ಬಗ್ಗೆ ಏನಾದರೂ ತಪ್ಪಾಗಿ ಮಾತನಾಡಿದರೆ ಅಥವಾ ದೂರಿನ ಬಣ್ಣದಲ್ಲಿ ಏನನ್ನಾದರೂ ಮಾತನಾಡಿದರೆ, ಅವರು ತಕ್ಷಣವೇ ಅವರನ್ನು ತಡೆಯುತ್ತಿದ್ದರು, ಅದಲ್ಲದೆ, ಅವರು ತಮ್ಮ ಅಸಮಾಧಾನ ಮತ್ತು ಬಲವಾದ ಅಸಮ್ಮತಿಯನ್ನು ವ್ಯಕ್ತಪಡಿಸುತ್ತಿದ್ದರು ಮತ್ತು ಯಾವಾಗಲೂ ನಮಗೆ ನೋಡಿ!! ಅವರು ಇಂದು ನಿಮಗೆ ನಂಬಿಕೆಯ ಬೆಳಕನ್ನು ಪರಿಚಯಿಸಿದ್ದಾರೆ ಎಂದು ಸಲಹೆ ನೀಡುತ್ತಿದ್ದರು. ನಿಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಅವರನ್ನು ನಂಬಲು ಸಾಧ್ಯವಾಗಿದ್ದು ಇವರ ಕಾರಣದಿಂದಾಗಿ, ಇಲ್ಲದಿದ್ದರೆ ನೀವು ಅಜ್ಞಾನದಲ್ಲಿರುತ್ತೀರಿ. ಅದಕ್ಕಾಗಿಯೇ ಈ ಜನರು ನಿಮ್ಮ ಬಗ್ಗೆ ಮತ್ತು ನಿಮ್ಮ ತಲೆಮಾರುಗಳ ಬಗ್ಗೆ ದಯೆ ಹೊಂದಿದ್ದಾರೆ, ಆದ್ದರಿಂದ ಅಂತಹ ಕೆಲಸಗಳನ್ನು ಮಾಡಬೇಡಿ. ಆದಾಗ್ಯೂ, ಇದು ಅವರ ನೈತಿಕತೆಯಾಗಿತ್ತು.

ನಮ್ಮ ಮುಬಲ್ಲಿಗರಿಗೆ, ಹೊಸಬರಿಗೂ ಸಹ ಈಗ ಸ್ಥಳೀಯ ಜನರಿಗೆ ಮಾದರಿಯಾಗಲು ತಮ್ಮದೇ ಆದ ಉನ್ನತ ಗುಣಮಟ್ಟವನ್ನು ಹೊಂದಿಸಬೇಕು.

ಹಾಗೆಯೇ ದಿವಂಗತರಲ್ಲಿ ಅತಿಥಿ ಸತ್ಕಾರದ ಗುಣವೂ ಅಧಿಕವಾಗಿತ್ತು. ದಿವಂಗತರ ಎಲ್ಲ ಮಕ್ಕಳು ಯಾವುದಾದರೂ ವಿಧದಲ್ಲಿ ಜಮಾಅತಿನ ಸೇವೆ ಮಾಡುವ ಸೌಭಾಗ್ಯವನ್ನು ಪಡೆಯುತ್ತಿರುವರು.

ಅಲ್ಲಾಹನು ಅವರಿಗೆ ಮಗ್‌ಫಿರತ್ ಮತ್ತು ಕರುಣೆಯನ್ನು ತೋರಿಸಲಿ, ಅವರ ಶ್ರೇಣಿಯನ್ನು ಹೆಚ್ಚಿಸಲಿ ಮತ್ತು ಅವರ ಮಕ್ಕಳಿಗೆ ಅವರ ಮಾದರಿಯನ್ನು ಅನುಸರಿಸಲು ಅವಕಾಶವನ್ನು ನೀಡಲಿ.

...*...*...*...

*(ಪುಟ ಸಂಖ್ಯೆ 06ರ ಉಳಿದ ಭಾಗ)*

**ವ ನಹ್‌ನು ಬಿಸ್ಸಫ್‌ಹಿ ಬಿಸಫಾಲದನ್ನಖೀಲಿ**
**ಅಂಲ್ಲಾ ಅಖೂಮದ್ದಹ್‌ರ ಫೀಲ್ಕಯೂಲಿ**
**ಅರ್ಝಿಬ್ ಬಿಸ್ಸೈಫಿಲ್ಲಾಹಿ ವರ‍್ರಸೂಲಿ**

ಅಂದರೆ: ನಾವು ಸಫಾ ಸ್ಥಳದಲ್ಲಿಲ ತಾಳೆಮರದ ಬಳಿ ಇದ್ದಾಗ ನನ್ನ ಸ್ನೇಹಿತನು ವಾಗ್ದಾನ ಮಾಡಿದವನು ನಾನು, ಮತ್ತು ಆ ವಾಗ್ದಾನ ಎಂದರೆ ನಾನು ಸೈನ್ಯದ ಹಿಂದಿನ ಶ್ರೇಣಿಯಲ್ಲಿ ನಿಂತುಕೊಳ್ಳುವುದಲ್ಲ ಮತ್ತು ಅಲ್ಲಾಹ್ ಮತ್ತು ರಸೂಲ್(ಸ)ರ ಕತ್ತಿಯಿಂದ ಶತ್ರುಗಳೊಂದಿಗೆ ಹೋರಾಡುವುದಾಗಿದೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ)ರ ಖಡ್ಗವನ್ನು ಪಡೆಯಲು ಝುಬೇರ್(ರ) ಅತ್ಯಂತ ಹೆಚ್ಚು ಹಂಬಲಿಸಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಆ ಖಡ್ಗವನ್ನು ಅಬೂದುಜಾನ(ರ)ರಿಗೆ ನೀಡಿದಾಗ, ಅವರು ಆ ಖಡ್ಗದೊಂದಿಗೆ ಏನು ಮಾಡುವರು ಎಂದು ನೋಡಲು ಝುಬೇರ್(ರ) ನಿರ್ಧರಿಸಿದರು. ಹಝ್ರತ್ ಝುಬೇರ್(ರ) ಹೇಳುತ್ತಾರೆ: ಅಬೂದುಜಾನ(ರ) ಖಡ್ಗವನ್ನು ಎತ್ತಿ ಮುಶ್ರಿಕರ ಪಂಕ್ತಿಗಳಿಗೆ ನುಗ್ಗಿದರು ಮತ್ತು ಶತ್ರುಗಳನ್ನು ಕೊಲ್ಲುತ್ತಾ ಖುರೈಶಿನ ಮಹಿಳೆಯರು ನಿಂತಿದ್ದ ಸೈನ್ಯದ ಮತ್ತೊಂದು ತುದಿಗೆ ತಲುಪಿದರು.

ಅಬೂಸುಫ್‌ಯಾನಿನ ಪತ್ನಿಯಾದ ಹಿಂದ ಅವರ ಮುಂದೆ ಬಂದಳು ಮತ್ತು ಬಹಳ ಜೋರಾಗಿ ಬೊಬ್ಬೆ ಹೊಡೆದು ತಮ್ಮ ಪುರುಷರನ್ನು ಸಹಾಯಕ್ಕಾಗಿ ಕರೆದಳು. ಆದರೆ ಯಾರೂ ಸಹಾಯಕ್ಕಾಗಿ ಬರಲಿಲ್ಲ. ಅಬೂದುಜಾನ(ರ) ತನ್ನ ಖಡ್ಗವನ್ನು ತಗ್ಗಿಸಿದರು ಮತ್ತು ಅಲ್ಲಿಂದ ಹೊರಟು ಬಂದರು. ಇದರ ಬಗ್ಗೆ ಒಮ್ಮೆ ಝುಬೇರ್(ರ) ಕೇಳಿದಾಗ ಅವರು ಹೇಳಿದರು: ಹಝ್ರತ್ ಪೈಗಂಬರ್(ಸ)ರ ಖಡ್ಗವನ್ನು ಮಹಿಳೆಯೊಬ್ಬಳ ಮೇಲೆ ಚಲಾಯಿಸಲು ನನಗೆ ಮನಸ್ಸು ಬರಲಿಲ್ಲ. ಅದು ಕೂಡ ಯಾವನೇ ಪುರುಷನು ಸಂರಕ್ಷಕನಾಗಿ ಇರದ ಮಹಿಳೆಯ ಮೇಲೆ ಹಲ್ಲೆ ನಡೆಸಲು ನಾನು ಸಿದ್ಧನಾಗಿರಲಿಲ್ಲ. (ಸೀರತ್ ಖಾತಮನ್ನಬೀಈನ್, ಹಝ್ರತ್ ಸಾಹಬ್ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–48–490)

ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: ಸ್ತ್ರೀಗಳನ್ನು ಆದರಿಸಲು ಹಝ್ರತ್ ಪೈಗಂಬರ್(ಸ) ಸದಾ ಕಲಿಸುತ್ತಿದ್ದರು. ಆದ್ದರಿಂದ ಸತ್ಯನಿಷೇಧಿಗಳಾದ ಮಹಿಳೆಯರು ಬಹಳ ಧೈರ್ಯದಿಂದ ಮುಸ್ಲಿಮರಿಗೆ ಹಾನಿ ಉಂಟುಮಾಡಲು ಪ್ರಯತ್ನಿಸುತ್ತಿದ್ದರು. ಹೀಗಿದ್ದರೂ ಮುಸ್ಲಿಮರು ಅವುಗಳನ್ನು ಸಹಿಸುತ್ತಾ ಹೋಗುತ್ತಿದ್ದರು. ಒಟ್ಟಿನಲ್ಲಿ ಇವುಗಳಾಗಿವೆ ಇಸ್ಲಾಮಿನ ಯುದ್ಧ ನಿಯಮಗಳು. (ತಫ್ಸೀರ್ ಕಬೀರ್, ಸಂಪುಟ–2, ಪುಟ–421–422)

ಉಳಿದ ಭಾಗ ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು. ಇನ್‌ಶಾ ಅಲ್ಲಾಹ್.

ಫೆಲಸ್ತೀನಿಯರಿಗಾಗಿಯೂ ದುಆಗಳನ್ನು ಮಾಡುತ್ತಿರಿ. ದಿನೇ ದಿನೇ ದೌರ್ಜನ್ಯಗಳು ಮಿತಿಮೀರುತ್ತಾ ಹೋಗುತ್ತಿವೆ ಮತ್ತು ವರ್ಧಿಸುತ್ತಿವೆ. ಅಲ್ಲಾಹನು ಇನ್ನು ದೌರ್ಜನ್ಯಗಾರರನ್ನು ಹಿಡಿಗೂಡಲಿ. ಪೀಡಿತ ಫೆಲಸ್ತೀನಿಯರು ನಿಟ್ಟುಸಿರು ಬಿಡುವಂತಾಗಲಿ. ಮುಸ್ಲಿಮ್ ರಾಷ್ಟ್ರಗಳಿಗೂ ಬುದ್ಧಿ ಮತ್ತು ವಿವೇಕವನ್ನು ನೀಡಲಿ. ಅವರ ದನಿ ಒಂದಾಗಲಿ ಮತ್ತು ಅವರು ಮುಸ್ಲಿಂ ಸಹೋದರರ ಹಕ್ಕುಗಳನ್ನು ಈಡೇರಿಸಲು ಪ್ರಯತ್ನಿಸುವವರಾಗಲಿ.

...*...*...*...

*(ಸಂಪುಟ–3ರ ಪುಟ ಸಂಖ್ಯೆ 12ರ ಉಳಿದ ಭಾಗ)*

ಅವರ ಪತ್ನಿ ಬರೆಯುತ್ತಾರೆ ನಿಯಮಿತವಾಗಿ ನಮಾಝುಗಳನ್ನು ಹಾಗೂ ತಹಜ್ಜುದ್ ನಮಾಝ್ ಕಡ್ಡಾಯವಾಗಿ ನಿರ್ವಹಿಸುತ್ತಿದ್ದರು. ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಅಲ್ಲಾಹನು ಅವರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ ಮತ್ತು ಅವರ ಮಕ್ಕಳಿಗೆ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸುವ ಸಾಮರ್ಥ್ಯವನ್ನು ನೀಡಲಿ.

ಕೊನೆಯ ಉಲ್ಲೇಖವು ಅಮೆರಿಕಾದ ನಸೀಮಾ ಲಈಕ್ ಸಾಹಿಬಾ ಅವರದ್ದಾಗಿದೆ. ಅವರು ಮಕ್ರಮ್ ಸೈಯದ್ ಲಯೀಕ್ ಅಹ್ಮದ್ ಸಾಹಿಬ್ ಶಹೀದ್ ಮಾಡೆಲ್ ಟೌನ್ ಲಾಹೋರ್ ಅವರ ಪತ್ನಿಯಾಗಿದ್ದರು. ಕಳೆದ ಕೆಲ ದಿನಗಳ ಹಿಂದೆ ಅವರೂ ನಿಧನ ಹೊಂದಿದ್ದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್ ಅವರು ಭಾರತದ ಭಾಗಲ್ಪುರದಲ್ಲಿ ಜನಿಸಿದರು. ಅವರ ತಂದೆ ಅಬುಲ್ ಹಸನ್ ಸಾಹಿಬ್ ಅಹ್ಮದಿಯಾಗಿರಲಿಲ್ಲ ಮತ್ತು ಅವರ ತಾಯಿ ಅಮತುಲ್ ವರಾ ಸಾಹಿಬಾ ಅವರು ಸ್ವತಃ ಬೈಅತ್ ಮಾಡಿದ್ದರು ಮತ್ತು ಅಹ್ಮದಿಯತ್ತಿನಲ್ಲಿ ಸೇರಿದ್ದರು. ಆ ಕಾಲದಲ್ಲಿ, ಕನಿಷ್ಠ, ಮಹಿಳೆಯರು ಬೈಅತ್ ಮಾಡಿದರೆ, ಕೆಲವು ಪತಿಯರು ಅಂತಹ ಉದಾತ್ತ ವ್ಯಕ್ತಿಗಳಾಗಿದ್ದರು, ಅವರು ಮಹಿಳೆಯರನ್ನು, ಅವರ ಹೆಂಡತಿಯರನ್ನು ಒತ್ತಾಯಿಸಲಿಲ್ಲ, ಅವರು ಅಹ್ಮದೀಯರಾದರು. ಆದಾಗ್ಯೂ, ತಾಯಿಯು ಅಹ್ಮದಿ ಆಗಿದ್ದರು ಮತ್ತು ಅವರ ದೃಢವಾದ ನಂಬಿಕೆ ಮತ್ತು ಖಿಲಾಫತ್‌ನೊಂದಿಗಿನ ಬಲವಾದ ಸಂಪರ್ಕದಿಂದಾಗಿ, ಅವರು ಅಹ್ಮದಿ ಕುಟುಂಬದಲ್ಲಿ ತನ್ನ ಹೆಣ್ಣುಮಕ್ಕಳನ್ನು ಮದುವೆ ಮಾಡಿಸಿದರು. ಈ ಸಹೋದರಿಯರೆಲ್ಲರೂ ಅಹ್ಮದಿ ಆಗಿದ್ದಾರೆ.

ಅವರ ಮಗಳು ಹುಮೈರಾ ಸಾಹಿಬಾ ಅಮೆರಿಕಾದಲ್ಲಿ ವಾಸಿಸುತ್ತಿದ್ದಾರೆ. ಅವರು ಹೇಳುತ್ತಾರೆ ಇವರು ಜಮಾಅತ್ ಮತ್ತು ಖಿಲಾಫತ್‌ನೊಂದಿಗೆ ಸಂಪೂರ್ಣವಾಗಿ ಸಂಬಂಧ ಹೊಂದಿದ್ದರು. ಅವರು ತಮ್ಮ ಜೀವನವನ್ನು ಧಾರ್ಮಿಕ ಸೇವೆಗೆ ಮುಡಿಪಾಗಿಟ್ಟರು ಮತ್ತು ಜಮಾಅತ್‌ನ ನಿಜವಾದ ಪ್ರೀತಿ ಮತ್ತು ಮಾನವೀಯತೆಯನ್ನು ಪ್ರತಿಬಿಂಬಿಸಿದರು. ಅವರು ಸಹಾನುಭೂತಿಯಿಂದ ತುಂಬಿದ ಹೃದಯವನ್ನು ಹೊಂದಿದ್ದರು, ವಿಶೇಷವಾಗಿ ಹಿಂದುಳಿದವರಿಗಾಗಿ ಮತ್ತು ತನ್ನ ಸುತ್ತಲಿರುವವರ ಜೀವನದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲು ದಣಿವರಿಯಿಲ್ಲದೆ ಕೆಲಸ ಮಾಡಿದರು.

ನಿಝ್‌ಹತ್ ಸಾಹಿಬಾ ಅವರ ಇನ್ನೊರ್ವ ಪುತ್ರಿ ಆಗಿದ್ದಾರೆ. ಅವರು ಇಲ್ಲಿ ವಾಲ್ಸಾಲ್ ಯುಕೆ ನಲ್ಲಿ ವಾಸವಾಗಿದ್ದಾರೆ. ಅವರು ಹೇಳುತ್ತಾರೆ ಅವರು ತುಂಬಾ ಪ್ರಾಮಾಣಿಕರು, ಖಿಲಾಫತ್‌ಗೆ ನಿಷ್ಠೆ ಮತ್ತು ನಿಝಾಮ್ ಜಮಾಅತ್‌ಗೆ ಬದ್ಧರಾಗಿದ್ದರು. ಸತ್ಯವನ್ನು ಮಾತನಾಡುವ ಮತ್ತು ಅದರಿಂದ ಹಿಂದೆ ಸರಿಯದ ಅತ್ಯಂತ ನಿರ್ಭೀತ ಮಹಿಳೆಯಾಗಿದ್ದರು. ಅವರು ಕೆಟ್ಟ ಆಚರಣೆಗಳು ಮತ್ತು ನಾವೀನ್ಯತೆಗಳನ್ನು ಬಲವಾಗಿ ನಿರಾಕರಿಸಿದರು ಮತ್ತು ಅಹ್ಮದಿ ಮುಸ್ಲಿಂ ಎಲ್ಲಾ ರೀತಿಯ ನಾವೀನ್ಯತೆಗಳಿಂದ ದೂರವಿರಬೇಕೆಂದು ಯಾವಾಗಲೂ ತನ್ನ ಮಕ್ಕಳಿಗೆ ಸಲಹೆ ನೀಡುತ್ತಿದ್ದರು. ಇದು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅವರು ನಾಲ್ವರು ಪುತ್ರರು ಹಾಗೂ ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ. ಅವರ ಪುತ್ರರೊಬ್ಬರು ಅಮೆರಿಕದಲ್ಲಿ ವೈದ್ಯರಾಗಿದ್ದಾರೆ ಮತ್ತು ಅವರು ನಮ್ಮ ಪ್ರವಾಸದ ಸಮಯದಲ್ಲಿ ನಮ್ಮೊಂದಿಗೆ ಇರುತ್ತಾರೆ. ಅವರು ಮಹಾನ್ ಸೇವಾಕರ್ತರು. ಅಲ್ಲಾಹನು ದಿವಂಗತರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ ಮತ್ತು ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲು ಅವರ ಮಕ್ಕಳನ್ನು ತೌಫೀಖ್ ನೀಡಲಿ.

...*...*...*...

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.